ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಲಾಲ್ ಸಲಾಂ
ಕಾಂ. ಕನ್ನಿಪ್ಪೊಯಿಲ್ ಬಾಬು

ಸಂಪುಟ 12 | ಸಂಚಿಕೆ 21 | ಮೇ 21-27, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಜನಾದೇಶ ಬಿಜೆಪಿಗೆ ಇಲ್ಲ ಕುದುರೆ ವ್ಯಾಪಾರಕ್ಕೂ ಅಲ್ಲ






ಕರ್ನಾಟಕ ಜನಮತ 2018



ಬಂಗಾಳದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ



ರಾಜ್ಯಗಳ ಹಕ್ಕು ರಕ್ಷಿಸಲು ಪಕ್ಷ-ಬೇಧ ಅಡ್ಡಿಯಾಗಬಾರದು



ಗಾಜಾ ಗಡಿಯಲ್ಲಿ ಇಸ್ರೇಲಿ ಹತ್ಯಾಕಾಂಡ

ಮೋದಿ ಸರ್ಕಾರ 4 ವರ್ಷ: ಮೇ 23-24 ರಂದು ಹಲ್ಲಾಬೋಲ್ ರ್‍ಯಾಲಿ

ಬಿಜೆಪಿಯ ಈ 'ಕುದುರೆ ವ್ಯಾಪಾರ' ನಿಲ್ಲಿಸಿ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಇತ್ತೀಚೆಗೆ ಪೂರ್ಣಗೊಂಡ ಚುನಾವಣೆಗಳಲ್ಲಿ ಅಧಿಕೃತವಾಗಿ ಘೋಷಿಸಿದ ಫಲಿತಾಂಶಗಳು ಬಿಜೆಪಿಗೆ ಪೂರ್ಣ ಬಹುಮತ ಇಲ್ಲ ಎಂದು ತೋರಿಸಿರುವಾಗ ಅದಕ್ಕೆ ನಗ್ನ 'ಕುದುರೆ ವ್ಯಾಪಾರ'ದಲ್ಲಿ ತೊಡಗಲು ಮತ್ತು ಹಣಬಲದಿಂದ ಬಹುಮತವನ್ನು ಜಮಾಯಿಸಲು ಕಾಲಾವಕಾಶ ನೀಡಲಾಗುತ್ತಿದೆ ಎಂದು ಅದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಪ್ರಸಕ್ತ ಬಿಜೆಪಿ ಸರಕಾರದ ಅವಧಿಯಲ್ಲಿ ನೇಮಿಸಿರುವ ರಾಜ್ಯಪಾಲರುಗಳು, ಈ ಹಿಂದೆ ವಿಧಾನಸಭೆಯಲ್ಲಿ ಪಕ್ಷಗಳು ಮಾಡಿಕೊಂಡ ಚುನಾವಣೋತ್ತರ ಏರ್ಪಾಡಿನ ಆಧಾರದಲ್ಲಿ ಸರಕಾರದ ಪ್ರತಿಜ್ಞೆ ಸ್ವೀಕಾರ ಮಾಡಿಸುವ ಸೂತ್ರವನ್ನು ಅನುಸರಿಸಿದ್ದಾರೆ ಎಂದು ಸಿಪಿಐ(ಎಂ) ನೆನಪಿಸಿದೆ.

ಗೋವಾ ವಿಧಾನಸಭೆಗೆ ಮಾರ್ಚ್ 2017ರಲ್ಲಿ ನಡೆದ ಚುನಾವಣೆಗಳಲ್ಲಿ 40 ಸದಸ್ಯರಿರುವ ಸದನದಲ್ಲಿ ಕಾಂಗ್ರೆಸ್‌ಗೆ 17 ಸ್ಥಾನಗಳು ಸಿಕ್ಕಿದ್ದರೆ, ಬಿಜೆಪಿಗೆ 13 ಸ್ಥಾನಗಳು ಸಿಕ್ಕಿದವು. ಆದರೆ ಬಿಜೆಪಿಯನ್ನು ಅದು ಇತರ ಪಕ್ಷಗಳೊಂದಿಗೆ ಚುನಾವಣೆಯ ನಂತರ ಮೈತ್ರಿ ಮಾಡಿಕೊಂಡಾಗ ಸರಕಾರ ರಚಿಸಲು ಆಮಂತ್ರಿಸಲಾಯಿತು.

ಅದೇ ರೀತಿಯಲ್ಲಿ, 60 ಸದಸ್ಯರರುವ ಮಣಿಪುರ ವಿಧಾನ ಸಭೆಗೆ 2017ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ 28ರಲ್ಲಿ ಗೆದ್ದಿತ್ತು. ಬಿಜೆಪಿ 21 ಸೀಟುಗಳನ್ನು ಗೆದ್ದಿತ್ತು. ಆದರೆ ಬಿಜೆಪಿ ಮಾಡಿಕೊಂಡ ಚುನಾವಣೋತ್ತರ ಏರ್ಪಾಡಿನ ಆಧಾರದಲ್ಲಿ ಅದನ್ನು ಸರಕಾರ ರಚಿಸಲು ಆಹ್ವಾನಿಸಲಾಯಿತು.

ಮಾರ್ಚ್ 2018ರಲ್ಲಿ ಮೇಘಾಲಯ ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ 60ರಲ್ಲಿ 21 ಪಡೆದಿತ್ತು, ಬಿಜೆಪಿ ಪಡೆದದ್ದು 2 ಮಾತ್ರ. ಆದರೂ, ರಾಜ್ಯಪಾಲರು ಬಿಜೆಪಿಯನ್ನೇ ಒಂದು ಚುನಾವಣಾನಂತರದ ಏರ್ಪಾಡು ಬಹುಮತವನ್ನು ತೋರಿಸಿದೆ ಎಂಬ ಆಧಾರದಲ್ಲಿ ಸರಕಾರ ರಚಿಸಲು ಆಹ್ವಾನಿಸಿದರು.

ಕರ್ನಾಟಕದ ಪ್ರಸಕ್ತ ಉದಾಹರಣೆಯಲ್ಲಿ, ಕಾಂಗ್ರೆಸ್–ಜನತಾದಳ (ಜಾತ್ಯತೀತ) ಮೈತ್ರಿಕೂಟ 222 ಚುನಾಯಿತ ಶಾಸಕರಿರುವ ವಿಧಾನಸಭೆಯಲ್ಲಿ ಒಂದು ಸ್ಪಷ್ಟ ಬಹುಮತ ಪಡೆದಿದೆ. ಆದ್ದರಿಂದ ಮೇಲೆ ಹೇಳಿದ ರಾಜ್ಯ ಚುನಾವಣೆಗಳಲ್ಲಿ ಮಾಡಿದಂತೆ ಚುನಾವಣಾ ನಂತರದ ಮೈತ್ರಿಕೂಟ ಮುಖ್ಯಮಂತ್ರಿಯಾಗಿ ಸೂಚಿಸುವವರು ಪ್ರಮಾಣ ವಚನ ಸ್ವೀಕರಿಸಬೇಕು ಮತ್ತು ಅವರಿಗೆ ತಕ್ಷಣವೇ ಸುಪ್ರಿಂ ಕೋರ್ಟ್ ತೀರ್ಪುಗಳ ಪ್ರಕಾರ ಸದನದಲ್ಲಿ ಬಹುಮತ ಸಾಬೀತು ಪಡಿಸಲು ಹೇಳಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇದರಲ್ಲಿ ವಿಳಂಬ ಮಾಡುವುದೆಂದರೆ, ರಾಜ್ಯಪಾಲರ ಸಂವಿಧಾನಿಕ ಹುದ್ದೆಯನ್ನು ನಗ್ನ 'ಕುದುರೆ ವ್ಯಾಪಾರ'ಕ್ಕೆ ಸಮಯ ಖರೀದಿಸಲು ದುರುಪಯೋಗ ಪಡಿಸಲಾಗುತ್ತಿದೆ ಎಂದೇ ಅರ್ಥವಾಗುತ್ತದೆ, ಇದು ಪ್ರಜಾಪ್ರಭುತ್ವ–ವಿರೋಧಿ ಎಂಬುದು ಸುಸ್ಪಷ್ಟ ಎಂದು ಒತ್ತಿ ಹೇಳಿದೆ.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಗಾಝಾ ಗಡಿಯಲ್ಲಿ ಇಸ್ರೇಲಿ ಹತ್ಯಾಕಾಂಡ –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಗಾಝಾ–ಇಸ್ರೆಲ್ ಗಡಿ ಬೇಲಿಯಲ್ಲಿ ಇಸ್ರೇಲಿ ಸಶಸ್ತ್ರ ಪಡೆಗಳು ಮೇ 14ರಂದು 58 ಪ್ಯಾಲೆಸ್ತೀನಿಯನ್ನರ ಬಲಿ ತೆಗೆದುಕೊಂಡಿರುವ ಹತ್ಯಾಕಾಂಡದ ಬಗ್ಗೆ ಸಿಪಿಐ(ಎಂ) ತನ್ನ ಆಕ್ರೋಶ ಮತ್ತು ತೀವ್ರ ಖಂಡನೆಯನ್ನು ವ್ಯಕ್ತಪಡಿಸಿದೆ.

ಪ್ಯಾಲೆಸ್ತೀನಿಯನ್ನರು ಇಸ್ರೇಲಿನವರು ಒಕ್ಕಲೆಬ್ಬಿಸಿದ ತಮ್ಮ ಜಮೀನುಗಳಿಗೆ ವಾಪಾಸಾಗಲು ಬಿಡಬೇಕು ಎಂಬ ಆಗ್ರಹದೊಂದಿಗೆ ಗಡಿಯತ್ತ ಮೆರವಣಿಗೆಗಳನ್ನು ನಡೆಸುತ್ತಿದ್ದಾರೆ. ಆದಿನ ಅಮೆರಿಕ ಸಂಯುಕ್ತ ಸಂಸ್ಥಾನವು ಅಂತರ್ರಾಷ್ಟ್ರೀಯ ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘಿಸಿ ತನ್ನ ರಾಯಭಾರಿ ಕಚೇರಿಯನ್ನು ಜೆರುಸಲೇಂನಲ್ಲಿ ತೆರೆದಿರುವುದು ಇಸ್ರೇಲಿ ಪಡೆಗಳಿಗೆಈ ನಗ್ನ ದಾಳಿ ನಡೆಸಲು ಧೈರ್ಯ ತುಂಬಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಪ್ಯಾಲೆಸ್ತೀನಿಯನ್ನರ ಅಮಾನುಷ ಹತ್ಯಾಕಾಂಡವನ್ನು ಖಂಡಿಸಬೇಕು, ಮಾತ್ರವಲ್ಲ, ಗಂಭೀರ ಮಾನವ ಹಕ್ಕುಗಳ ಈ ಉಲ್ಲಂಘನೆಗಳಿಗೆ ಅದರ ವಿರುದ್ಧ ಕ್ರಮ ಕೈಗೊಳ್ಳಬೇಕು, ವಿಶ್ವಸಂಸ್ಥೆಯ ಭದ್ರತಾ ಸಮಿತಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಲಿಂಗ ಆಯ್ಕೆಯನ್ನು ಎತ್ತಿ ಹಿಡಿಯುವ ಆಯುಷ್ ಉಪಕುಲಪತಿಗಳ ಮೇಲೆ ಕಠಿಣ ಕ್ರಮ: ಎಐಡಿಡಬ್ಲ್ಯುಎ ಆಗ್ರಹ

ಹರ್ಯಾಣದ ಕುರುಕ್ಷೇತ್ರದಲ್ಲಿರುವ ಆಯುಷ್(ಆಯುರ್ವೇದ ಯೋಗ ಪ್ರಕೃತಿ ಯುನಾನಿ ಸಿದ್ಧ ಹೊಮಿಯೊಪಥಿ)ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಲದೇವ ಕುಮಾರ್ ಧೀಮನ್ 'ನಾರದ ಮುನಿ ಜಯಂತಿ' ಆಚರಣೆಯಲ್ಲಿ ಮಾತಾಡುತ್ತ ಆಯುರ್ವೇದ ಗರ್ಭಧಾರಣೆಯ ಮೊದಲೇ ಲಿಂಗ ಆಯ್ಕೆಗೆ ನೆರವಾಗಬಲ್ಲದು ಎಂದು ಹೇಳಿ ವಿವಾದಕ್ಕೀಡಾಗಿದ್ದಾರೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಇದನ್ನು ಬಲವಾಗಿ ಖಂಡಿಸಿದೆ. ಇದು ಸಂಪೂರ್ಣ ಅವೈಜ್ಞಾನಿಕ ಮನೋಭಾವವನ್ನು ಪ್ರದರ್ಶಿಸುತ್ತದೆ, ಮಾತ್ರವಲ್ಲ, ಲಿಂಗ ಆಯ್ಕೆಯನ್ನು ಕಾನೂನುಬಾಹಿರಗೊಳಿಸಿರುವ ಪಿಸಿಪಿಎನ್‌ಡಿಟಿ(ಗರ್ಭ–ಪೂರ್ವ ಜನ್ಮಪೂರ್ವ ಪರೀಕ್ಷಣಾ ತಂತ್ರಜ್ಞಾನ) ಕಾಯ್ದೆಯ ಉಲ್ಲಂಘನೆಯೂ ಆಗಿದೆ. ಲಿಂಗ ಆಯ್ಕೆಯತ್ತ ಸಾಗುವ ಯಾವುದೇ ವಿಧಾನದ ಜಾಹೀರಾತು ಅಥವ ಅದನ್ನು ಪ್ರೋತ್ಸಾಹಿಸುವುದು ಕೂಡ ಕಾನೂನುಬಾಹಿರ. ಆದ್ದರಿಂದ ಅವರ ವಿರುದ್ಧ ಕೇಸ್ ದಾಖಲಿಸಬೇಕು ಮತ್ತು ಅವರ ಹುದ್ದೆಯಿಂದ ಅವರನ್ನು ಸರಕಾರ ವಜಾ ಮಾಡಬೇಕು ಎಂದು ಆಗ್ರಹಿಸಿದೆ.

ಆಯುರ್ವೇದ ಔಷಧಿ ಗರ್ಭಧಾರಣೆಯ ಮೊದಲೇ ಮಗುವಿನ ಲಿಂಗವನ್ನು ಆರಿಸಿಕೊಳ್ಳುವಲ್ಲಿ ಅಪೇಕ್ಷಿತ ಫಲಿತಾಂಶಗಳನ್ನು ನೀಡುವ ಪರ್ಯಾಯ ತಂತ್ರ ವಿಧಾನಗಳನ್ನು ಒದಗಿಸುತ್ತದೆ ಎಂಬ ದಂಗುಬಡಿಸುವ ದಾವೆಯನ್ನು ಈ ಉಪಕುಲಪತಿಗಳು ಮುಂದಿಟ್ಟರು ಎಂದು ವರದಿಯಾಗಿದೆ. ಇದರಲ್ಲಿ ಆಹಾರ ಕುರಿತ ಮತ್ತು ದೈಹಿಕ ನಿಯಮಗಳು, ಹಾಗೂ ಪ್ರಾಚೀನ ಗ್ರಂಥಗಳಲ್ಲಿ ವಿಧಿಸಿರುವ ಸೂಕ್ತ ಸೂಚನೆಗಳ ಆಚರಣೆ ಇರುವಂತೆ ಕಾಣುತ್ತದೆ. ಉಪಕುಲಪತಿಗಳು ಸ್ವತಃ 'ಅಪೇಕ್ಷಿತ' ಫಲಿತಾಂಶಗಳನ್ನು ಪಡೆಯಲು, ಆಮೂಲಕ ಮಗನನ್ನು ಪಡೆಯಲು ಗರ್ಭಧಾರಣೆಯ ಮೊದಲಿನ ತಂತ್ರವಿಧಾನಗಳನ್ನು ಎತ್ತಿ ಹಿಡಿದಿದ್ದಾರೆ ಎಂಬ ಬಗ್ಗೆ ಇಲ್ಲಿ ಸಂದೇಹವಿಲ್ಲ. ಹೆಣ್ಣು ಮಗುವಿಗಿಂತ ಗಂಡು ಮಗು ಪಡೆಯುವುದನ್ನು ಆದರ್ಶೀಕರಿಸುವ ಆಳವಾಗಿ ಬೇರೂರಿದ ಆರೆಸ್ಸೆಸ್ ತತ್ವ ಇಲ್ಲಿ ಬಹಿರಂಗಗೊಂಡಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಹರ್ಯಾಣದಲ್ಲಿನ ಬಿಜೆಪಿ ಸರಕಾರ ಪಿಸಿಪಿಎನ್‌ಡಿಟಿ ಕಾಯ್ದೆಯ ಪರಿಣಾಮಕಾರಿ ಜಾರಿಯ ಮತ್ತು ಇತರ ಕ್ರಮಗಳ ಮೂಲಕ ರಾಜ್ಯದಲ್ಲಿ ಲಿಂಗ ಅಸಮತೋಲನವನ್ನು ಕಡಿಮೆ ಮಾಡಲಾಗಿದೆ ಎಂದು ಹೇಳಿಕೊಳ್ಳುತ್ತಿರುವಾಗ ಪ್ರತಿಷ್ಠಿತ ಉಪಕುಲಪತಿಗಳು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಹಗುರವಾಗಿ ತಗೊಳ್ಳಲು ಸಾಧ್ಯವಿಲ್ಲ ಎಂದಿರುವ ಎಐಡಿಡಬ್ಲ್ಯುಎ ಶ್ರೀ ಧೀಮನ್ ವಿರುದ್ಧ ಅವರ ಮಹಿಳಾ–ವಿರೋಧಿ ಮನೋಭಾವ ಮತ್ತು ಕಾಯ್ದೆಯ ಉಲ್ಲಂಘನೆಗಾಗಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಅವರನ್ನು ತಕ್ಷಣವೇ ಆ ಹುದ್ದೆಯಿಂದ ತೆಗೆದು ಹಾಕಬೇಕು ಎಂದು ಎಐಡಿಡಬ್ಲ್ಯುಎ ಹೇಳಿದೆ.

ಪಶ್ಚಿಮ ಬಂಗಾಲ ಪಂಚಾಯತ್ ಚುನಾವಣೆಯಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ

–ಸೀತಾರಾಮ್ ಯೆಚುರಿ

ಟಿಎಂಸಿ ಹಿಂಸಾಚಾರದೊಂದಿಗೇ ಆರಂಭವಾದ ಪಶ್ಚಿಮ ಬಂಗಾಲದ ಪಂಚಾಯತ್ ಚುನಾವಣೆಗಳ ಪ್ರಕ್ರಿಯೆ ಮತದಾನದ ದಿನವಾದ ಮೇ 14ರಂದು ವ್ಯಾಪಕ ಹಿಂಸಾಚಾರವನ್ನು ಕಂಡಿತು. ಅಂದು ಮಧ್ಯಾಹ್ನ 2 ಗಂಟೆಯ ವೇಳೆಗೇ ಇದಕ್ಕೆ ಬಲಿಯಾದವರ ಸಂಖ್ಯೆ 8, ಅದು ಈಗ 20ಕ್ಕೇರಿದೆ ಎಂದು ವರದಿಯಾಗಿದೆ(ಪುಟ 14 ನೋಡಿ).

ಈ ಕುರಿತು ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪಂಚಾಯತುಗಳಲ್ಲಿ ನೂರಕ್ಕೆ ನೂರನ್ನು ವಶಪಡಿಸಿಕೊಳ್ಳಬೇಕೆಂಬ ಟಿಎಂಸಿ ಪ್ರಾಜೆಕ್ಟ್ ಈಡೇರಿಸಿಕೊಳ್ಳಲು ನಡೆಸಿರುವ ಬರ್ಬರತೆಯನ್ನು ಎಷ್ಟು ಬಲವಾಗಿ ಖಂಡಿಸಿದರೂ ಕಡಿಮೆಯೇ ಎಂದು ಹೇಳಿದರು. 34ಶೇಕಡಾ ಸ್ಥಾನಗಳನ್ನು ಸ್ಪರ್ಧೆಯೇ ನಡೆಯಲು ಬಿಡದೆ ಬಲವಂತದಿಂದ ವಶಪಡಿಸಿಕೊಂಡ ನಂತರವೂ ಉಳಿದೆಲ್ಲ ಸ್ಥಾನಗಳನ್ನೂ ವಶಪಡಿಸಿಕೊಳ್ಳಲು ಇಂತಹ ಹೀನ ಕೃತ್ಯಗಳಿಗೆ ಇಳಿದಿದ್ದಾರೆ. ದಕ್ಷಿಣ 24 ಪರಗಣ ಜಿಲ್ಲೆಯ ಬುದಖಲಿಯಲ್ಲಿ ದೇಬುದಾಸ್ ಮತ್ತು ಆತನ ಪತ್ನಿ ಉಷಾದಾಸ್ ಅವರನ್ನು ಜೀವಂತ ಸುಟ್ಟು ಹಾಕಿದ ಭೀಕರ ಘಟನೆ ವರದಿಯಾಗಿದೆ. ಎಡಪಕ್ಷಗಳ ಇನ್ನೂ ಹಲವು ಅಭ್ಯರ್ಥಿಗಳು ಮತ್ತು ಕಾರ್ಯಕರ್ತರು ಪ್ರಾಣ ಕಳಕೊಂಡಿದ್ದಾರೆ. ಅಪಹರಣ, ಬೆಂಕಿ ಹಚ್ಚುವುದು ಎಗ್ಗಿಲ್ಲದೆ ನಡೆದಿದೆ. ಪೋಲೀಸರೂ ಈ ಕೃತ್ಯಗಳಲ್ಲಿ ಗೂಂಡಾಗಳೊಂದಿಗೆ ಶಾಮೀಲಾಗಿದ್ದಾರೆ ಎಂದು ಯೆಚುರಿ ಹೇಳಿದರು

ಹಿಂಸಾಚಾರದ ಪ್ರಮಾಣವನ್ನು ನೋಡಿದರೆ ಮುಕ್ತ ಮತ್ತು ನ್ಯಾಯಯುತ ಚುನಾವಣೆ ಇಲ್ಲಿ ಅಸಾಧ್ಯ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಕೊಲ್ಕತಾ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್ ಕೂಡ ಈ ಪ್ರಕ್ರಿಯೆಯ ಬಗ್ಗೆ ಖಾರವಾಗಿ ಮಾತಾಡಿವೆ. ಆದರೂ ಭದ್ರತಾ ವ್ಯವಸ್ಥೆ ಏರ್ಪಡಿಸಬೇಕಾದವರು ನ್ಯಾಯಾಂಗದ ನಿರ್ದಿಷ್ಟ ನಿರ್ದೇಶನಗಳಲ್ಲಿ ಯಾವುದನ್ನೂ ಪಾಲಿಸಿಲ್ಲ ಎಂದ ಯೆಚುರಿ ರಾಜ್ಯ ಚುನಾವಣಾ ಆಯೋಗದ



ಪಾತ್ರ ಕೂಡ ಇದರಲ್ಲಿ ಅಸಹ್ಯಕರವಾದದ್ದು ಎಂದು ಬೇಸರ ವ್ಯಕ್ತಪಡಿಸಿದರು. ಟಿಎಂಸಿ, ರಾಜ್ಯ ಸರಕಾರ ಮತ್ತು ಚುನಾವಣಾ ಆಯೋಗದ ನಡುವಿನ ವ್ಯತ್ಯಾಸವನ್ನು ಸಂಪೂರ್ಣವಾಗಿ ಅಳಿಸಿ ಹಾಕಲಾಗಿದೆ ಎಂದು ಅವರು ಟೀಕಿಸಿದರು.

ಈ ಹಿಂಸಾಚಾರದ ಸ್ವರೂಪ ಮತ್ತು ಹರಹನ್ನು ನೋಡಿದರೆ ಟಿಎಂಸಿ ಸಂಪೂರ್ಣವಾಗಿ ಮೂಲೆಗೊತ್ತಲ್ಪಟ್ಟಿದೆ ಎಂಬ ಸಂಗತಿ ಬಯಲಿಗೆ ಬಂದಿರುವುದು ಸ್ಪಷ್ಟವಾಗುತ್ತದೆ. ತಮ್ಮ ಆಧಿಪತ್ಯವನ್ನು ಉಳಿಸಿಕೊಳ್ಳಲು ಇಂತಹ ಹೀನ ವಿಧಾನಗಳಿಂದಲ್ಲದೆ ಬೇರೆ ರೀತಿಗಳಲ್ಲಿ ಸಾಧ್ಯವಿಲ್ಲ ಎಂದು ಕಂಡು ಬಂದುದರಿಂದ ಅವರು ಈ ಹಿಂಸಾಚಾರ ನಡೆಸುತ್ತಿದ್ದಾರೆ. ಕಾರ್ಮೋಡದಲ್ಲಿನ ಒಂದು ಬೆಳ್ಳಿಗೆರೆ ಎಂದರೆ ಈ ಸರ್ವವ್ಯಾಪಿ ಹಿಂಸಾಚಾರ, ಹೆದರಿಕೆ–ಬೆದರಿಕೆಗಳನ್ನೂ ಲೆಕ್ಕಿಸದೆ ಜನಗಳೇ ಸ್ವಯಂಸ್ಫೂರ್ತಿಯಿಂದ ಪ್ರತಿರೋಧ ಒಡ್ಡುತ್ತಿದ್ದಾರೆ ಎಂಬ ಗಮನಾರ್ಹ ಸುದ್ದಿಗಳು ಬರುತ್ತಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಯೆಚುರಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಇಂತಹ ಪ್ರತಿರೋಧ ಮತ್ತು ಪ್ರತಿಭಟನೆಯ ಮುಂಚೂಣಿಯಲ್ಲಿದ್ದಾವೆ ಎಂದು ಹೇಳಿದರು.

ಟಿಎಂಸಿ ಈ ರೀತಿ ಹಿಂಸಾಚಾರ ಮತ್ತು ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿರುವುದರ ವಿರುದ್ಧ ಮತ್ತು ಟಿಎಂಸಿಯಿಂದ ಪ್ರಜಾಪ್ರಪ್ರಭುತ್ವದ ಕೊಲೆಯ ವಿರುದ್ಧ ದೇಶದ ಎಲ್ಲ ಶಾಂತಿಪ್ರಿಯ ಮತ್ತು ಪ್ರಜಾಪ್ರಭುತ್ವ–ಪ್ರಿಯ ಜನತೆ ತಮ್ಮ ದನಿಯೆತ್ತಬೇಕು ಎಂದು ನಾವು ಮನವಿ ಮಾಡಿಕೊಳ್ಳುತ್ತೇವೆ ಎನ್ನುತ್ತ ಯೆಚುರಿಯವರು ಪ್ರಜಾಪ್ರಭುತ್ವದ ಮತ್ತು ಜನತೆಯ ಮತದಾನದ ಹಕ್ಕಿನ ಕಗ್ಗೊಲೆಯ ವಿರುದ್ಧ ತುರ್ತಾಗಿ ಪಕ್ಷದ ಎಲ್ಲ ಘಟಕಗಳು ಪ್ರತಿಭಟನೆಗಳನ್ನು ನಡೆಸಬೇಕು, ಜನಗಳನ್ನು ಅಣಿನೆರೆಸಿ ವ್ಯಾಪಕ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಆಗ್ರಹಿಸಿದರು.

ನೆರೆದಿದ್ದ ಪತ್ರಕರ್ತರಿಗೆ ಪಶ್ಚಿಮ ಬಂಗಾಲದಲ್ಲಿ ಪಂಚಾಯತು ಚುನಾವಣೆಯ ಪ್ರಕ್ರಿಯೆಯಲ್ಲಿ ನಡೆಸಿರುವ ಹಿಂಸಾಚಾರದ ಪಟ್ಟಿಯನ್ನೂ ನೀಡಲಾಯಿತು.

ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಎದ್ದು ನಿಲ್ಲಬೇಕಾದ ಸಮಯ–ಎಐಎಡಬ್ಲ್ಯುಯು

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಪಶ್ಚಿಮ ಬಂಗಾಲದಲ್ಲಿ ಟಿಎಂಸಿಯ ಕೊಲೆಗಡುಕ ಗ್ಯಾಂಗ್‌ಗಳು ಅಮನುಷ ಕೊಲೆಗಳು, ಗ್ರಾಮೀಣ ಪ್ರಜಾಪ್ರಭುತ್ವದ ಸಂಸ್ಥೆಗಳ ನಾಶ ಮತ್ತು ಬದುಕಿನ ಹಕ್ಕಿನ ಮೇಲೆ ದಾಳಿಗಳನ್ನು ನಡೆಸುತ್ತಿವೆ ಎನ್ನುತ್ತ , ಬಡವರ ಹಕ್ಕುಗಳನ್ನು ಮುಗಿಸಲು ಹೊರಟಿರುವ ಈ ಮಂದಿಗೆ ಪ್ರಭುತ್ವಯಂತ್ರದ ಬೆಂಬಲವೂ ಇದೆ ಎಂದು ಬಲವಾಗಿ ಖಂಡಿಸಿದೆ.

ಕೃಷಿ ಕೂಲಿಕಾರರು, ಗ್ರಾಮೀಣ ಬಡವರು, ರೈತರು, ವಿದ್ಯಾರ್ಥಿಗಳು, ಸಣ್ಣ ವ್ಯಾಪಾರಿಗಳಲ್ಲಿ ಭಯ ಹುಟ್ಟಿಸುವ ತಂತ್ರಗಳನ್ನು ಟಿಎಂಸಿ ಕೂಡ, ಅತ್ತ ಬಿಜೆಪಿ ತನ್ನ ಶಾಸಕರು, ಎಂಪಿಗಳು, ಮಂತ್ರಿಗಳ ನೇತೃತ್ವದಲ್ಲಿ ಹರ್ಯಾಣದ ಗುರ್‌ಗಾಂವ್ ಮತ್ತು ಬಹದ್ದೂರ್‌ಗಡ್, ರಾಜಸ್ತಾನದ ಅಲ್ವರ್, ಉತ್ತರಪ್ರದೇಶದ ಉನ್ನಾವ್, ಎಎಂಯು, ಜಮ್ಮು–ಕಾಶ್ಮೀರದ ಕಠುವ, ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ಬಳಸುತ್ತಿರುವಂತೆ, ಪಶ್ಚಿಮ ಬಂಗಾಲದಲ್ಲಿ ಬಳಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಎಐಎಡಬ್ಲ್ಯುಯು ಹೇಳಿದೆ.

ದೇಶಾದ್ಯಂತ ಕಾನೂನುಹೀನತೆ ಹೆಚ್ಚುತ್ತಿರುವಾಗ ಅಧಿಕಾರದಲ್ಲಿರುವ ಪಕ್ಷಗಳು ಜನಸಾಮಾನ್ಯರ ಕಾಳಜಿಗಳ ಪರಿವೆಯೇ ಇಲ್ಲದೆ ಉಲ್ಲಂಘಿಸುತ್ತಿರುವ ನಮ್ಮ ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಎದ್ದು ನಿಲ್ಲಬೇಕಾದ ಸಮಯ ಇದು ಎಂದು ಎಐಎಡಬ್ಲ್ಯುಯು ಹೇಳಿದೆ.

ಸಂಪಾದಕೀಯ

ಜನಾದೇಶ ಬಿಜೆಪಿಗೂ ಇಲ್ಲ, ಕುದುರೆ ವ್ಯಾಪಾರಕ್ಕೂ ಅಲ್ಲ

ಕರ್ನಾಟಕ ಜನತೆ ಮೇ 12ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸನ್ನು ತಿರಸ್ಕರಿಸಿದ್ದಾರೆ. ಬಿಜೆಪಿಯನ್ನು ಪುರಸ್ಕರಿಸಿಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿ-ಎಸ್ - ಇವುಗಳಲ್ಲಿ ಯಾವ ಪಕ್ಷಕ್ಕೂ ಜನಾದೇಶ ನೀಡಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಎರಡು ಪಕ್ಷಗಳ ಮೈತ್ರಿಕೂಟಕ್ಕೇನೇ ಜನಾದೇಶ ಇರುವುದು. ಇದು ಸೀಟುಗಳಿಕೆ ಮತ್ತು ಶೇಕಡಾ ಮತಗಳಿಕೆಯನ್ನು ವಿಶ್ಲೇಷಿಸಿದರೆ ಸ್ಪಷ್ಟವಿದೆ. ಕಾಂಗ್ರೆಸ್ ಮತ್ತು ಜೆಡಿ-ಎಸ್ ಪಕ್ಷಗಳು ಕೂಟ ರಚಿಸಿ ಕೋಮುವಾದಿ-ಅಧಿಕಾರಶಾಹಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಆಶ್ಚರ್ಯಕರ ರೀತಿಯಲ್ಲಿ ವೇಗವಾಗಿ ಕ್ರಮ ಕೈಗೊಂಡದ್ದು ಸ್ವಾಗತಾರ್ಹ. ಇದು ಅನೈತಿಕ, ಅಭದ್ರ ಎಂದೆಲ್ಲ ಬಿಜೆಪಿ ಮತ್ತು ಅದರ ಬಾಲಬಡುಕ ಮಾಧ್ಯಮಗಳು ಹುಯಿಲೆಬ್ಬಿಸುತ್ತಿವೆ. (ಈ ಸಂಚಿಕೆಯಲ್ಲಿ ಲೇಖನವೊಂದರಲ್ಲಿ ಈ ಬಗ್ಗೆ ವಿವರವಾದ ವಿಶ್ಲೇಷಣೆ ಇದೆ). ಸೀಟುಗಳಲ್ಲೂ ಮತಗಳಿಕೆಯಲ್ಲೂ ಸ್ಪಷ್ಟ ಬಹುಮತವಿರುವ ಕಾಂಗ್ರೆಸ್-ಜೆಡಿ(ಎಸ್) ಕೂಟವನ್ನು ರಾಜ್ಯಪಾಲರು ಸರಕಾರ ರಚನೆಗೆ ಆಹ್ವಾನಿಸದೆ, ಬಿಜೆಪಿ ಯನ್ನು ಆಹ್ವಾನಿಸಿರುವುದು ಸಂವಿಧಾನದ ಉಲ್ಲಂಘನೆ ಮತ್ತು ಅವರ ಅಧಿಕಾರದ ದುರುಪಯೋಗ. ಮೂರು ಪಕ್ಷಗಳು ಹಾಗೂ ಎರಡು ಮಾತ್ರ ಪಕ್ಷೇತರರು ಇರುವ ಇಂದಿನ ಸ್ಥಿತಿಯಲ್ಲಿ ಇದು 'ಆಪರೇಶನ್ ಕಮಲ-2'ಕ್ಕೆ ಹಾಗೂ ಕುದುರೆ ವ್ಯಾಪಾರಕ್ಕೆ ಆಹ್ವಾನ ಕೊಟ್ಟಂತೆ. ಅದರಲ್ಲೂ ಬಿಜೆಪಿ ನಾಯಕ ಯೆಡಿಯೂರಪ್ಪನವರು ಒಂದು ವಾರ ಕಾಲಾವಕಾಶ ಕೇಳಿದರೆ, ಎರಡು ವಾರ ಕಾಲಾವಕಾಶ ಕೊಡುವುದು ಅಧಿಕಾರದ ದುರುಪಯೋಗದ ಪರಮಾವಧಿ. ಮೇ 18ರಂದು ಬೆಳಿಗ್ಗೆ ಅವಸರದಲ್ಲಿ ಯೆಡಿಯೂರಪ್ಪನವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಸಹ ನಡೆಯಿತು. ರಾಜ್ಯಪಾಲರ ಘನತೆಗೆ ಕುಂದು ತರುವ ಇನ್ನೂ ಹಲವು ಎಡವಟ್ಟುಗಳು ನಡೆದವು.

ಪ್ರಮಾಣ ವಚನ ಸಮಾರಂಭಕ್ಕೆ ಅವಕಾಶ ನೀಡಕೂಡದು ಎಂದು ಕೋರಿ ಕಾಂಗ್ರೆಸ್-ಜೆಡಿಎಸ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಡೆಸಿದ ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠ, ಶನಿವಾರ (ಮೇ 19) ಸಂಜೆ 4ಕ್ಕೆ ವಿಶ್ವಾಸಮತ ಸಾಬೀತುಪಡಿಸುವಂತೆ ಆದೇಶಿಸಿರುವುದು ಸ್ವಾಗತಾರ್ಹ ಕ್ರಮ. ವಿಚಾರಣೆ ಆರಂಭದಲ್ಲಿ, ಕರ್ನಾಟಕದ ರಾಜ್ಯಪಾಲರು ಯಾವ ಆಧಾರದ ಮೇಲೆ ಬಿಜೆಪಿಗೆ ಸರ್ಕಾರ ರಚಿಸಲು ಅವಕಾಶ ಕೊಟ್ಟರು? ಎಂದು ಸುಪ್ರಿಂ ಕೋರ್ಟ್ ನ್ಯಾಯಾಧೀಶರು ಪ್ರಶ್ನಿಸಿದರು. ಸರ್ಕಾರ ರಚನೆಗೆ ಅವಕಾಶ ಕೋರಿ ರಾಜ್ಯಪಾಲರಿಗೆ ಯಡಿಯೂರಪ್ಪ ಬರೆದಿದ್ದ ಎರಡು ಪತ್ರಗಳನ್ನು ಬಿಜೆಪಿ ಪರ ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಿದರು. 'ನಾಳೆಯೇ ವಿಶ್ವಾಸಮತ ಯಾಚನೆಗೆ ಸಿದ್ಧ' ಎಂದು ಜೆಡಿಎಸ್- ಕಾಂಗ್ರೆಸ್ ಪರ ವಕೀಲರು ಸುಪ್ರಿಂ ಕೋರ್ಟಿಗೆ ತಿಳಿಸಿದರು. ಇದಾದ ಬಳಿಕ, 'ವಿಶ್ವಾಸಮತ ಸಾಬೀತುಪಡಿಸಲು ನಾವೂ ಸಿದ್ಧ' ಎಂದು ಬಿಜೆಪಿ ಪರ ವಕೀಲರು ತಿಳಿಸಿದರು. ಎಲ್ಲ ಶಾಸಕರೂ ಸದನದಲ್ಲಿ ಹಾಜರಿರಬೇಕು. ಸೂಕ್ತ ಭದ್ರತೆಗೆ ವ್ಯವಸ್ಥೆ ಮಾಡಲು ಡಿಜಿಪಿಗೆ ಸೂಚನೆ ನೀಡಿ ಪೀಠ ಆದೇಶಿಸಿದೆ. ಬಹುಮತ ಸಾಬೀತು ವೇಳೆ ವಿಡಿಯೊ ಚಿತ್ರೀಕರಣಕ್ಕೆ ಮಾಧ್ಯಮಗಳಿಗೆ ಅವಕಾಶ ಬೇಡ ಎಂದು ಪೀಠ ಹೇಳಿತು. ಶನಿವಾರ ಸಂಜೆ 4ಕ್ಕೆ ಬಹುಮತ ಸಾಬೀತಿಗೆ ಪೀಠ ಸಮಯ ನಿಗದಿ ಮಾಡಿತು. 'ವಿಶ್ವಾಸಮತ ಸಾಬೀತು ಪಡಿಸುವವರೆಗೆ ಯಡಿಯೂರಪ್ಪ ಅವರು ಯಾವುದೇ ಆಡಳಿತಾತ್ಮಕ ತೀರ್ಮಾನ ತೆಗೆದುಕೊಳ್ಳುವಂತಿಲ್ಲ. ಆಂಗ್ಲೊ-ಇಂಡಿಯನ್ ಸದಸ್ಯರ ನೇಮಕ ಸದ್ಯಕ್ಕೆ ಬೇಡ' ಎಂದು ಪೀಠ ಸೂಚಿಸಿತು.

ಈ ನಡುವೆ ರಾಜ್ಯಪಾಲರು ಕೊಟ್ಟ ಅವಕಾಶವನ್ನು ಬಳಸಿಕೊಂಡು ಬಿಜೆಪಿ 'ಆಪರೇಶನ್ ಕಮಲ-2' ಆರಂಭಿಸಿದೆ. ಗಣಿ ಧಣಿ ರೆಡ್ಡಿ ಸಹೋದರರು ಆಪರೇಶನಿಗೆ ಇಳಿದಿದ್ದಾರೆ. ಕಾಂಗ್ರೆಸ್-ಜೆಡಿ(ಎಸ್) ಸದಸ್ಯರಿಗೆ ಅವರ ಕುಟುಂಬ ಸಿಬ್ಬಂದಿಗೆ ಆಮಿಷ, ಇಡಿ-ಐಟಿ ಬೆದರಿಕೆಗಳು ಬಂದಿವೆ. ಶಾಸಕರಿಗೆ 100 ಕೋಟಿ ರೂ. ಮತ್ತು ಮಂತ್ರಿ ಪದವಿ ಆಫರ್ ಕೊಡಲಾಗಿದೆ. ಒಬ್ಬ ಶಾಸಕನನ್ನು ಅಪಹರಿಸಿ ದೆಹಲಿಗೆ ಒಯ್ಯಲಾಗಿದೆ, ಎಂದು ಕೂಟದ ನಾಯಕರು ಆಪಾದಿಸಿದ್ದಾರೆ. ಇದನ್ನು ತಡೆಯಲು ಕೂಟದ ಶಾಸಕರನ್ನು ಮೊದಲು ಬೆಂಗಳೂರು ಆ ಮೇಲೆ ಹೈದರಾಬಾದಿನ ಹೊಟೆಲು ಮತ್ತು ರೆಸಾರ್ಟುಗಳಲ್ಲಿ ಇರಿಸಲಾಗಿದೆ. ನಾಯಕರು ಅವರ ಭದ್ರತೆಗೆ ಎಂದು ಹೇಳಿದರೂ ಅವರಿಗೇ ಶಾಸಕರ ಬದ್ಧತೆ ಬಗ್ಗೆ ಪೂರ್ಣ ನಂಬಿಕೆ ಇಲ್ಲವೆಂಬುದು ಸ್ಪಷ್ಟ. ಅಂತಹ ಬದ್ಧತೆ ಇದ್ದರೆ ಬಿಜೆಪಿಗೆ ಕುದುರೆ ವ್ಯಾಪಾರಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಕೆಲವು ಶಾಸಕರನ್ನು ಗೈರಾಗುವಂತೆ ಮಾಡುವ, ಇನ್ನೂ ಕೆಲವರನ್ನು ಕ್ರಾಸ್-ವೋಟಿಂಗ್ ಮಾಡಿಸುವ ತಂತ್ರವನ್ನು ಬಿಜೆಪಿ ಹೆಣೆದಿದೆ ಎನ್ನಲಾಗಿದೆ. ಬಿಜೆಪಿಗೆ ಬಹುಮತ ಸಿದ್ಧ ಪಡಿಸಲು 10-12 ಶಾಸಕರ ಜತೆ ಡೀಲ್ ಮಾಡುವ ಅಗತ್ಯವಿದೆ. ಕುದುರೆ ವ್ಯಾಪಾರದ ಪರಿಸ್ಥಿತಿಗೆ ರಾಜ್ಯವನ್ನು ತಳ್ಳಿದ್ದಕ್ಕೆ ಬಿಜೆಪಿ ಮತ್ತು ರಾಜ್ಯಪಾಲರೇ ಪ್ರಮುಖ ಹೊಣೆ ಎಂಬುದಕ್ಕೆ ಸಂಶಯವಿಲ್ಲ.

ಬಿಜೆಪಿಯ ಸಂವಿಧಾನ-ವಿರೋಧಿ ಪ್ರಜಾಪ್ರಭುತ್ವ-ವಿರೋಧಿ ಸ್ವರೂಪ ಈ ಪ್ರಕರಣದಲ್ಲಿ ಬಯಲಾಗಿದೆ. ಆದರೆ ಇದು ಕಾಂಗ್ರೆಸ್-ಜೆಡಿ(ಎಸ್) ಗಳಿಗೂ ಅಗ್ನಿಪರೀಕ್ಷೆಯ ಸಮಯ. ಕೋಮುವಾದಿ-ಅಧಿಕಾರಶಾಹಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಅವರು ರಾಜಕೀಯವಾಗಿ ಬದ್ಧರಾಗಿದ್ದಾರೆಯೇ ಅಥವಾ ಹಣ-ಅಧಿಕಾರಗಳ ಆಮಿಷಕ್ಕೆ ಬೆದರಿಕೆಗಳಿಗೆ ತುತ್ತಾಗುತ್ತಾರೋ ಎಂದು ಕಾದು ನೋಡಬೇಕಾಗಿದೆ. ಇದು ಕೋಮುವಾದಿ-ಅಧಿಕಾರಶಾಹಿ ಬಿಜೆಪಿಯ ಮುಂದಿನ ಸವಾಲುಗಳನ್ನು ಎದುರಿಸಲು ಈ ಎರಡು ಪಕ್ಷಗಳಿಗೆ ಸತ್ವಪರೀಕ್ಷೆ ಸಹ.

ಶುಕ್ರವಾರ ರಾತ್ರಿ ಪತ್ರಿಕೆ ಪ್ರಿಂಟಿಗೆ ಹೋಗುತ್ತಿದ್ದಂತೆ ರಾಜ್ಯಪಾಲರ ಹಂಗಾಮಿ ಸ್ಪೀಕರ್ ಆಯ್ಕೆಯನ್ನೂ ಕೂಟದ ವಕೀಲರು ಪ್ರಶಿಸಿದ್ದಾರೆ. ಅದನ್ನು ಕೋರ್ಟು ಶನಿವಾರ ಬೆಳಿಗ್ಗೆ ಪರಿಶಿಲಿಸಲಿದೆ. ಈ ಪರಿಸ್ಥಿತಿಯಲ್ಲಿ ಕುದುರೆ ವ್ಯಾಪಾರ ಕುದುರಿ 'ಆಪರೇಶನ್ ಕಮಲ-2' ಸಫಲವಾದರೆ ರಾಜ್ಯದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಬೀದಿಗಿಳಿದು ಈ ಸರಕಾರದ ವಿರುದ್ಧ ಪ್ರತಿರೋಧ ಒಡ್ಡಬೇಕಾಗಿದೆ.

ಜನಾದೇಶ ಬಿಜೆಪಿಗೆ ಇಲ್ಲ, ಕುದುರೆ ವ್ಯಾಪಾರಕ್ಕೂ ಅಲ್ಲ ಎಂದು ಸಾರಿ ಹೇಳಬೇಕಾಗಿದೆ.

ಅಧಿಕಾರ ದುರುಪಯೋಗ ಹಾಗೂ ಸಂವಿಧಾನ ವಿರೋಧಿ ಕ್ರಮ : ಸಿಪಿಐ(ಎಂ) ಖಂಡನೆ

(ಬಿಜೆಪಿಗೆ ಸರಕಾರ ರಚಿಸಲು ಆಹ್ವಾನ ಕೊಟ್ಟ ರಾಜ್ಯಪಾಲರ ನಿರ್ಧಾರದ ಬಗ್ಗೆ ಸುಪ್ರೀಂ ಕೋರ್ಟು ತೀರ್ಪು ಕೊಡುವ ಮೊದಲು 18.5.2018ರ ಬೆಳಿಗ್ಗೆ ಕೊಟ್ಟ ಹೇಳಿಕೆ)

ಕರ್ನಾಟಕ ಸರಕಾರ ರಚನೆಗೆ ಅಗತ್ಯ ಸಂಖ್ಯಾ ಬಲ ಕನಿಷ್ಠ 112 ಬೇಕಿರುವಾಗ, 104 ಮಾತ್ರವೇ ಸಂಖ್ಯಾಬಲ ಹೊಂದಿರುವ ಮತ್ತು ಶೇ.36 ಮಾತ್ರ ಜನಮತಗಳಿಸಿದ ಬಿಜೆಪಿಗೆ, ಅದರ ಮುಖಂಡರಾದ ಶ್ರೀ ಯೆಡಿಯೂರಪ್ಪನವರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಅನುವು ಮಾಡಿಕೊಟ್ಟ ರಾಜ್ಯಪಾಲ ಶ್ರೀ ವಜುಬಾಯಿ ವಾಲಾ ರವರ ವಿವೇಚನಾರಹಿತ ಕ್ರಮವನ್ನು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ ಕರ್ನಾಟಕ ರಾಜ್ಯ ಸಮಿತಿಯು ಇದೊಂದು ಸಂವಿಧಾನ ಹಾಗೂ ಪ್ರಜಾಸತ್ತೆಯ ವಿರೋಧಿ ಕೃತ್ಯವಾಗಿದೆಯೆಂದು ಬಲವಾಗಿ ಖಂಡಿಸುತ್ತದೆ.

ಅಗತ್ಯ ಸಂಖ್ಯಾಬಲ ಮತ್ತು ಜನಮತ ಬಿಜೆಪಿ ಪರವಾಗಿಲ್ಲದಿದ್ದರೂ, ತನಗೆ ಸರಕಾರ ರಚಿಸಲು ರಾಜ್ಯದ ಜನತೆ ಜನಮತ ನೀಡಿದ್ದಾರೆಂದು, ಬಿಜೆಪಿ ಮುಖಂಡರು ರಾಜ್ಯದ ಜನತೆಯ ಮುಂದೆ ನಾಚಿಕೆಯಿಲ್ಲದೇ ಸುಳ್ಳು ಹೇಳುತ್ತಿರುವುದು ಖಂಡನಾರ್ಹವಾಗಿದೆ.

ಮಾತ್ರವಲ್ಲ, ಅದು ತನ್ನ ಅಧಿಕಾರ ದುರುಪಯೋಗ ಮಾಡುವ ಮೂಲಕ ಮತ್ತು ಪ್ರಜಾಸತ್ತೆಯನ್ನು ಗಾಳಿಗೆ ತೂರಿ ಕುದುರೆ ವ್ಯಾಪಾರವನ್ನು ಪ್ರಚೋದಿಸುವ ಮೂಲಕ, ಸರಕಾರ ರಚಿಸಲು ಮುಂದಾದ ಈ ಕ್ರಮವು ಅದರ ಜನವಿರೋಧಿ ಅಧಿಕಾರ ದಾಹವನ್ನು ಎತ್ತಿ ತೋರಿದೆ.

ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದ ಮತದಾರರು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ವಿಶ್ವಾಸವಿಟ್ಟು ಬಹುಮತ ನೀಡದೇ ಹೋದುದರಿಂದ ಅತಂತ್ರ ಪರಿಸ್ಥಿತಿ ಉಂಟಾಯಿತು. ಈ ಅತಂತ್ರ ಪರಿಸ್ಥಿತಿಯನ್ನು ನಿವಾರಿಸಲು ಮತ್ತು ಕೋಮುವಾದಿ ಹಾಗೂ ಸರ್ವಾಧಿಕಾರಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು, ಕಾಂಗ್ರೆಸ್ ಪಕ್ಷವು ಬೇಷರತ್ ಆಗಿ, ಜಾತ್ಯಾತೀತ ಜನತಾದಳ ಪಕ್ಷಕ್ಕೆ ಬೆಂಬಲವನ್ನು ಘೋಷಿಸಿತು. ಜಾತ್ಯಾತೀತ ಜನತಾದಳ ಪಕ್ಷವು ಅದನ್ನು ಒಪ್ಪಿ, ಎರಡೂ ಪಕ್ಷಗಳ (ಕಾಂಗ್ರೆಸ್-78+ಜೆಡಿಎಸ್-38=116)ಶಾಸಕರ ಬಹುಮತದ ಬೆಂಬಲದೊಂದಿಗೆ ಜಾತ್ಯಾತೀತ ಜನತಾದಳ ಪಕ್ಷದ ಮುಖಂಡರಾದ ಶ್ರೀ ಕುಮಾರ ಸ್ವಾಮಿಯವರು ಸರಕಾರ ರಚಿಸಲು ರಾಜ್ಯಪಾಲರ ಅನುಮತಿ ಕೋರಿದ್ದು ಸಮರ್ಪಕವಾಗಿತ್ತು.

ಈ ಅತಂತ್ರ ಪರಿಸ್ಥಿತಿಯನ್ನು ತಡೆಯಲು ಮತ್ತು ಜನತೆಯ ಮೇಲೆ ತಕ್ಷಣ ಮತ್ತೊಂದು ಚುನಾವಣೆಯನ್ನು ಹೇರುವುದನ್ನು ತಡೆಯಲು ಇದು ಅಗತ್ಯವಿತ್ತು. ಇದನ್ನು ಸಿಪಿಐ(ಎಂ) ಸ್ವಾಗತಿಸಿತ್ತು.

ಅತಿ ಹೆಚ್ಚು ಸ್ಥಾನ ಗಳಿಸಿದ ಪಕ್ಷವೆಂಬ ಕಾರಣಕ್ಕೆ ರಾಜ್ಯಪಾಲರನ್ನು ಭೇಟಿ ಮಾಡಿದ್ದರೂ ಶ್ರೀ ಯೆಡಿಯೂರಪ್ಪನವರು ಬಹುಮತ ತನಗಿರುವುದನ್ನು ಹೇಳಲಾಗಲಿಲ್ಲ. ಬಹುಮತವಿಲ್ಲವೆಂಬ ಕಾರಣಕ್ಕೆ ನಿರಾಶೆ ಹೊಂದಿದ ಅವರು ಅಜ್ಞಾತ ಸ್ಥಳವನ್ನು ಸೇರಿದ್ದರು.

ಆದರೆ ರಾಜ್ಯಪಾಲರು ಪ್ರಮಾಣ ವಚನಕ್ಕೆ ಯಾರನ್ನು ಕರೆಯಬೇಕೆಂದು ನಿರ್ಧರಿಸಿ ಪ್ರಕಟಿಸುವ ಮುನ್ನವೇ, ದೆಹಲಿಯಿಂದ ಬಂದಿಳಿದ ಬಿಜೆಪಿಯ ಮುಖಂಡರು ಮತ್ತು ಕೇಂದ್ರದ ಮಂತ್ರಿಗಳು ಪತ್ರಿಕಾ ಗೋಷ್ಠಿಗಳನ್ನು ನಡೆಸಿ ಮತ್ತು ಹೇಳಿಕೆಗಳನ್ನು ನೀಡುತ್ತಾ ಯೆಡಿಯೂರಪ್ಪನವರೇ 17.05.2018ರಂದು ಮಧ್ಯಾಹ್ನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆಂದು 16.05.2018 ರಂದು ಮಧ್ಯಾಹ್ನ ಪ್ರಕಟಿಸುವ ಮೂಲಕ ರಾಜ್ಯಪಾಲರ ಮೇಲೆ ಬಹಿರಂಗವಾಗಿ ಒತ್ತಡ ಹೇರಿದರು. ಇದೆಲ್ಲವೂ ಪೂರ್ವಯೋಜಿತ ಸಂಚಾಗಿತ್ತು. ಈ ಎಲ್ಲವೂ ಪ್ರಜಾಸತ್ತೆಯನ್ನು ಗಾಳಿಗೆ ತೂರುವ ಮತ್ತು ಜನವಿರೋಧಿ ಅಧಿಕಾರದಾಹದ, ಅದರ ಅಧಿಕಾರ ದುರುಪಯೋಗವನ್ನು ಬಯಲು ಪಡಿಸಿತು.

ಇದೀಗ ಸಂವಿದಾನ ಬಾಹಿರ ಕೃತ್ಯದಿಂದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಯೆಡಿಯೂರಪ್ಪನವರಿಗೆ ಯಾವುದೇ ರೀತಿಯಲ್ಲಿ ಬಹುಮತದ ಸಂಖ್ಯಾಬಲವಿಲ್ಲದಿದ್ದರೂ, ಸದನದಲ್ಲಿ ಬಹುಮತವನ್ನು ಸಾಬೀತು ಪಡಿಸಲು ರಾಜ್ಯಪಾಲರು 15 ದಿನಗಳ ಸಮಯಾವಕಾಶವನ್ನು ನೀಡಿರುವುದು ಬಹಳ ಸ್ಪಷ್ಟವಾಗಿ ಬಿಜೆಪಿ ಅಕ್ರಮಗಳ ಮೂಲಕ ಬಹುಮತ ಸಾಬೀತುಪಡಿಸಲು ಅವಕಾಶಗಳನ್ನು ಉಂಟು ಮಾಡಿದೆ. ಇಡೀ ದೇಶವೇ ನಾಚುವಂತೆ ಶಾಸಕರನ್ನು ಖರೀದಿಸುವ ಕುದುರೆ ವ್ಯಾಪಾರಕ್ಕೆ ಇದು ಅನುವು ಮಾಡಿದೆ. ಈ ಮೂಲಕ ರಾಜ್ಯದ ಗಣಿ ಹಾಗೂ ಭೂಮಾಫಿಯಗಳು ಸಕ್ರಿಯಗೊಳ್ಳುವಂತಾಗಿದೆ. ಇದು ರಾಜ್ಯವನ್ನು ಮತ್ತೊಮ್ಮೆ ಅಧೋಗತಿಯತ್ತ ತಳ್ಳುವ ಅಪಾಯವನ್ನು ತಂದಿದೆ.

ಆದ್ದರಿಂದ, ರಾಜ್ಯದ ಮತದಾರರು ಮತ್ತು ನಾಗರಿಕರು ಬಿಜೆಪಿಯ ಈ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ನಿಲುಮೆಗಳನ್ನು ಹಾಗೂ ಅದರ ಅಧಿಕಾರ ದಾಹವನ್ನು ಮತ್ತು ರಾಜ್ಯವನ್ನು ಅವನತಿಯತ್ತ ತಳ್ಳುವ ಭೂ-ಗಣಿ ಮಾಫಿಯಾಗಳ ಪರವಾದ ಅದರ ನಿಲುಮೆಗಳನ್ನು ಗಮನಿಸಿ, ತೀವ್ರವಾಗಿ ಪ್ರತಿಭಟಿಸಲು ಸಿಪಿಐ(ಎಂ) ಕರೆ ನೀಡುತ್ತದೆ.

ಕಣ್ಣಿಪೋಯಿಲ್ ಬಾಬು

ಆರೆಸ್ಸೆಸ್ ಭಯೋತ್ಪಾದನೆಗೆ ಮತ್ತೊಂದು ಬಲಿ

ಈ ಆರೆಸ್ಸೆಸ್‌ನ ಅಮಾನುಷ ಭಯೋತ್ಪಾದನೆಗೆ ಇನ್ನೊಬ್ಬ ಪ್ರಮುಖ ಸಿಪಿಐ(ಎಂ) ಕಾರ್ಯಕರ್ತರು ಬಲಿಯಾಗಿದ್ದಾರೆ. ಮೇ 7ರಂದು ಕೇರಳದ ಕಣ್ಣೂರು ಜಿಲ್ಲೆಗೆ ಹೊಂದಿಕೊಂಡಿರುವ, ಆದರೆ ಪುದುಚೇರಿ ರಾಜ್ಯದ ಭಾಗವಾಗಿರುವ ಮಾಹೆ ನಗರಸಭೆಯ ಮಾಜಿ ಕೌನ್ಸಿಲರ್ ಮತ್ತು ಮಾಹೆ ಸ್ಥಳೀಯ ಸಮಿತಿಯ ಸದಸ್ಯ ಕಣ್ಣಿಪೋಯಿಲ್ ಬಾಬು ಅವರನ್ನು ಆರೆಸ್ಸೆಸ್ ಗೂಂಡಾಗಳು ಕೊಲೆ ಮಾಡಿದ್ದಾರೆ. ಕಳೆದ ವರ್ಷವೂ ಅವರ ಹತ್ಯೆಯ ಪ್ರಯತ್ನ ನಡೆದಿತ್ತು. ಈ ಬಾರಿ ಮಾಹೆ ಸಮೀಪದ ಕೇರಳದಲ್ಲಿರುವ ಕೂತಪರಂಬದಲ್ಲಿ ಆರೆಸ್ಸೆಸ್ ಸಶಸ್ತ್ರ ತರಬೇತಿ ಶಿಬಿರ ಮುಕ್ತಾಯಗೊಂಡ ಕೂಡಲೇ ಈ ಹತ್ಯೆ ನಡೆದಿದೆ. ಸಿಪಿಐ(ಎಂ) ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಈ ಕೊಲೆಯನ್ನು ಬಲವಾಗಿ ಖಂಡಿಸಿದೆ. ಮರುದಿನ ಕಣ್ಣೂರು ಮತ್ತು ಮಾಹೆಯಲ್ಲಿ ಶಾಂತಿಯುತ ಹರತಾಳ ಆಚರಿಸಲಾಯಿತು. ಆರೆಸ್ಸೆಸ್‌ಗೆ ಹಿಂಸಾಚಾರದ ದಾರಿ ಬಿಡುವ ಆಸಕ್ತಿಯೇನೂ ಇಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಕಾರ್ಯದರ್ಶಿಮಂಡಳಿ ಹೇಳಿದೆ. ಮಾಹೆ ಭಾರತ 1947ರಲ್ಲಿ ಸ್ವತಂತ್ರಗೊಂಡ ನಂತರವೂ ಪುದುಚೇರಿಯ ಭಾಗವಾಗಿ ನೇರವಾಗಿ ಫ್ರಾನ್ಸ್‌ನ ಆಳ್ವಿಕೆಗೆ ಒಳಗಾಗಿತ್ತು.

ದ.ಕ, ಉಡುಪಿ ಜಿಲ್ಲೆಗಳಲ್ಲಿ ಯುವಜನರು ಕೋಮುವಾದದ ಬಲೆಯಲ್ಲಿ

ವಾಸುದೇವ ಉಚ್ಚಿಲ

2018 ಕರ್ನಾಟಕ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾಗಿದೆ. ದ.ಕ. ಮತ್ತು ಉಡುಪಿ ಜಿಲ್ಲೆ (ಹಿಂದಿನ) ಸಂಯುಕ್ತ ದ.ಕ.ಜಿಲ್ಲೆ)ಗಳ ಒಟ್ಟು 13 ಅಸೆಂಬ್ಲಿ ಸ್ಥಾನಗಳಲ್ಲಿ ಮಂಗಳೂರು (ಹಿಂದಿನ ಉಳ್ಳಾಲ) ಹೊರತುಪಡಿಸಿ ಎಲ್ಲಾ ಬಿಜೆಪಿಗೆ ನೀಡಲ್ಪಟ್ಟಿದೆ. 2013ರ ಚುನಾವಣೆಯಲ್ಲಿ ದ.ಕ. ಜಿಲ್ಲೆಯ ಸುಳ್ಯ ಹೊರತಾಗಿ ಉಳಿದ 7 ಕ್ಷೇತ್ರಗಳೂ ಕಾಂಗ್ರೆಸ್ ಪಾಲಾಗಿದ್ದವು. ಅಂತೆಯೇ ಉಡುಪಿ ಜಿಲ್ಲೆಯಲ್ಲಿ ಕಾರ್ಕಳ, ಕುಂದಾಪುರ ಹೊರತುಪಡಿಸಿ ಉಳಿದ 3 ಕ್ಷೇತ್ರಗಳೂ ಕಾಂಗ್ರೆಸ್ಸಿಗಿದ್ದುವು. ಈ 2018ರ ಅಸೆಂಬ್ಲಿ ಚುನಾವಣೆಯಲ್ಲಿ ಉಡುಪಿ, ದ.ಕ.ಜಿಲ್ಲೆಗಳು ಬಿಜೆಪಿಯ ಭದ್ರ ಕೋಟೆಯಾಗಿವೆ.

2014ರ ಲೋಕಸಭಾ ಚುನಾವಣೆಗೆ ಬಿಜೆಪಿ ಪಕ್ಷದಿಂದ ನೇತಾರರಾಗಿ ನರೇಂದ್ರ ಮೋದಿ ಪ್ರತ್ಯಕ್ಷವಾಗುವ ಮೊದಲು ಕರಾವಳಿ ಜಿಲ್ಲೆಗಳಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿ ಪ್ರಭಾವವಿದ್ದುದು ನಿಜ. ಆ ಮೊದಲಿನ ಅವಧಿಯಲ್ಲಿ ಹಿಂದು ಮುಸ್ಲಿಂ ಘರ್ಷಣೆಗಳು, ಚರ್ಚ್‌ದಾಳಿ, ಪಬ್ ದಾಳಿ, ಗೋಸಾಗಾಟಗಾರರ ಮೇಲೆ ದಾಳಿ, ನೈತಿಕ ಪೋಲೀಸ್‌ಗಿರಿ, ಲವ್ ಜಿಹಾದ್ ಇವೆಲ್ಲ ಶುರುವಾದದ್ದು ರಾಜ್ಯದ ಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ. ಹಾಗಿದ್ದಾಗಲೂ ದ.ಕ.ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಭಾವ ಇದ್ದೇ ಇದ್ದಿತ್ತು. ಬಿಜೆಪಿ ಹುಟ್ಟಿದ ವರ್ಷ 1983ರ ಅಸೆಂಬ್ಲಿ ಚುನಾವಣೆಗಳಲ್ಲಿ ಬಿಜೆಪಿಗೆ ಮೊತ್ತ ಮೊದಲು ಹೆಚ್ಚಿಗೆ ಸ್ಥಾನಗಳು ಸಿಕ್ಕಿದ್ದವು. ಆ ಬಳಿಕ ಅಷ್ಟೊಂದು ಸ್ಥಾನ ಬಿಜೆಪಿ ಪಡೆಯದಿದ್ದರೂ, ಕಾಂಗ್ರೆಸ್ಸಿನ ಅಸ್ತಿತ್ವವನ್ನು ಕಡೆಗಣಿಸುವಷ್ಟು ರೀತಿಯ ಸ್ಥಾನಗಳಿಗೆ ಬಿಜೆಪಿಗೆ ಸಾಧ್ಯವಾಗಿರಲಿಲ್ಲ.

2013ರಲ್ಲಿ ಉಡುಪಿ ದ.ಕ.ಜಿಲ್ಲೆಗಳಲ್ಲಿ ಬಿಜೆಪಿಗಿಂತ ಕಾಂಗೆಸ್ ಹೆಚ್ಚಿಗೆ ಅಸೆಂಬ್ಲಿ ಸೀಟು ಪಡೆದ ಮೊದಲನೇ ವರ್ಷ ನಡೆದ 2014ರ ಲೋಕಸಭಾ ಚುನಾವಣೆ ಫಲಿತಾಂಶ ಗಮನಿಸಿ ಮಂಗಳೂರಿನಲ್ಲಿ ಬಿಜೆಪಿಯ ನಳಿನ್ ಕುಮಾರ್ ಕಟೀಲು ಮತ್ತು ಉಡುಪಿಯಲ್ಲಿ ಬಿಜೆಪಿಯ ಶೋಭಾ ಕರಂದ್ಲಾಜೆ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಆ ಚುನಾವಣೆ ವೇಳೆಗೆ ನರೇಂದ್ರ ಮೋದಿ ಪರವಾದ ಅಲೆ ಎದ್ದುದೂ ಸ್ವತ: ನರೇಂದ್ರ ಮೋದಿಯವರು ಪ್ರಚಾರಕ್ಕಾಗಿ ಕರಾವಳಿಗೆ ಬಂದುದೂ ಈ ಬದಲಾವಣೆಗೆ ಕಾರಣವಾಗಬಹುದು.

2014ರ ಲೋಕಸಭಾ ಚುನಾಣೆಯಿಂದೀಚೆಗೆ ಕರಾವಳಿಯಲ್ಲಿ ಅಸೆಂಬ್ಲಿ ಶಾಸಕರು ಹೆಚ್ಚಿಗೆ ಕಾಂಗ್ರೆಸ್ ಇದ್ದರೂ, ಬಿಜೆಪಿಯ ಪ್ರಭಾವ ನಿಧಾನವಾಗಿ ಬೆಳೆಯುತ್ತಾ ಹೋಗಿದೆ. ಇದನ್ನು ತಿಳಿದುಕೊಳ್ಳುವಲ್ಲಿ ಪ್ರಮುಖ ಪಕ್ಷವಾದ ಕಾಂಗ್ರೆಸ್ ವಿಫಲವಾಗಿದೆ. 2018ರಲ್ಲಿ ರಾಜ್ಯದಲ್ಲಿ ಸರಾಸರಿ 72.11% ಮತದಾನವಾಗಿದ್ದು, ಅದನ್ನು 2013ಕ್ಕಿಂತ ಕೇವಲ 0.66% ಮಾತ್ರ ಹೆಚ್ಚಿದೆ. 2013ರ ಅಸೆಂಬ್ಲಿ ಚುನಾವಣೆಯಲ್ಲಿ ದ.ಕ.ಜಿಲ್ಲೆಯಲ್ಲಿ 74.48% ಮತದಾನ ನಡೆದಿದ್ದರೆ, ಉಡುಪಿ ಜಿಲ್ಲೆಯಲ್ಲಿ 76.62% ನಡೆದಿತ್ತು. 2018ರ ಈ ಸಾಲಿನ ಚುನಾವಣೆಯಲ್ಲಿ ಕ್ರಮವಾಗಿ 77.63% ಮತ್ತು 78.87% ಮತದಾನವಾಗಿದೆ. ದ.ಕ.ಜಿಲ್ಲೆಯಲ್ಲಿ 3.15% ಮತದಾನದ ಹೆಚ್ಚಳವಾಗಿದ್ದರೆ, ಉಡುಪಿ ಜಿಲ್ಲೆಯಲ್ಲಿ 1.95% ಹೆಚ್ಚಳವಾಗಿದೆ. ಅದರಲ್ಲೂ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಹಿಂದೆ ಬಿಜೆಪಿ ಗೆದ್ದಿದ್ದಲ್ಲಿ 80.56% ನಡೆದಿದ್ದ ಮತದಾನವು 77.85%ಕ್ಕೆ ಕುಸಿದಿದೆ. ಅದನ್ನು ಗಣಿಸದಿದ್ದರೆ ಉಡುಪಿಯ ಉಳಿದ ಅಸೆಂಬ್ಲಿ ಕ್ಷೇತ್ರಗಳಲ್ಲಿ 2.5%ಕ್ಕಿಂತ ಹೆಚ್ಚಿಗೆ ಮತದಾನವಾಗಿದೆ. ಈ ಹೆಚ್ಚಿಗೆ ಮತದಾನ ನಡೆದುದು ಯಾವ ಪಕ್ಷಕ್ಕೆ ಲಾಭವಾಗಿದೆ?

2018ರ ಅಸೆಂಬ್ಲಿ ಚುನಾವಣಾ ಫಲಿತಾಂಶ ಪರಿಶೀಲಿಸಿದರೆ, ಹೆಚ್ಚುವರಿ ಮತಗಳ ಚಲಾವಣೆ ಉಡುಪಿಯಲ್ಲಿ 2.5%ದಷ್ಟು ಹಾಗೂ ದ.ಕ. ದಲ್ಲಿ 3.15% ದಷ್ಟು ಇರುವುದು ಬಿಜೆಪಿ ಪಕ್ಷಕ್ಕೆ ಲಾಭವಾಗಿದೆ ಎಂದು ತಿಳಿಯುತ್ತದೆ. ಈ ಜಿಲ್ಲೆಗಳಲ್ಲಿ ಹೊಸತಾಗಿ ನೋಂದಾಯಿತ ಮತದಾರರು ಬಿಜೆಪಿಗೆ ಕಡೆಗೇ ಇದ್ದಾರೆಂದು ಇದರಿಂದ ಸ್ಪಷ್ಟವಾಗುತ್ತದೆ. ಅಂದರೆ ಯುವಜನರು ತೀವ್ರವಾದ ಕೋಮುವಾದಿ ಪ್ರಭಾವಕ್ಕೊಳಗಾಗಿದ್ದಾರೆ. ಕಾಂಗ್ರೆಸ್ ಪಕ್ಷ ಯುವಜನರನ್ನು ಕೋಮುವಾದದೆಡೆ ವಾಲದಂತೆ ತಡೆಯುವಲ್ಲಿ ವಿಫಲವಾಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಕರಾವಳಿ ಜಿಲ್ಲೆಗಳಲ್ಲಿ ಕೋಮುವಾದದ ವಿರುದ್ಧ ಎಡೆಬಿಡದೆ ಹೋರಾಡುತ್ತಿದ್ದರೂ, ಯುವಜನರನ್ನು ಅರ್ಥಮಾಡಿಕೊಂಡು ಅವರನ್ನು ಸೆಕ್ಯುಲಾರ್ ಆಗುವಂತೆ ಪರಿವರ್ತಿಸಲು ವಿಭಿನ್ನ ದಾರಿಗಳನ್ನು ತಂತ್ರಗಳನ್ನು ಕಂಡುಕೊಳ್ಳಬೇಕಾಗಿದೆ.

ದ.ಕ.ಜಿಲ್ಲೆ ಮತ್ತು ಉಡುಪಿಯ ಅಸೆಂಬ್ಲಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿರುವ ಮಂಗಳೂರು(ಉಳ್ಳಾಲ) ಕ್ಷೇತ್ರದಲ್ಲಿ ಗೆಲುವಿನ ಅಂತರ 2013ರ 29,000 ದಿಂದ ಈ ಸರ್ತಿ 20,000ಕ್ಕಿಳಿದಿದೆ. ಕಾಪು, ಉಡುಪಿಗಳಲ್ಲಿ ಬಿಜೆಪಿ ಗೆಲುವಿನ ಅಂತರ ಇದ್ದುದರಲ್ಲಿ 12,000 ಮಟ್ಟದಲ್ಲಿದೆ. ಉಳಿದ ಎಲ್ಲ 10 ಅಸೆಂಬ್ಲಿ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿನ ಅಂತರ 15,000 ಮತಗಳಿಗಿಂತ ಮೇಲಿದೆ. ಅದರಲ್ಲೂ ಕುಂದಾಪುರದಲ್ಲಿ 56,000, ಕಾರ್ಕಳದಲ್ಲಿ 42,000 ಮತಗಳಷ್ಟಿದೆ. ಸುಳ್ಯ ಕ್ಷೇತ್ರದಲ್ಲಿ ಒಬ್ಬನೇ ವ್ಯಕ್ತಿ ಬಿಜೆಪಿ ಪಕ್ಷದಿಂದ 6ನೇ ಬಾರಿಗೆ ಮರು ಆಯ್ಕೆ ಆಗಿದ್ದಾರೆ.

ಎರಡು ಜಿಲ್ಲೆಗಳಲ್ಲಿ 5 ಕಡೆ ಸ್ಪರ್ಧಿಸಿರುವ ಸಿಪಿಐ(ಎಂ), ಸ್ಪರ್ಧಿಸಿದ್ದಲ್ಲಿ 3ನೇ ಸ್ಥಾನದಲ್ಲಿದ್ದರೂ ಗಳಿಸಿದ ಮತಗಳ ಪ್ರಮಾಣ ತೀರಾ ಕಡಿಮೆ ಇದೆ. ಸಾರ್ವಜನಿಕ ಹೋರಾಟಗಳಲ್ಲಿ ಸಿಪಿಐ(ಎಂ) ಮುಂಚೂಣಿಯಲ್ಲಿದ್ದುದನ್ನು ಜನತೆ ಗುರುತಿಸಿದ್ದರೂ, ಅಸೆಂಬ್ಲಿ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಇವೆರಡರಲ್ಲಿ ಒಂದು ಎಂದು ತಮ್ಮ ಆಯ್ಕೆಯನ್ನು ಕಂಡುಕೊಳ್ಳುತ್ತಿದ್ದಾರೆ. ಯುವಜನರ ಆಯ್ಕೆಗಳು ಬಿಜೆಪಿ ಆಗುತ್ತಿರುವುದು ಕಳವಳದ ವಿಷಯ.

ಕಾ। ಗೋವಿಂದ ಗೌಡ ನಿಧನ

ಸಿಪಿಐ(ಎಂ) ಗುರುಪುರ ವಲಯ ಸಮಿತಿ ಸದಸ್ಯರಾಗಿ ಹಲವಾರು ವರ್ಷಗಳಲ್ಲಿ ಪಕ್ಷಕ್ಕಾಗಿ ದುಡಿದ ಕಾಗೋವಿಂದ ಗೌಡ ಅವರು ಅಲ್ಪಕಾಲದ ಅಸೌಖ್ಯದಿಂದ ನಿಧನರಾಗಿದ್ದಾರೆ. ಅವರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು.

ಬಡಗ ಎಡಪದವು ಗ್ರಾಮದ ಮಿಜಾರಿನಲ್ಲಿ ಹಿಂದುಳಿದ ಕುಡುಬಿ ಕುಟುಂಬದಲ್ಲಿ ಜನಿಸಿದ ಗೋವಿಂದೇಗೌಡ ಅವರು ಸ್ವತ: ರೈತರಾಗಿದ್ದರು ಮಾತ್ರವಲ್ಲ ಭೂಸುಧಾರಣಾ ಹೋರಾಟದಲ್ಲಿ ಆ ಭಾಗದ ಹೋರಾಟಗಳ ರೂವಾರಿಯಾಗಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಸದಸ್ಯರಾಗಿ ಕಳೆದ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರು. ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು.

ಕಾಂ. ತಿಪ್ಪಣ್ಣ ಶಾಖೋದಿ

ರಾಯಚೂರ ಜಿಲ್ಲೆಯ ಹಿರಿಯ ಕಮ್ಯುನಿಷ್ಟ ಮುಂದಾಳು ಕಾಂ. ತಿಪ್ಪಣ್ಣ ಶಾಖೋದಿ ಇತ್ತೀಚೆಗೆ ನಿಧನರಾಗಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು.

1978 ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮೂಲಕ ಮೂಲಕ ಚಳುವಳಿಗೆ ಧುಮುಕಿದ ಸಂಗಾತಿ ಅವರು ನಿಧನರಾಗುವರೆಗೂ ಕ್ರಿಯಾಶೀಲರಾಗಿದ್ದರು. ಪ್ರಸ್ತುತ ಸಿ.ಪಿ.ಐ.ಎಂ.ಪಕ್ಷದ ರಾಯಚೂರ ತಾಲೂಕ ಸಮಿತಿ ಸದಸ್ಯರಾಗಿ ಕೆಲಸ ಮಾಡುತಿದ್ದರು. ಜಿಲ್ಲಾ ಕೇಂದ್ರದಿಂದ ಕೇವಲ 16 ಕಿ.ಮಿ. ದೂರವಿದ್ದ ಶಾಖೋದಿ ಭೂ ಮಾಲಿಕರ ಪಾಳೆಗಾರಿ ದೌರ್ಜನ್ಯಗಳಿಂದ ನರಳುತ್ತಿರುವ ಸಣ್ಣ ಹಳ್ಳಿ, ಸುತ್ತ ಮುತ್ತಲ ಹಳ್ಳಿಗಳಾದರೂ ಅಷ್ಟೆ. ಆಂಧ್ರದ ಗಡಿಗೆ ಹತ್ತಿಕೊಂಡಿರುವ ಹಳ್ಳಿಗಳೆಲ್ಲವೂ ಭೂ ಮಾಲಕರ ಅಟ್ಟಹಾಸಕ್ಕೆ ನರಳಿದಂತವೇ. ಇಂತಹ ಭೂ ಮಾಲಕರ ನಡುವಿದ್ದುಕೊಂಡೆ ಅವರ ವಿರುದ್ದ ಭೂ ಹೋರಾಟದಂತಹ ಚಳುವಳಿಯನ್ನು ಕಟ್ಟಿದ್ದು ಸಣ್ಣ ಸಾಹಸವೇನು ಅಲ್ಲ. ರಘುನಾನಾಥನ ಹಳ್ಳಿಯ 1200 ಎಕ್ಟರ್ ಭೂಮಿ ಹೊಂದಿದ್ದ ಗುಂಡಪ್ಪ ಗೌಡ ಭೂ ಮಾಲಕನ ವಿರುದ್ದ ರಾಜಿ ರಹಿತ ಭೂ ಚಳುವಳಿಯನ್ನು ಸಂಘಟಿಸಿ 120 ಎಕ್ಟರ್ ಭೂಮಿಯನ್ನು ದಲಿತರಿಗೆ ಹಂಚುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕಾಂ. ಶಾಖೋದಿಯವರಿಗೆ ಆಗ ಎಲ್ಲಾ ರೀತಿಯ ಸಹಾಯ ಸಹಕಾರಗಳನ್ನು ನೀಡಿದ್ದು ಇನ್ನೊಬ್ಬ ಕಮ್ಯುನಿಷ್ಟ ಮುಂದಾಳು ಚಂದ್ರಶೇಖರ ಬಾಳೆ. ನಾರಾಯಣಪೂರ ಬಲದಂಡೆ ಕಾಲುವೆ ನೀರಾವರಿ ಹೋರಾಟಕ್ಕಾಗಿ 32 ಹಳ್ಳಿಗಳನ್ನು ಸೈಕಲ್ ಮೇಲೆ ತಿರುಗಾಡಿ ರೈತರನ್ನು ಸಂಘಟಿಸಿ ನೀರಾವರಿ ಹೋರಾಟಕ್ಕೆ ರೈತರನ್ನು ತಯಾರುಗೊಳಿಸಿದರು. ಕೇವಲ ಭೂ ಹೋರಾಟಗಳಿಗಷ್ಟೆ ಸಿಮೀತವಾಗದೆ ದಲಿತರಿಗೆ ಹಲವು ಪ್ರಶ್ನೆಗಳಿಗೆ ಮದ್ಯಪ್ರವೇಶ ಮಾಡಿ ಅವರ ಪರವಾಗಿ ದ್ವನಿ ಎತ್ತುತಿದ್ದರು.

ರಘುನಾಥನಹಳ್ಳಿಯ ಪಕ್ಕದ ಮುರನ್ನಾ ಪೂರ ಎಂಬ ಹಳ್ಳಿಯಲ್ಲಿ ಸವರ್ಣಿಯರು ದಲಿತರ ಮೇಲೆ ಸಾಮಾಜೀಕ ಬಹಿಷ್ಕಾರ ಹಾಕಿದಾಗ ಸಂಗಾತಿ ತಿಪ್ಪಣ್ಣ ಅವರು ಅನಿಷ್ಠ ಪದ್ದತಿಯ ವಿರುದ್ದ ಹೋರಾಟ ಸಂಘಟಿಸಿ ಯಶಸ್ವಿಯಾಗಿದ್ದರು. ಕೇವಲ 6 ನೇ ತರಗತಿಯ ವರಗೆ ಮಾತ್ರ ಓದಿದ್ದ ಸಂಗಾತಿ ಸಂಪ್ರದಾಯಗಳ ವಿರೋಧಿಯಾಗಿದ್ದರು. ತಮ್ಮ ಮಗನ ಮದುವೆಯನ್ನು ಅಧಿಕ ಮಾಸದಲ್ಲಿ ಮಾಡಿ ಸಂಪ್ರದಾಯವನ್ನು ಮುರಿದಿದ್ದರು. ಆಗಿನ ಕಾಲಕ್ಕೆ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಅದು ದೊಡ್ಡ ಚರ್ಚೆ ವಿಷಯ. ರಾಮಕೃಷ್ಣ ಹೆಗಡೆವರ ಕಾಲದಲ್ಲಿ ಜೇಗರಕಲ್ ಮಂಡಲ ಪಂಚಾಯತಗೆ ಸದಸ್ಯರಾಗಿ ಆಯ್ಕೆಯಾಗಿದ್ದಾಗ ಪಂಚಾಯ್ತಿಯಲ್ಲಿ ನಡೆದ ಭ್ರಷ್ಟಾಚಾರದ ವಿರುದ್ದ 31 ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಿದ ಧೀಮಂತ ಹೋರಾಟಗಾರ ಸಂಗಾತಿ ತಿಪ್ಪಣ್ಣ ಅವರು.

ಸಂಗಾತಿಗೆ ಮೂರು ಜನ ಪುತ್ರರು ಮತ್ತು ಮೂರು ಜನ ಪುತ್ರಿಯರು ಇದ್ದು ಶಾಖೋದಿ ಗ್ರಾಮದಲ್ಲಿ ಅವರ ಅಂತಿಮ ಕಾರ್ಯಗಳು ನಡೆದಿವೆ.

ಕಮ್ಯುನಿಸ್ಟ್ ಗಿಡದ ಸ್ವಗತಗಳು

ಮೂದಲಿಸಬೇಡಿ
ಕಳೆಗಿಡಗಳೆಂದು
ನಾವು ಕೊಳೆತು
ಗೊಬ್ಬರವಾದುದರ
ಫಲವನ್ನುಣ್ಣುತ್ತಿರುವಿರಿ ನೀವಿಂದು.

ತೆನೆ ಹೊತ್ತವಳು
ಏಣಿಯೇರಿ ಬಿದ್ದು
ಕೈಗೆ ಗಾಯಮಾಡಿಕೊಂಡಾಗಳು,
ಆನೆ ಅಂಬಾರಿಯ ಮೇಲೆ ಕುಳಿತವ
ಸೈಕಲಿನಿಂದ ಬಿದ್ದು ಹಣೆಗೆ
ಗಾಯಮಾಡಿಕೊಂಡಾಗಳು
ನಾನು ಮದ್ದಾಗಿದ್ದೆ
ಅದು ನನ್ನ ಸಹಜ ಗುಣ

ನೀರಲ್ಲಿ ಮಾತ್ರ ಬೆಳೆಯುವ
ಕಮಲದ ಪುಷ್ಪಕ್ಕೂ
ಬಂಜರು ಮರುಭೂಮಿಯಲ್ಲೂ
ಬೆಳೆಯಬಲ್ಲ ನನಗೂ
ಎಡ-ಬಲದ ವ್ಯತ್ಯಾಸವಿದೆ.

ಕರದಲ್ಲಿ ಕಮಲಹಿಡಿದವರು
ನನ್ನ ಕಂಡಾಗ ಉರಿಯುತ್ತಾರೆ
ನೀರಿನ ಪಸೆ ಇಲ್ಲದೆಡೆಯೂ
ಹುಲುಸಾಗಿ ಬೆಳೆವ ನನ್ನ ನೋಡಿ.

ನೀವು ಬೆಂಕಿ ಹಾಕಿ ಸುಟ್ಟರು
ಮೊದಲ ಮಳೆಹನಿ ಬಿದ್ದೊಡನೆ
ಮರುಜೀವ ಪಡೆದುಕೊಳ್ಳುತ್ತೇನೆ
ಹುತಾತ್ಮ ಧೀರರ ಸಂತತಿಯಂತೆ

ರಫೀಕ್ ಬಿ ಎಂ

ಕಾಂಗ್ರೆಸ್ ಸೋಲು: ಜಾತಿ, ನೀತಿಗಳ ಪ್ರಭಾವ

ಎಸ್.ವೈ. ಗುರುಶಾಂತ್



ಸಿದ್ಧರಾಮಯ್ಯನವರ 'ಅಹಿಂದ' ಕಾಂಗ್ರೆಸ್ ಸರ್ಕಾರ ಈ ಚುನಾವಣೆಯಲ್ಲಿ ಸೋಲಲು ಕಾರಣಗಳೇನು? ಈ ಬಗ್ಗೆ ಹಲವು ಮಗ್ಗುಲುಗಳ ವಿಶ್ಲೇಷಣೆ ನಡೆಯುತ್ತಿದೆ. ಮುಖ್ಯವಾಗಿ ಆರ್ಥಿಕ ಧೋರಣೆಗಳು, ಅವುಗಳ ಜಾರಿ ಯಾವುದೇ ಒಂದು ಸರ್ಕಾರದ ಆಡಳಿತವನ್ನು ಮೌಲ್ಯ ಮಾಪನ ಮಾಡುವಾಗ ಪ್ರಧಾನವಾದ ಅಂಶಗಳು ಆಗಿರುತ್ತವೆ. ಈ ಬಗ್ಗೆ ಪ್ರತ್ಯೇಕವಾದ ವಿಶ್ಲೇಷಣೆ ಅಗತ್ಯ.

ಇದರೊಟ್ಟಿಗೆ ಸಾಮಾಜಿಕ ಅಂಶಗಳು, ಜಾತಿ-ಮತ ಧರ್ಮಗಳಂತಹ ಸಮೀಕರಣಗಳು ಕರ್ನಾಟಕದ ಚುನಾವಣೆಗಳಲ್ಲಿ ಬಹಳಷ್ಟು ಪರಿಣಾಮ ಬೀರುವ ಅಂಶಗಳೂ ಆಗಿವೆ ಎಂಬುದೂ ನಿಜ.

ಈ ದಿನಗಳಲ್ಲಿ ಬಹುತೇಕ ಬಲಪಂಥೀಯ ಪಕ್ಷಗಳು ಜಾತಿಗಳ ಕ್ರೋಡೀಕರಣವನ್ನು ತಮ್ಮ ರಾಜಕೀಯ ಮುನ್ನಡೆಗೆ ಆಧಾರವಾಗಿ ಬಳಸುತ್ತಿರುವುದು ಸಾಮಾನ್ಯವಾಗುತ್ತಿದೆ. ಆಯಾ ಪಕ್ಷಗಳೇ ಜಾತಿಗಳ ಸಮಾವೇಶ, ಸಮಾರಂಭಗಳನ್ನು ತಮ್ಮ ಪ್ರಾಯೋಜಕತ್ವದಲ್ಲಿ ನಡೆಸುತ್ತವೆ. ಒಂದೆಡೆ ಕೋಮುವಾದ, ಜಾತಿವಾದಗಳು ಎಡಬಿಡದೇ ಜನರನ್ನು ಕಾಡಿ ಸುತ್ತುವರಿದಿವೆ. ಹಾಗೂ ಮತದಾರರನ್ನು, ಮತಗಳನ್ನೂ 'ಅಪಹರಿಸಲು' ಕಾರಣವೂ ಆಗಿವೆ.

ಇಲ್ಲಿ ಕಾಂಗ್ರೆಸ್ ಸರ್ಕಾರದ ವಿಷಯಕ್ಕೆ ಬಂದಾಗ 'ಸಾಮಾಜಿಕ ನ್ಯಾಯ'ಕ್ಕೆ ಒತ್ತು ನೀಡುವ ಘೋಷಣೆ ಮತ್ತು ಅದರ ಅನುಷ್ಠಾನ ನಿರ್ದೇಶಿತ ಗುರಿಯನ್ನು ಈ ಐದು ವರುಷಗಳಲ್ಲಿ ತಲುಪಿತೇ? ಹಾಗೆ ನೋಡಿದರೆ ಆರಂಭದಿಂದಲೇ ಅನ್ನಭಾಗ್ಯ, ಮೊಟ್ಟೆ, ಉಚಿತ ಬಸ್‌ಪಾಸ್, ವಿದ್ಯಾರ್ಥಿಗಳಿಗೆ ಪ್ರವಾಸದಂತಹ ವಿಷಯಗಳನ್ನು ಒಳಗೊಂಡು ಮೂಢನಂಬಿಕೆ ನಿಷೇಧ,ಟಿಪ್ಪು ಜಯಂತಿ ವಿವಾದ, ದೇವಸ್ಥಾನ-ಮುಜರಾಯಿ ಇಲಾಖೆ ಕ್ರಮಗಳು, ಮೀಸಲಾತಿ – ಒಳ ಮೀಸಲಾತಿ, ಲಿಂಗಾಯತ ಧರ್ಮ, ಇತ್ಯಾದಿ ವಿಷಯಗಳ ನಿಜವಾದ ತಿರುಳು, ಅರ್ಥ ಜನರಿಗೆ ತಲುಪುವ ಮೊದಲೇ ಸಾಕಷ್ಟು ವಿಕೃತಗೊಂಡು ಹಲವು ತಿರುವು ಪಡೆದು ಜನರನ್ನೂ ಗೊಂದಲಗೊಳಿಸಿದ್ದೇ ಹೆಚ್ಚು. ಈ ಅಪಪ್ರಚಾರವನ್ನು ಸರಕಾರವಾಗಲೀ, ಕಾಂಗ್ರೆಸ್ ಪಕ್ಷವಾಗಲೀ ಪರಿಣಾಮಕಾರಿಯಾಗಿ ಎದುರಿಸಲು ಆಗಲಿಲ್ಲ. ನಿಜ ಉದ್ದೇಶಗಳನ್ನೂ ಜನತೆಗೆ ಮನವರಿಕೆ ಮಾಡಲು ಆಗಲಿಲ್ಲ. ಜನತೆಗೆ ಮಾಹಿತಿ ನೀಡಬೇಕಾದ ಸುದ್ದಿ ಮಾಧ್ಯಮಗಳು ಬಿಜೆಪಿ-ಸಂಘಪರಿವಾರದ, ದೊಡ್ಡ ಕಾರ್ಪೋರೇಟ್ ಕಂಪನಿಗಳ ತುತ್ತೂರಿಗಳಾಗಿ ಅಪಪ್ರಚಾರದ ಹೊಳೆ ಹರಿಸಿವೆ. ಹೀಗಾಗಿಯೇ ರಾಜ್ಯದಲ್ಲಿ ಹಿಂಸೆ-ಗಲಭೆ, ಕೊಲೆಗಳಂತಹ ಕ್ರಿಮಿನಲ್ ಕೃತ್ಯಗಳನ್ನು ನಡೆಸಿದ ಸಂಘಪರಿವಾರವೇ, ಈ ಸರ್ಕಾರದ ವಿರುದ್ಧವೇ ಅವೇ ಆರೋಪಗಳನ್ನು ಮಾಡಿ ಜನರನ್ನು ನಂಬಿಸಿ ಬಿಟ್ಟಿದ್ದು ಒಂದು ನಿದರ್ಶನ.

ಕಾಂಗ್ರೆಸ್ ಪಕ್ಷ, ಸಿದ್ಧರಾಮಯ್ಯ ನವರುತಥಾ ಕಥಿತ ಆರ್ಥಿಕ ನೀತಿಗಳನ್ನು ಅನುಸರಿಸುವ ಬದಲುಭಿನ್ನವಾದ ನೀತಿಗಳಿಂದಜನತೆಗೆ ಒಂದಿಷ್ಟೂ ನೆಮ್ಮದಿ, ಪರಿಹಾರವನ್ನು ಕೊಡಬಹುದಾಗಿದ್ದರೂ ಅದನ್ನು ಮಾಡಲಿಲ್ಲ. ಇವರೂ ಕೂಡ ಜಾತಿ ಧೃವೀಕರಣವನ್ನೂ ಅತಿಯಾಗಿ ಆಧರಿಸಿದ್ದು, ಅದಕ್ಕೆ ತಿರುಗು ಬಾಣವಾಗಿರುವುದೂ ಸುಳ್ಳಲ್ಲ.

ವಿಶೇಷವಾಗಿ, ಮೊದಲ ಹಂತದ ಅವಲೋಕನದಲ್ಲಿ ತಿಳಿಯುವಂತೆ ಕಾಂಗ್ರೆಸ್ ಪಕ್ಷ 122 ರಿಂದ 78 ಸ್ಥಾನಗಳ ಗಳಿಕೆಗೆ ಕುಸಿಯುವಲ್ಲಿ ಎರಡು ಪ್ರಮುಖ ವಿಷಯಗಳಿವೆ. ಹಲವು ದಶಕಗಳ ಬೇಡಿಕೆಯಾಗಿದ್ದ 'ಲಿಂಗಾಯತ ಧರ್ಮ'ಕ್ಕೆ ಸ್ವತಂತ್ರ ಸ್ಥಾನಮಾನ ಕೊಡುವ ಶಿಫಾರಸು ಒಂದು, ಒಳ ಮೀಸಲಾತಿಗೆ ಸಂಬಂಧಿಸಿದ ನ್ಯಾ. ಸದಾಶಿವ ಆಯೋಗದ ವರದಿ ಇನ್ನೊಂದು. ಇವು ನಿರೀಕ್ಷಿತವಾದ ಜಾತಿಗಳ ಬೆಂಬಲ ಕಾಂಗ್ರೆಸ್‌ಗೆ ಸಿಗದಂತೆ, ಬದಲಾಗಿ ಹಠ ತೊಟ್ಟು ಸೋಲಿಸಲು ಕಾರಣವಾದವೇ?

ಸಾಧಾರಣವಾಗಿ, ಈ ದಶಕದಲ್ಲಿ ಜನತಾಪಕ್ಷ-ಪರಿವಾರದ ವಿಘಟನೆ ನಂತರ ನಾಯಕತ್ವ, ಅಧಿಕಾರ ಕೇಂದ್ರದಿಂದ ದೂರವಾಗುತ್ತಿರುವ ಭಾವನೆಯಲ್ಲಿದ್ದ 'ಲಿಂಗಾಯತ'ರು ಬಿಜೆಪಿಗೆ ನೆಲೆಯಾದ ಪ್ರಕ್ರಿಯೆಯನ್ನೂ ನಾವು ಕಾಣುತ್ತೇವೆ. ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ ಅದನ್ನು ಮತ್ತಷ್ಟೂ ಕ್ರೋಡೀಕರಿಸುವ ಪ್ರಯತ್ನಗಳನ್ನು ಸಂಘ ಪರಿವಾರ ಸತತವಾಗಿ ಮಾಡುತ್ತಾ ಬಂದಿದೆ. ಹೀಗಿರುವಾಗ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಮತಧರ್ಮದ ಸ್ಥಾನಮಾನ ನೀಡುವ ಸರಕಾರದ ನಿರ್ಧಾರ ನಿಜಕ್ಕೂ ದಿಟ್ಟತನದ್ದು, ಸ್ವಾಗತಾರ್ಹವೂ ಆಗಿದೆ. ಇದಕ್ಕಾಗಿ ಜನರ ಚಳುವಳಿಗಳೂ ನಡೆದಿದ್ದವು. ಆದರೆ ಈ ಸ್ಥಾನಮಾನದ ಪ್ರಶ್ನೆಯನ್ನು ಬಿಜೆಪಿ – ಸಂಘಪರಿವಾರ ವಿಕೃತಗೊಳಿಸಿ ಜನರನ್ನು ಹಾದಿ ತಪ್ಪಿಸುವಲ್ಲಿ ಯಶಸ್ವಿಯಾಗಿದೆ. ಅದು 'ಹಿಂದೂ ಧರ್ಮ'ವನ್ನು ಒಡೆದು ದುರ್ಬಲಗೊಳಿಸುವ ಛಿದ್ರಕಾರಿ ಕ್ರಮವೆಂದೂ ಪ್ರಚಾರಿಸಿತು. ಯಡಿಯೂರಪ್ಪ ಮುಖ್ಯಮಂತ್ರಿ ಆಗದಂತೆ ತಡೆಯುವ ಕುತಂತ್ರ ಇದೆಂದೂ ಸಾರಿತು. ವೀರಶೈವ – ಲಿಂಗಾಯತ ಒಂದೇ ಎಂದೂ ಹೇಳಿ ಕೆಲ ಮಠಾಧೀಶರನ್ನು ಎತ್ತಿ ಕಟ್ಟಿತು. ಈ ವಿಷಯದಲ್ಲಿ ಸರ್ಕಾರಕ್ಕೆ ಇದ್ದ ಸೀಮಿತ ಹೊಣೆಗಾರಿಕೆ, ಬಾಧ್ಯತೆಗಳು ಮತ್ತು ಭಾಗವಹಿಸುವಿಕೆಯ ಬಗ್ಗೆ ಸಾರ್ವಜನಿಕರಿಗೆ ವಾಸ್ತವ ಸಂಗತಿಗಳನ್ನು ತೆರೆದು ತೋರಿಸಲಿಲ್ಲ. ಅದರದ್ದೇ ಸಚಿವ ಸಂಪುಟದ ಕೆಲವು ಸಚಿವರು ಬೇಡಿಕೆಯ ಪರವಾಗಿ ಜನರನ್ನು ಸಂಘಟಿಸ ತೊಡಗಿದ್ದರೆ, ಕೆಲವರು ಸ್ಥಾನಮಾನಕ್ಕೆ ಕಡು ವಿರೋಧವನ್ನು ವ್ಯಕ್ತಪಡಿಸಿ ಬಹಿರಂಗವಾಗಿ ಸಂಘರ್ಷಕ್ಕೆ ಇಳಿದರು. ಮಧ್ಯ ಕರ್ನಾಟಕದಲ್ಲಿರುವ ಶ್ಯಾಮನೂರು ಶಿವಶಂಕರಪ್ಪನವರು, ಹೈ. ಕ. ಈಶ್ವರ ಖಂಡ್ರೆ ನಿರ್ಧಾರದ ವಿರುದ್ಧ ದನಿ ಎತ್ತಿದರೆ, ಸಚಿವ ಎಂ.ಬಿ. ಪಾಟೀಲ್, ವಿನಯ ಕುಲಕರ್ಣಿ, ಬಸವರಾಜ ರಾಯರೆಡ್ಡಿ ಯಂತಹವರು ಬಹಿರಂಗವಾಗಿ ಸ್ವತಂತ್ರ ಸ್ಥಾನಮಾನದ ಪರವಾಗಿ ಕೆಲಸ ಮಾಡಿದರು. ಇದೆಲ್ಲಾ ಕಾಂಗ್ರೆಸ್ ಪಕ್ಷಕ್ಕೆ, ಸಿದ್ಧಾರಾಮಯ್ಯನವರ ನೇರ ಭಾಗಿತ್ವದಂತೆ ಸಾದರಪಡಿಸಿ ವಿರೋಧಿಗಳ ಅಪಪ್ರಚಾರ/ಪ್ರಚಾರ ಗಟ್ಟಿಯಾಗಿಸಿದವು. 'ಲಿಂಗಾಯತ ' ಸ್ವತಂತ್ರ ಧರ್ಮದ ಬಗ್ಗೆ ವೀರಶೈವ ಧರ್ಮಕ್ಕಿಂತ ಭಿನ್ನ ಹೇಗೆ ಎಂಬ ಬಗ್ಗೆ ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಮನವರಿಕೆ ಮಾಡಿ ಕೊಡಲು ಆಗಲೇ ಇಲ್ಲ. ಇದರ ಬಗ್ಗೆ ಏನೂ ಅರಿಯದ ವೀರಶೈವ – ಲಿಂಗಾಯತ ಎಂದರೆ ಒಂದೇ ಎಂದೇ ನಂಬಿ ನಡೆಯುವ ಲಕ್ಷಾಂತರ ಮುಗ್ಧ ಜನ ಇರುವಾಗ ಅವರನ್ನು ಜಾಗೃತಗೊಳಿಸುವ ಮಹತ್ವದ ಕೆಲಸ ಅಷ್ಟಾಗಿ ಆಗಲಿಲ್ಲ. ಹೋಗಲಿ, ಈ ಪ್ರತ್ಯೇಕ ಸ್ಥಾನಮಾನದ ಪ್ರಯೋಜನವಾದರೂ ಏನು ಎಂದೂ ವಿವರಿಸಿ ಹೇಳಲೂ ಆಗಲಿಲ್ಲ. ಹೀಗಾಗಿ ಇದೇನೋ ತಮ್ಮನ್ನು ಒಡೆಯಲು, ತುಳಿಯಲು ಸಂಚು ಮಾಡಲಾಗುತ್ತಿದೆ ಎಂದು ನಂಬಲು ಅನುವು ಮಾಡಿಕೊಟ್ಟಿತು. ತಮ್ಮ ವಿರುದ್ಧವೇ ತಾವೇ ಹೋರಾಡಿ, ಹೊಡೆದಾಡಲು ಅವಕಾಶ ಕೊಟ್ಟಿತು.'ಅಹಿಂದ' ಸಿದ್ಧರಾಮಯ್ಯ ಎಂದರೆ ಅಹಂಕಾರಿ, 'ಒಡೆಯುವವ' ಎಂಬ ಪೂರ್ವಾಗ್ರಹಕ್ಕೆ ಬಲಿಯಾಗಿಸಲಾಯಿತು. ಈ ಅಂಶ ಫಲಿತಾಂಶದಲ್ಲಿ ವ್ಯಕ್ತವಾಗಿರುವುದನ್ನು ವಿಶ್ಲೇಷಕರು ಗುರುತಿಸಿದ್ದಾರೆ.

ವೀರಶೈವ, ಲಿಂಗಾಯತರು ಅಧಿಕವಿರುವ ಹೈದ್ರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಮದ್ಯ ಕರ್ನಾಟಕದಲ್ಲಿನ ಫಲಿತಾಂಶ ಇದನ್ನು ಹೇಳುತ್ತವೆ.

ಹಿಂದೆ 2013 ರಲ್ಲಿ – ಹೈದ್ರಾಬಾದ್ ಕರ್ನಾಟಕದಲ್ಲಿ ಕಾಂಗ್ರೆಸ್ 23 ಶಾಸಕರನ್ನು ಹೊಂದಿತ್ತು. ಈಗ 2018 ರಲ್ಲಿ 11 ಪಡೆದಿದೆ. ಆದರೆ ಬಿಜೆಪಿ 5 ಇದ್ದದ್ದು 15 ಗಳಿಸಿದೆ. ಬಾಂಬೆ ಕರ್ನಾಟಕದಲ್ಲಿ ಕಾಂಗ್ರೆಸ್ 31 ಸ್ಥಾನಗಳಿಂದ 17 ಕ್ಕೆ ಕುಸಿದಿದೆ. ಬಿಜೆಪಿ 13 ರಿಂದ 30 ಕ್ಕೆ ಏರಿದೆ. ಮದ್ಯಕರ್ನಾಟಕದಲ್ಲಿ ಕಾಂಗ್ರೆಸ್ 19 ಸ್ಥಾನಗಳಿಂದ 13 ಕ್ಕೆ ಕುಸಿದಿದೆ. ಬಿಜೆಪಿ 3 ರಿಂದ 15 ಕ್ಕೆ ಹೆಚ್ಚಿಸಿಕೊಂಡಿದೆ. ಜೆಡಿ(ಎಸ್) ಸಹ ಈ ಪ್ರದೇಶಗಳಲ್ಲಿ ಕೆಲವು ಸ್ಥಾನಗಳನ್ನು ಕಳೆದುಕೊಂಡಿದೆ. ಇದೆಲ್ಲದರ ಲಾಭ ಬಿಜೆಪಿಗೆ ಸಿಕ್ಕಿರುವುದು ಸ್ಪಷ್ಟ. ಗಮನಿಸಬೇಕಾದ ಅಂಶವೆಂದರೆ 'ಲಿಂಗಾಯತ' ಪರವಾಗಿ ಮುಂಚೂಣಿಯಲ್ಲಿದ್ದು ವಿನಯ ಕುಲಕರ್ಣಿ, ರಾಯರೆಡ್ಡಿ ಸೋತಿದ್ದಾರೆ. ಎಂ.ಬಿ. ಪಾಟೀಲ್ ಅಲ್ಪದರಲ್ಲಿ ಪಾರಾಗಿದ್ದು ಪ್ರಯಾಸದ ಗೆಲುವು ಪಡೆದಿದ್ದಾರೆ. ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಸ್ಪರ್ಧಿಸಿದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಾಗೂ ಬಾದಾಮಿಯಲ್ಲೂ ಸೋಲಲು, ಕಡಿಮೆ ಅಂತರದಲ್ಲಿ ಗೆಲ್ಲಲು ಲಿಂಗಾಯತ – ವೀರಶೈವ ವಿವಾದದ ಅಂಶ ಪ್ರಮುಖ ಪಾತ್ರ ವಹಿಸಿರುವುದನ್ನು ತಳ್ಳಿ ಹಾಕಲಾಗದು. ಇಲ್ಲಿ ಕೆಳ ಜಾತಿಗಳ ಬಗ್ಗೆ ಇರುವ ತಾರತಮ್ಯ, ದ್ವೇಷ, ಕೆಲಸ ಮಾಡಿದೆ. ಮೇಲ್ಜಾತಿಗಳ ಶಕ್ತಿಯಾಟ ಇಲ್ಲೂ ಮರೆಯುವಂತಿಲ್ಲ.

ಇದೇ ರೀತಿ ಪರಿಶಿಷ್ಟ ಜಾತಿಯಲ್ಲಿರುವ ಒಳ ಪಂಗಡಗಳ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ನಿಗದಿಯಾಗಬೇಕೆಂಬ ಬೇಡಿಕೆ ಹಲವು ದಶಕಗಳಿಂದಲೇ ಇತ್ತು. ಈಗ ಕಾಂಗ್ರೆಸ್ ಸರ್ಕಾರ ರಚಿಸಿದ ನ್ಯಾ. ಸದಾಶಿವ ಆಯೋಗದ ವರದಿಯು ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಯೂ ಇಲ್ಲದೇ, ಅದರ ಜಾರಿಯೂ ಇಲ್ಲದೇ ತೀವ್ರ ಧಾಳಿಗೆ ಒಳಗಾದ ವಿಚಿತ್ರ ಪ್ರಸಂಗವನ್ನೂ ಗಮನಿಸಬೇಕಿದೆ. ಇದು ದಲಿತರೊಳಗೆ ಇರುವ ಎಡಗೈ ಮತ್ತು ಬಲಗೈ ಎಂಬ ಒಳಪಂಗಡಗಳಲ್ಲಿ ತೀವ್ರವಾದ ಆಕ್ರೋಶವನ್ನೂ ಹುಟ್ಟುಹಾಕಿತು. ವರದಿ ಜಾರಿ ಯಾಗುತ್ತಿಲ್ಲ ವಿಳಂಬಿಸಲಾಗುತ್ತಿದೆ ಎಂದು ಒಂದು ಪಂಗಡ ಆಕ್ರೋಶಿತರಾದರೆ, ಇಂತಹ ವರದಿಯನ್ನು ತಂದಿದೆಯಲ್ಲ ನಮ್ಮಿಂದ ಸವಲತ್ತು ಕಿತ್ತುಕೊಳ್ಳಲಾಗುವುದು ಎಂದು ಇನ್ನೊಂದು ಪಂಗಡ ಆಕ್ರೋಶಿತವಾಗಿತ್ತು.

ಈ ಆಕ್ರೋಶಗಳು ಸಿದ್ದರಾಮಯ್ಯನವರನ್ನು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ಬರದಂತೆ ಮಾಡಬೇಕೆಂಬಲ್ಲಿ ಕೆಲಸ ಮಾಡಿದೆಯೆಂದು ವಿಶ್ಲೇಷಕರು ಗುರುತಿಸಿದ್ದಾರೆ. ಈ ಸನ್ನಿವೇಶವನ್ನು ಬಿಜೆಪಿ ವ್ಯವಸ್ಥಿತವಾಗಿ ಬಳಸಿಕೊಂಡಿದ್ದಾರೆ. ದಲಿತರಲ್ಲದೇ ಸ್ಪೃಶ್ಯ ಎಸ್.ಸಿ.ಗಳಾದ ಬೋವಿ, ಲಮಾಣಿ ಸಮುದಾಯಗಳನ್ನು ಆಕರ್ಷಿಸುವ ಮೂಲಕ (ಟಿಕೇಟ್ ನೀಡಿ) ಆ ಮತಗಳನ್ನು ಸೆಳೆದಿದ್ದಾರೆ. ದುರಂತವೆಂದರೆ ನಾಲ್ಕಾರು ದಶಕಗಳಿಂದ ಕೇಳಲಾಗುತ್ತಿದ್ದ ಲಮಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿಗಣಿಸಿ ಭೂಮಿಯ ಹಕ್ಕು ನೀಡಿದ ಕಾಂಗ್ರೆಸ್ ಸರಕಾರ ಲಕ್ಷಾಂತರ ಜನರಿಗೆ ಇದರ ಗಟ್ಟಿ ಪ್ರಯೋಜನವನ್ನು 'ಸಾಧನೆಯ' ಪಟ್ಟಿಯಲ್ಲಿ ಪ್ರಚರಿಸಲಿಲ್ಲ. ಜಾತಿ ಮತಗಳ ಗುಂಗಿನಲ್ಲಿ ಇದಕ್ಕೆಲ್ಲಿ ಸ್ಥಾನ?

ಮೇಲಾಗಿ ಒಕ್ಕಲಿಗ ಸಮುದಾಯವೇ ಅಧಿಕವಿರುವ ದಕ್ಷಿಣ ಕರ್ನಾಟಕದಲ್ಲಿ ಕಾಂಗ್ರೆಸ್ ಅಪಾರವಾಗಿ ಸ್ಥಾನಗಳನ್ನು ಕಳೆದುಕೊಂಡಿತು. ಕಾಂಗ್ರೆಸ್ ಪಕ್ಷ ಟಿಕೇಟ್ ನೀಡಿಕೆಯಲ್ಲಿ ಕುರುಬರಿಗೆ ಹೆಚ್ಚಿನ ಆದ್ಯತೆ ಕೊಡಲಾಗಿದೆಯೆಂಬ ಆರೋಪಕ್ಕೆ ಗುರಿಯಾಯಿತು. ದಲಿತರಿಗೆ ಟಿಕೇಟ್ ಹಂಚಿಕೆಯಲ್ಲಿ ಎಡಗೈ, ಬಲಗೈ ಎಂಬ ವ್ಯತ್ಯಾಸದಲ್ಲಿ ಸಿಲುಕಿಕೊಂಡಿತು. ಹೀಗೆ ಚುನಾವಣೆಯಲ್ಲಿ ಜಾತಿಯ ಅಂಶ ಕಾಂಗ್ರೆಸ್‌ನ ಸೋಲಿನಲ್ಲಿ ಬಹಳಷ್ಟು ಪರಿಣಾಮ ಬೀರಿದೆ.

ಯಾವುದೇ ಸರಕಾರ ಜನತೆಯ ಮೂಲಭೂತ ಪ್ರಶ್ನೆಗಳನ್ನು ಬಗೆಹರಿಸಲು ಪರ್ಯಾಯವಾದ ಆರ್ಥಿಕ, ಸಾಮಾಜಿಕ ನೀತಿಗಳನ್ನು ಅನುಸರಿಸದೇ ಬದುಕುಳಿಯಲು ಜಾತಿ, ಮತಧರ್ಮ ದಂತಹ ಪ್ರಶ್ನೆಗಳನ್ನು ಆಧರಿಸಿದರೆ ಆಗುವ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸಬೇಕು.

●

ಜನಾದೇಶ ಮತ್ತು ಸರಕಾರ ರಚನೆ ಹಕ್ಕು – ಯಾರಿಗಿದೆ?

ಎರಡೂ ಬಿಜೆಪಿಗೆ ಎನ್ನುತ್ತಾರೆ ಮೂರನೇ ಬಾರಿ ಮುಖ್ಯಮಂತ್ರಿಯಾಗಿ ಸಡಗರದಿಂದ ಪ್ರಮಾಣವಚನ ಸ್ವೀಕರಿಸಿದ ಯೆಡಿಯೂರಪ್ಪನವನರು. (ಈ ಬರಹ ನಿಮಗೆ ತಲುಪುವ ಮೊದಲು ಅವರು ಮಾಜಿ ಮು.ಮ.ಯಾಗಿರುವ ಎಲ್ಲಾ ಸಾಧ್ಯತೆಗಳಿವೆ!) ಇದು 'ಅಸಾಮಾನ್ಯ ಮತ್ತು ಅಭೂತಪೂರ್ವ' ಗೆಲುವು ಎಂದಿದ್ದಾರೆ, ಪ್ರಮಾಣವಚನ ಸ್ವೀಕಾರದಲ್ಲಿ ಭಾಗವಹಿಸಲು ಅಷ್ಟೇ ಸಡಗರದಿಂದ ಸಜ್ಜಾಗುತ್ತಿದ್ದ (ಆದರೆ ಯಾಕೋ ಬರಲು ಹಿಂದೇಟು ಹೊಡೆದ) ಪ್ರಧಾನಿಗಳು.

ಇಲ್ಲಿ ಜನಾದೇಶ ಮತ್ತು ಸರಕಾರ ರಚನೆಯ ಹಕ್ಕು ಎರಡೂ ಸಂಬಂಧಿತವಾದ ಆದರೆ ಸ್ವಲ್ಪ ಭಿನ್ನವಾದ ಸಂಗತಿಗಳು. ಜನಾದೇಶ ಯಾರಿಗೆ ಎಂಬುದು ಮತಗಳಿಕೆ ಮತ್ತು ಸೀಟುಗಳಿಕೆ ಎರಡರ ಮೇಲೂ ಮತ್ತು ಇತರ ಗುಣಾತ್ಮಕ ಅಂಶಗಳ ಮೇಲೂ ಅವಲಂಬಿಸಿದೆ. ಸರಕಾರ ರಚನೆಯ ಹಕ್ಕು ಮುಖ್ಯವಾಗಿ ಸೀಟುಗಳಿಕೆಯ ಸಂಖ್ಯೆಗೆ ಸಂಬಂಧಿಸಿದ್ದು.

ನಿಜ ಚಿತ್ರವೇನು? ಈ ಅಂಕಿ–ಅಂಶಗಳು ಏನು ಹೇಳುತ್ತವೆ ಎಂದು ನೋಡೋಣ:


ಮತಗಳಿಕೆ ಶೇಕಡಾ			
ವರ್ಷ/ಪಕ್ಷ	ಕಾಂಗ್ರೆಸ್	ಬಿಜೆಪಿ	ಜೆಡಿ–ಎಸ್
2008	**34.8**	**33.9**	**19.0**
2013	**36.6**	**32.2***	**21.1**#
2014	**41.2**	**43.4**	**11.0**
2018	**38.0**	**36.2**	**18.6**
2018–2014	**– 4.2**	**– 7.2**	**+ 7.6**
2018–2013	**+ 1.4**	**+ 4.0**	**– 2.5**

ಸೀಟುಗಳಿಕೆ			
ವರ್ಷ/ಪಕ್ಷ	ಕಾಂಗ್ರೆಸ್	ಬಿಜೆಪಿ	ಜೆಡಿ–ಎಸ್
2008	**80**	**110**	**28**
2013	**122**	**52***	**40**#
2014	(77)	(132)	(15)
2018	**78**	**104**	**38**#
2018–2014	**+1**	**–28**	**+13**
2018–2013	**–54**	**+52**	**–2**

ಟಿಪ್ಪಣಿ: 2013 ಮತ್ತು 2018 ಮತಗಳಿಕೆ, ಸೀಟು ಹೋಲಿಸಲು ಅನುಕೂಲವಾಗುವಂತೆ

* ಕೆಜೆಪಿ ಮತ್ತು ಬಿ.ಎಸ್.ಆರ್. ಪಕ್ಷಗಳ ಸಂಖ್ಯೆಗಳನ್ನು 2013ರಲ್ಲಿ ಬಿಜೆಪಿಗೆ ಸೇರಿಸಲಾಗಿದೆ

ಬಿ.ಎಸ್.ಪಿ.ಯ ಮತಗಳನ್ನು ಜೆಡಿ–ಎಸ್ ಜತೆ ಕೊಡಲಾಗಿದೆ



ಕೃಪೆ: ಸುರೇಂದ್ರ, ದಿ ಹಿಂದೂ

ಈ ಚುನಾವಣೆಗಳಲ್ಲಿ ಬಿಜೆಪಿಯ ಮತಗಳಿಕೆ ಶೇ. 36.2 ಆಗಿದ್ದು ಅದು 104 ಸ್ಥಾನ ಪಡೆದಿದೆ. ಅದಕ್ಕಿಂತ ಕಾಂಗ್ರೆಸ್ ಶೇ. 1.8 ಹೆಚ್ಚು (ಶೇ. 38) ಮತ ಪಡೆದಿದ್ದು, 78 ಸೀಟು ಪಡೆದಿದೆ. ಜೆಡಿ–ಎಸ್–ಬಿಎಸ್.ಪಿ ಕೂಟ ಶೇ. 18.6 ಮತ ಮತ್ತು 38 ಸೀಟು ಪಡೆದಿದೆ. ಕಾಂಗ್ರೆಸ್–ಜೆಡಿಎಸ್ ಕೂಟ ಒಟ್ಟು ಶೇ. 56.6 ಮತ ಪಡೆದಿದ್ದು 115 ಸೀಟು ಪಡೆದಿದೆ. ಸ್ಪಷ್ಟ ಬಹುಮತದ ಅಗತ್ಯಕ್ಕಿಂತ 2 ಹೆಚ್ಚು ಸೀಟು ಪಡೆದಿದೆ. ಹಾಗಾದರೆ ಯಾರಿಗೆ ಜನಾದೇಶವಿದೆ? ಯಾರಿಗೆ ಸರಕಾರ ರಚಿಸುವ ಹಕ್ಕು ಸಿಗಬೇಕು? ಮತಗಳಿಕೆ ಮತ್ತು ಸೀಟುಗಳು ಎರಡರಲ್ಲೂ ಸ್ಪಷ್ಟ ಬಹುಮತ ಪಡೆದಿರುವ ಕಾಂಗ್ರೆಸ್–ಜೆಡಿಎಸ್ ಕೂಟಕ್ಕೋ? ಅಥವಾ ಸೀಟು ಮತಗಳಿಕೆ ಎರಡರಲ್ಲೂ ಹಿಂದಿರುವ ಬಿಜೆಪಿಗೋ? ಸರಕಾರ ರಚನೆಯ ದೃಷ್ಟಿಯಿಂದಲಂತೂ ಕಾಂಗ್ರೆಸ್–ಜೆಡಿಎಸ್ ಕೂಟಕ್ಕೇ ಆ ಹಕ್ಕು ಸಿಗಬೇಕೆಂಬುದು ಸ್ಪಷ್ಟ. ಈ ವರೆಗೆ ಭಾರತದಲ್ಲಿ ರಚಿತವಾದ ಸರಕಾರಗಳಲ್ಲಿ ಹೆಚ್ಚಿನವು ಸೀಟುಗಳಿಕೆಯಲ್ಲಿ ಬಹುಮತವಿದ್ದರೂ, ಮತಗಳಿಕೆಯಲ್ಲಿ ಬಹುಮತ (ಅಂದರೆ ಶೇ. 50ಕ್ಕಿಂತ ಹೆಚ್ಚು) ಗಳಿಸಿದ್ದು ಬಹಳ ಅಪರೂಪ. ಈಗ ಕೇಂದ್ರದಲ್ಲಿ ಇರುವ ಬಿಜೆಪಿಯ ಸರಕಾರ ಕೇವಲ ಶೇ. 31 ಮತಗಳಿಕೆಯ ಆಧಾರದ ಮೇಲೆ ಆಳುತ್ತಿದೆ. ಬಿಜೆಪಿ ಸರಕಾರ ಮತ್ತು ಪಕ್ಷದ ನಾಯಕರು ಅದರ ನಿರ್ಣಯದ ಬಗ್ಗೆ ತೀವ್ರ ಚರ್ಚೆಯಾದಾಗಲೆಲ್ಲ 'ನಮಗೆ ಜನಾದೇಶವಿದೆ' ಎಂದು ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಮೋದಿ ಸರಕಾರಕ್ಕೆ ಜನಾದೇಶ ಖಂಡಿತ ಇಲ್ಲ. ಸರಕಾರದ ಹಕ್ಕು ಇದೆ ಅಷ್ಟೇ. ಆದರೆ ಕರ್ನಾಟಕ ಬಿಜೆಪಿಗೆ ಜನಾದೇಶವೂ ಇಲ್ಲ, ಸರಕಾರ ರಚನೆಯ ಹಕ್ಕೂ ಇಲ್ಲ ಎಂಬದು ಸ್ಪಷ್ಟ.

ಬಿಜೆಪಿಯ ಮತಗಳಿಕೆ ಭಾರಿ ಏನೂ ಹೆಚ್ಚಾಗಿಲ್ಲ. 2013ರಲ್ಲಿ ಬಿಜೆಪಿ, ಕೆಜೆಪಿ, ಬಿ.ಎಸ್.ಆರ್. ಒಟ್ಟು ಪಡೆದಿದ್ದ ಶೇ 32.2 ಕ್ಕಿಂತ ಶೇ. 4 ಮತ ಹೆಚ್ಚಾಗಿದೆಯಷ್ಟೇ. 2008ಕ್ಕೆ ಹೋಲಿಸಿದರೆ ಕೇವಲ ಶೇ. 2.3 ಹೆಚ್ಚಾಗಿದೆ. ಅಂದರೆ ಪಕ್ಷದ ಆಂತರಿಕ ಕಚ್ಚಾಟದಿಂದ ನಷ್ಟವಾಗಿದ್ದ ಮತಗಳು ವಾಪಸು ಬಂದಿವೆ. ಬಿಜೆಪಿಯ 2018ರ ಮತಗಳಿಕೆ 2014ರ ಲೋಕಸಭಾ ಚುನಾವಣೆಗಿಂತ ಶೇ. 7.2ರಷ್ಟು ಕುಸಿದಿದೆ. 2014ರಲ್ಲಿ ಅದು 132 ವಿಧಾನಸಭಾ ಕ್ಷೇತ್ರಗಳಲ್ಲಿ ಪಡೆದ ಮುನ್ನಡೆಯಿಂದಲೂ 104ಕ್ಕೆ ಕುಸಿದಿದೆ. ಎರಡೂ ಚುನಾವಣೆಗಳಲ್ಲಿ ಬಿಜೆಪಿ ಕೊಚ್ಚಿಕೊಳ್ಳುವ 'ಮೋದಿ ಮ್ಯಾಜಿಕ್' ಇತ್ತು. ಹಾಗಾದರೆ ಶೇ. 7.2 ಮತಗಳಿಕೆಯಲ್ಲಿ ಮತ್ತು 28 ಸೀಟು ಮುನ್ನಡೆಯಲ್ಲಿ ಕುಸಿತದ ಅರ್ಥ ಏನು? ಎರಡು ಚುನಾವಣೆಗಳ ಸಂದರ್ಭದಲ್ಲಿ ವ್ಯತ್ಯಾಸ ಏನು? ಆಗ ಬಿಜೆಪಿ ಅಧಿಕಾರದಲ್ಲಿ ಇರಲಿಲ್ಲ, ಈಗ ಬಿಜೆಪಿ ಸರಕಾರ ರಚಿಸಿ 4 ವರ್ಷ ಆಗಿದೆ ಎಂಬುದಷ್ಟೇ. ಇದರರ್ಥ ಬಿಜೆಪಿ ಕೇಂದ್ರ ಸರಕಾರದ ಬಗ್ಗೆ ಭ್ರಮನಿರಸನವೆಂಬುದು ಬಿಟ್ಟರೆ ಇನ್ನೇನು? ರಾಜ್ಯದ ಮಟ್ಟಿಗೂ ಸೀಟುಗಳಲ್ಲೂ ಸ್ಪಷ್ಟ ಬಹುಮತ ಕೊಡದೆ ಜನ ಬಿಜೆಪಿ ಸರಕಾರವನ್ನು ಬಯಸುತ್ತಿಲ್ಲ ಎಂಬುದೇ ಜನರ ತೀರ್ಪು.

ಕಾಂಗ್ರೆಸಿನ ಮತಗಳಿಕೆ ಸಹ 2013ರ ಶೇ. 36.3 ಕ್ಕಿಂತ ಶೇ. 1.4 ರಷ್ಟು ಹೆಚ್ಚಾಗಿದೆ. ಜೆಡಿ–ಎಸ್ 2013ಕ್ಕಿಂತ ಶೇ. 2.7 ಕಡಿಮೆಯಾಗಿದೆ. ಕಾಂಗ್ರೆಸು 2008ರಲ್ಲಿ ಸಹ ಬಿಜೆಪಿಗಿಂತ ಹೆಚ್ಚು (ಶೇ. 34.76) ಮತಗಳಿಸಿ ಕಡಿಮೆ (80) ಸೀಟು ಪಡೆದಿತ್ತು. 2008ರಲ್ಲಿ ಬಿಜೆಪಿ ಕೇವಲ ಶೇ. 33.86 ಮತಗಳಿಸಿ 110 ಸೀಟು ಗಳಿಸಿತ್ತು. ಬಿಜೆಪಿ ಈ ಬಾರಿ ಸ್ವಲ್ಪ ಹೆಚ್ಚು ಮತ ಗಳಿಸಿ ಕಡಿಮೆ ಸೀಟು ಪಡೆದಿದೆ. ಬಿಜೆಪಿ ಕಾಂಗ್ರೆಸಿಗಿಂತ ಕಡಿಮೆ ಮತಗಳಿಸಿ ಹೆಚ್ಚು ಸೀಟು ಗಳಿಸುವುದು ತ್ರಿಪಕ್ಷೀಯ ಸ್ಪರ್ಧೆಯ ಮತ್ತು ಪಕ್ಷಗಳ ಬಲಾಬಲಗಳಲ್ಲಿ ಪ್ರಾದೇಶಿಕ ವೈಷಮ್ಯದ ಫಲ. ಬಿಜೆಪಿಯ ಜನಪ್ರಿಯತೆಯ ಫಲವಲ್ಲ.

ಹೀಗಿರುವಾಗ ಬಿಜೆಪಿ ಭಾರೀ ವಿಜಯ ಪಡೆದಿದೆ. ಜನಾದೇಶ ಪಡೆದಿದೆ. ಆದ್ದರಿಂದ ಸರಕಾರ ರಚನೆಯ ಹಕ್ಕು ಅದಕ್ಕಿದೆ ಎಂದು ಅವರು ಹೇಗೆ ಹೇಳುತ್ತಾರೆ? ಎಂದಿನ ಸುಳ್ಳುಗಳಿಂದ ಮಹಾಸುಳ್ಳುಗಳಿಗೆ ಏರಿದ ಅಬ್ಬರದ ನಕಾರಾತ್ಮಕ ಪ್ರಚಾರ, ಮತದಾನದ ದಿನದ ವರೆಗೂ ಎಲ್ಲ ಪತ್ರಿಕೆಗಳಲ್ಲಿ ಮುಖಪುಟದ ಜಾಹೀರಾತುಗಳು ಮತ್ತು ಟಿವಿಗಳಲ್ಲಿ ಏಕಮುಖಿ ಪ್ರಚಾರ, ಕೋಮು ಧ್ರುವೀಕರಣ, ಕೇಂದ್ರ ಸರಕಾರದ ಅಧಿಕಾರಗಳ ದುರ್ಬಳಕೆ ಇತ್ಯಾದಿಗಳ ನಂತರವೂ, 2014 ರ ಮಟ್ಟ ತಲುಪಲು ಸಾಧ್ಯವಾಗಿಲ್ಲ, ಆದರೆ 2008 ರ ಮಟ್ಟದ ಹತ್ತಿರಕ್ಕೆ, ಆಗಿನಂತೆ ಕಾಂಗ್ರೆಸಿಗಿಂತ ಕಡಿಮೆ ಮತಶೇಕಡಾದೊಂದಿಗೆ ಮರಳಲು ಸಾಧ್ಯವಾಗಿದೆ!

ಹಾಗಾದರೆ ಕಾಂಗ್ರೆಸಿಗೆ ಜನಾದೇಶವಿದೆಯೇ? ಮುಖ್ಯಮಂತ್ರಿಯೇ ಎರಡು ಕ್ಷೇತ್ರಗಳಲ್ಲಿ ಒಂದರಲ್ಲಿ ಅದೂ ಅಲ್ಪಮತ ಅಂತರದಿಂದ ಗೆದ್ದಿರುವುದು, 16 ಮಂತ್ರಿಗಳ ಸೋಲು, 52 ಸೀಟುಗಳನ್ನು ಕಳೆದುಕೊಂಡಿರುವುದು. ಹೆಚ್ಚಿನ ಪ್ರದೇಶಗಳಲ್ಲಿ ಸೀಟುಗಳಲ್ಲಿ ಮುನ್ನಡೆ ಸಾಧಿಸಲಾಗದಿರುವುದು – ಇವೆಲ್ಲಾ ಗಮನಿಸಿದಾಗ ಕಾಂಗ್ರೆಸಿಗೂ ಜನಾದೇಶ ಇದೆ ಎಂದು ಹೇಳಲೂ ಬರುವುದಿಲ್ಲ. ಮತ್ತೆ ಜೆಡಿ–ಎಸ್ ಗೆ ಜನಾದೇಶವಿದೆಯೆ? ಆ ಪಕ್ಷ ಸಹ ಬಿ.ಎಸ್.ಪಿ, ಜತೆ ಮೈತ್ರಿ ರಚಿಸಿ ಎಲ್ಲಾ ಸೀಟುಗಳಲ್ಲಿ ಸ್ಪರ್ಧಿಸಿದರೂ ಮತಗಳಿಕೆ ಮತ್ತು ಸೀಟುಗಳಿಕೆ ಎರಡೂ ಕಡಿಮೆಯಾಗಿದೆ.

ಜನಾದೇಶ ನಿಜವಾಗಿಯೂ ಯಾವ ಪಕ್ಷಕ್ಕೂ ಇಲ್ಲ. ಆದ್ಧರಿಂದಲೇ ಆಳುವ ಸರ್ಕಾರದ ವಿರುದ್ಧ ಭಾರೀ ಅಲೆಯಾಗಲಿ, ವಿರೋಧ ಪಕ್ಷಗಳ ಪರವಾಗಿ ಭಾರೀ ಉತ್ಸಾಹವಾಗಲಿ ಕಂಡು ಬರಲಿಲ್ಲ. ಆದರೆ ಜನ ನಿರ್ಲಕ್ಷದಿಂದ ಈ ತೀರ್ಪು ಕೊಟ್ಟಿದ್ದಾರೆ ಎಂದು ಹೇಳುವಂತಿಲ್ಲ. ಏಕೆಂದರೆ ಈ ಬಾರಿ ಅತ್ಯಂತ ಹೆಚ್ಚು ಮತದಾನ ಆಗಿದೆ. ಮೂರೂ ಪಕ್ಷಗಳ ಬಗ್ಗೆ ಜನರಿಗೆ ಅತೃಪ್ತಿಯಿದೆ. ಯಾವ ಪಕ್ಷದ ನೀತಿಗಳನ್ನು ಜನ ಮೆಚ್ಚಿಕೊಂಡಿಲ್ಲ. ಯಾವ ಪಕ್ಷವೂ ಸ್ವತಂತ್ರವಾಗಿ ಸರಕಾರ ನಡೆಸಲು ನಾಲಾಯಕ್ಕು ಎಂದು ಜನ ತೀರ್ಪು ಕೊಟ್ಟಿದ್ದಾರೆ. ಅದರರ್ಥ ಯಾವುದೇ ಎರಡು ಪಕ್ಷಗಳು ಸೇರಿ ಸರಕಾರ ಮಾಡಬೇಕು ಅಂತಲೇ. ಅಂದರೆ ಈಗಿನ ಚುನಾವಣಾ ವ್ಯವಸ್ಥೆಯ ಮಿತಿಯೊಳಗೆ ಬಂದಿರುವ ಮತಗಳಿಕೆ ಮತ್ತು ಸೀಟುಗಳಲ್ಲಿ ವ್ಯಕ್ತವಾಗಿರುವ ಜನಾದೇಶ ಸಮ್ಮಿಶ್ರ ಸರಕಾರಕ್ಕೆ ಇದೆ.

ನಿಜವಾಗಿಯೂ ಹೇಳಬೇಕಾದರೆ ಬಿಜೆಪಿ–ಜೆಡಿ(ಎಸ್) ಕೂಟ ಸರಕಾರ ರಚಿಸಿದ್ದರೂ ಅದನ್ನು 'ಅನೈತಿಕ' ಅಥವಾ 'ಜನಾದೇಶಕ್ಕೆ ವಿರುದ್ಧವಾದದ್ದು' ಎಂದು ಹೇಳುವಂತಿಲ್ಲ. ಆದರೆ ಜೆಡಿ–ಎಸ್ ಗೆ ಕಾಂಗ್ರೆಸ್ ಬೆಂಬಲ ಘೋಷಿಸಿರುವಾಗ ಅದನ್ನು ಬಿಟ್ಟು ಬಿಜೆಪಿ ಎರಡೂ ಪಕ್ಷಗಳ ಶಾಸಕರ ಕುದುರೆ ವ್ಯಾಪಾರ ಮಾಡಿ ಸರಕಾರ ರಚಿಸಲು ಅವಕಾಶ ಕೊಡುವುದು ಖಂಡಿತ ಅನೈತಿಕ ಮತ್ತು ಜನಾದೇಶದ ವಿರುದ್ಧ ಸಹ. ಕಾಂಗ್ರೆಸ್–ಜೆಡಿ(ಎಸ್) ಪರಸ್ಪರ ಆಪಾದನೆ ಮಾಡಿವೆ, ದೂಷಿಸಿವೆ. ಆದ್ದರಿಂದ ಅವು ಒಟ್ಟಿಗೆ ಸರಕಾರ ರಚನೆ ಮಾಡುವಂತಿಲ್ಲ ಎಂಬುದೂ ಹಾಸ್ಯಾಸ್ಪದ. ಅವುಗಳಿಗೆ ಏನೂ ಸಾಮಾನ್ಯ ಅಂಶಗಳಿಲ್ಲ ಎನ್ನುವಂತಿಲ್ಲ. ಎರಡೂ ಪಕ್ಷಗಳು ಕನಿಷ್ಟ ನಮ್ಮ ಸೆಕ್ಯುಲರ್ ಪ್ರಜಾಪ್ರಭುತ್ವ ಎತ್ತಿಹಿಡಿಯುವ ಸಂವಿಧಾನಕ್ಕೆ ಬದ್ಧವಾಗಿರುವವು. ಅದನ್ನು ಬದಲಾಯಿಸಿ ಹಿಂದೂ ರಾಷ್ಟ್ರವೋ ಇನ್ನೇನೋ ಮಾಡಲು ಹೊರಟ ಪಕ್ಷಗಳಲ್ಲ. ಆರ್ಥಿಕ ನೀತಿಗಳಲ್ಲಂತೂ ಮೂರು ಪಕ್ಷಗಳಿಗೆ ಯಾವುದೇ ಪ್ರಮುಖ ವ್ಯತ್ಯಾಸಗಳಿಲ್ಲ.

ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಹಿಂದೆ ಸುಭದ್ರ ಸರಕಾರ ಕೊಟ್ಟಿಲ್ಲ. ಆದ್ದರಿಂದ ಈಗಲೂ ಕೊಡುವ ಸಾಧ್ಯತೆಯಿಲ್ಲ ಎಂದೂ ಹೇಳಲಾಗುತ್ತಿದೆ. ಹಿಂದಿನ ಹಲವು ಒಂದೇ ಪಕ್ಷದ (ಕಾಂಗ್ರೆಸ್, ಜನತಾ ಮತು ಬಿಜೆಪಿ) ಸರಕಾರಗಳೂ ಸುಭದ್ರವಾಗಿರಲಿಲ್ಲ. ಬಿಜೆಪಿ ಕುದುರೆ ವ್ಯಾಪಾರದ ಆಧಾರದ ಮೇಲೆ ರಚಿಸಿದ ಸರಕಾರವಂತೂ ಅತ್ಯಂತ ಅಭದ್ರವಾಗಿತ್ತು. ಮುಖ್ಯಮಂತ್ರಿಯೇ ಜೈಲಿಗೆ ಹೋಗುವ ಮೂರು ಮುಖ್ಯಮಂತ್ರಿಗಳನ್ನು ಕಂಡ ಸರಕಾರವಾಗಿತ್ತು ಅದು. ಆದ್ದರಿಂದ ಸುಭದ್ರತೆಯ ದೃಷ್ಟಿಯಿಂದಲೂ ಕಾಂಗ್ರೆಸ್–ಜೆಡಿ(ಎಸ್) ಕೂಟಕ್ಕೆ ಅವಕಾಶ ನಿರಾಕರಿಸುವುದು ಅತಾರ್ಕಿಕವಾಗುತ್ತದೆ.

ಇದರರ್ಥ ಕಾಂಗ್ರೆಸ್–ಜೆಡಿ(ಎಸ್) ಕೂಟ ಅತ್ಯಂತ ಸುಭದ್ರ ನೈತಿಕ ಉತ್ತಮ ಸರಕಾರ ಕೊಡುತ್ತದೆ ಎಂದಲ್ಲ. ಅವುಗಳಿಗೆ ಸರಕಾರ ರಚಿಸುವ ಹಕ್ಕು ಇದೆ ಎಂದಷ್ಟೇ. ಎರಡು ವಾರ ಸಮಯ ಸಿಕ್ಕಿದರೆ ಕುದುರೆ ವ್ಯಾಪಾರ ಮಾಡಿ ಬಹುಮತ 'ಗಳಿಸಬಹುದು' ಎಂಬ ಬಿಜೆಪಿಯ ನಿರೀಕ್ಷೆ, ಅದನ್ನು ತಡೆಯಲು ಕಾಂಗ್ರೆಸ್–ಜೆಡಿ(ಎಸ್) ಶಾಸಕರನ್ನು ರೆಸಾರ್ಟಿನಲ್ಲಿ ಕೂಡಿ ಹಾಕುವ ಪರಿಸ್ಥಿತಿ ಇಂದಿನ ರಾಜಕಾರಣ ತಲುಪಿದ ನೈತಿಕ ಅವನತಿಯ ದ್ಯೋತಕವೇ. ಅನೈತಿಕತೆ, ಅಭದ್ರತೆ, ಅಧಿಕಾರಶಾಹಿ ಈಗಿನ ವ್ಯವಸ್ಥೆಯಲ್ಲೇ ಅಡಕವಾಗಿದೆ. ಚುನಾವಣಾ ರಾಜಕಾರಣ ಹಣಬಲ–ತೋಳ್ಬಲ ಇರುವ ಬಂಡವಳಿಗರು, ರೀಯಲ್ ಎಸ್ಟೇಟ್, ಗಣಿ, ಗ್ರಾನೈಟ್, ಶಿಕ್ಷಣ ಮಾಫಿಯಾಗಳಿಗೆ ಮಾತ್ರ ತೆರೆದಿರುವುದು, ಮೂರೂ ಪಕ್ಷಗಳಲ್ಲಿ ಇಂಥವರೇ ತುಂಬಿರುವುದು ಇದಕ್ಕೆ ಮುಖ್ಯ ಕಾರಣ. ಚುನಾವಣಾ ವ್ಯವಸ್ಥೆಯಲ್ಲಿ ಹಣಬಲ–ತೋಳ್ಬಲ ಕಡಿಮೆ ಮಾಡುವ ಪ್ರಮಾಣಾತ್ಮಕ ಪ್ರಾತಿನಿಧ್ಯ, ಸರಕಾರವೇ ಚುನಾವಣಾ ವೆಚ್ಚ ಭರಿಸಿ ಖಾಸಗಿ ಹಣ ಖರ್ಚು ಮಾಡಲು ಅವಕಾಶವೇ ಇಲ್ಲದಿರುವ ತೀವ್ರ ಸುಧಾರಣೆಗಳನ್ನು ತರದೆ ಇದನ್ನು ಸುಧಾರಿಸುವುದೂ ಸಾಧ್ಯವಿಲ್ಲ. ಬಂಡವಾಳಶಾಹಿ–ಭೂಮಾಲಕ ಆಳುವ ವರ್ಗಗಳ ಯಾವ ಗ್ಯಾಂಗು ಮುಂದಿನ 5 ವರ್ಷಗಳ ಕಾಲ ಲೂಟಿ ಮಾಡಬೇಕೆಂದು ನಿರ್ಧರಿಸುವುದಕ್ಕೆ ಮಾತ್ರ ಪ್ರಜಾಪ್ರಭುತ್ವ ಸೀಮಿತವಾಗಿರುವವರೆಗೂ ಇದಕ್ಕೆ ಪರಿಹಾರವಿಲ್ಲ. ●





ಚುನಾವಣೆಯ ಫಲಿತಾಂಶ: ಕಲಿಯಬೇಕಾದ ಪಾಠಗಳು

ಕೋಮುವಾದಿ ಧ್ರುವೀಕರಣ ಹುಟ್ಟಿಹಾಕುವ ತನ್ನ ಸಿದ್ಧ ಸೂತ್ರದ ಮೂಲಕ ಚುನಾವಣಾ ಲಾಭ ಪಡೆಯುವುದು ಬಿಜೆಪಿಗೆ ಸಾಧ್ಯವಾಗಿದೆ.
ಇತ್ತ ಬಿಜೆಪಿ-ಆರ್‌ಎಸ್‌ಎಸ್ ಕೂಟವನ್ನು ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕವಾಗಿ ಎದುರಿಸಲು ಕಾಂಗ್ರೆಸ್ ಈಗಲೂ ಅಸಮರ್ಥವಾಗಿದೆ ಎಂಬುದನ್ನು ಅದರ ಈ ಚುನಾವಣಾ ಸೋಲು ಎತ್ತಿ ತೋರಿದೆ. ಜನರ ಆರ್ಥಿಕ ಸ್ಥಿತಿ ಸುಧಾರಣೆಗೆ ಮತ್ತು ಜೀವನೋಪಾಯಕ್ಕೆ ಸಂಬಂಧಿಸಿದಂತೆ ಯಾವುದೇ ಉತ್ತಮ ವಿಚಾರಗಳನ್ನು ಮಂಡಿಸಿ ಜನರಿಗೆ ಮನವರಿಕೆ ಮಾಡುವಲ್ಲಿ ಕೂಡ ಕಾಂಗ್ರೆಸ್ ಸಮರ್ಥವಾಗಿಲ್ಲ.
ಈ ಚುನಾವಣೆಯ ಏಕೈಕ ಸಕಾರಾತ್ಮಕ ಬೆಳವಣಿಗೆಯೆಂದರೆ, ಸರಕಾರ ರಚನೆಗಾಗಿ ಜೆಡಿ(ಎಸ್)ಗೆ ಶೀಘ್ರವಾಗಿ ಕಾಂಗ್ರೆಸ್ ಬೆಂಬಲ ಘೋಷಿಸಿರುವುದು.
ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಚುನಾವಣೆಯಿಂದ ಸರಿಯಾದ ತೀರ್ಮಾನಗಳಿಗೆ ಬರಬೇಕಿದೆ.

• ಪ್ರಕಾಶ್ ಕಾರಟ್

ಕರ್ನಾಟಕ ಚುನಾವಣೆಗಳ ಫಲಿತಾಂಶವಾಗಿ ಅತಂತ್ರ ವಿಧಾನಸಭೆ ರಚನೆಗೊಂಡಿದೆ. ಬಿಜೆಪಿ 104 ಸ್ಥಾನಗಳನ್ನು ಪಡೆದು ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ, ಆದರೆ ಬಹುಮತಕ್ಕೆ ಎಂಟು ಸ್ಥಾನಗಳಿಂದ ಹಿಂದಿದೆ. ಕಾಂಗ್ರೆಸ್‌ಗೆ ಕೇವಲ 78 ಸ್ಥಾನಗಳು ಹಾಗೂ ಜೆಡಿ(ಎಸ್)ಗೆ 37 ಸ್ಥಾನಗಳು ದೊರಕಿವೆ. ಅದರ ಮಿತ್ರಪಕ್ಷ ಬಿಎಸ್‌ಪಿ ಒಂದು ಸ್ಥಾನದಲ್ಲಿ ಗೆದ್ದಿದೆ.

ಕಾಂಗ್ರೆಸ್ ಮತ್ತು ಜೆಡಿ(ಎಸ್) ಒಟ್ಟು 116 ಸದಸ್ಯರೊಂದಿಗೆ ಬಹುಮತ ಹೊಂದಿದ್ದು ಸರಕಾರ ರಚಿಸಲು ಜೆಡಿ(ಎಸ್) ನಾಯಕ ಎಚ್.ಡಿ. ಕುಮಾರಸ್ವಾಮಿಗೆ ಬೆಂಬಲ ನೀಡಲು ಕಾಂಗ್ರೆಸ್ ನಿರ್ಧರಿಸಿದೆ. ಎರಡೂ ಪಕ್ಷಗಳ ನಾಯಕರು ರಾಜ್ಯಪಾಲ ವಾಜುಭಾಯಿ ವಾಲರನ್ನು ಭೇಟಿಯಾಗಿ ಸರಕಾರ ರಚಿಸುವ ದಾವೆಯನ್ನು ಮಂಡಿಸಿದರು. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಕೂಡ ರಾಜ್ಯಪಾಲರ ಮುಮದೆ ಸರಕಾರ ರಚನೆಯ ಹಕ್ಕನ್ನು ಮಂಡಿಸಿದರು.

ಶಾಸಕರ ಸಂಖ್ಯೆಯ ಆಧಾರದಲ್ಲಿ ಯಾವ ನಾಯಕ ಒಂದು ಸ್ಥಿರ ಸರಕಾರವನ್ನು ರಚಿಸಬಹುದು ಎಂಬುದನ್ನು ರಾಜ್ಯಪಾಲರು ನಿರ್ಧರಿಸಬೇಕು. ಈ ನಿರ್ದಿಷ್ಟ ಪ್ರಕರಣದಲ್ಲಿ, ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಬಿಜೆಪಿ ಇತರ ಪಕ್ಷಗಳು ಮತ್ತು ಶಾಸಕರ ಬೆಂಬಲ ಪಡೆಯಲು ಅಸಮರ್ಥವಾಗಿರುವಾಗ ಕಾಂಗ್ರೆಸ್-ಜೆಡಿಎಸ್‌ನ ಚುನಾವಣೋತ್ತರ ಮೈತ್ರಿ ಮಂಡಿಸಿರುವ ಸರಕಾರ ರಚಿಸುವ ಹಕ್ಕನ್ನು ರಾಜ್ಯಪಾಲರು ಪರಿಶೀಲಿಸಬೇಕು. ಇತ್ತೀಚಿನ ದಿನಗಳಲ್ಲಿ ಗೋವಾ, ಮಣಿಪುರ ಮತ್ತು ಮೇಘಾಲಯ ರಾಜ್ಯಪಾಲರು ಮಾಡಿರುವುದು ಇದನ್ನೇ. ಚುನಾವಣೋತ್ತರ ಮೈತ್ರಿ ಕೂಟಕ್ಕೆ ಬಹುಮತದ ಶಾಸಕರ ಬೆಂಬಲವಿದೆ ಎನ್ನುವುದು ಮನವರಿಕೆಯಾದಲ್ಲಿ ಆ ಮೈತ್ರಿಕೂಟದ ನಾಯಕರನ್ನು ಸರಕಾರ ರಚನೆಗೆ ಆಹ್ವಾನಿಸಬಹುದು ಎಂದು 2006ರಲ್ಲಿ ರಾಮೇಶ್ವರಪ್ರಸಾದ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠ ತೀರ್ಪು ನೀಡಿದೆ.

ರಾಜ್ಯಪಾಲರು ಅದನ್ನು ಬಿಟ್ಟು ಬೇರೆ ಯಾವುದೇ ಕ್ರಮಕ್ಕೆ ಮುಂದಾದರೂ ಅದು ಹೊಲಸು ವ್ಯವಹಾರಗಳು ಮತ್ತು ಶಾಸಕರ ಖರೀದಿಗಾಗಿ ಲಂಚ ನೀಡುವುದಕ್ಕೆ ಬಾಗಿಲು ತೆರೆಯಲಿದೆ. ಈ ರೀತಿ ಶಾಸಕರ ಖರೀದಿಯಲ್ಲಿ ಬಿಜೆಪಿ ಪ್ರವೀಣ ಎಂಬುದನ್ನು 2008ರ 'ಆಪರೇಷನ್ ಕಮಲ' ಸಾಬೀತುಪಡಿಸಿದೆ. ಆಗ ಅದು ಬಳ್ಳಾರಿ ಗಣಿ ಮಾಫಿಯಾದ ನೆರವಿನಿಂದ ವಿವಿಧ ಪಕ್ಷಗಳ ಸುಮಾರು ಒಂದು ಡಜನ್ ಶಾಸಕರನ್ನು ಖರೀದಿಸಿತ್ತು.

ಆದರೆ ಕರ್ನಾಟಕ ರಾಜ್ಯಪಾಲ ವಜುಭಾಯಿ ವಾಲಾ ಸದನದಲ್ಲಿ ಯಡಿಯೂರಪ್ಪ ಅವರಿಗೆ ಬಹುಮತ ಇದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸದೆಯೇ ಯಡಿಯೂರಪ್ಪರಿಗೆ ಪ್ರಮಾಣವಚನ ಬೋಧಿಸಿದ್ದಾರೆ. ಅಷ್ಟು ಮಾತ್ರವಲ್ಲದೆ ಸದನದಲ್ಲಿ ಬಹುಮತ ಸಾಬೀತುಪಡಿಸಲು 15 ದಿನಗಳ ಕಾಲಾವಕಾಶ ನೀಡಿದ್ದಾರೆ. ಅವರ ಈ ಪಕ್ಷಪಾತಿ ಕ್ರಮವು ಆರ್‌ಎಸ್‌ಎಸ್ ಜೊತೆಗಿನ ಅವರ ಸುದೀರ್ಘ ಸಾಂಗತ್ಯಕ್ಕೆ ಅನುಗುಣವಾಗಿದೆ. ಹಾಗೂ ಭಾರತದಲ್ಲಿ ರಾಜ್ಯಪಾಲರು ಆಳುವ ಒಕ್ಷದ ಅಣತಿಯಂತೆ ನಡೆದುಕೊಳ್ಳುತ್ತಾರೆಯೇ ಹೊರತು ಸಂವಿಧಾನದ ನಿಯಮಗಳಂತೆ ಕಾರ್ಯ ನಿರ್ವಹಿಸುವುದಿಲ್ಲ ಎಂಬ ಅಂಶವನ್ನು ಮತ್ತೊಮ್ಮೆ ಪುಷ್ಟೀಕರಿಸುತ್ತದೆ ಅಷ್ಟೆ.

ಕರ್ನಾಟಕ ವಿಧಾನಸಭೆ ಚುನಾವಣೆಯ ಫಲಿತಾಂಶಗಳ ವಿವರವಾದ ವಿಶ್ಲೇಷಣೆ ಇನ್ನೂ ಆಗಬೇಕಿದೆಯಷ್ಟೆ. ಆದರೆ ಈ ಫಲಿತಾಂಶವು ಸರ್ವಾಧಿಕಾರಶಾಹಿ-ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಬಯಸುವ ಶಕ್ತಿಗಳಿಗೆ ಕೆಲವು ಮುಖ್ಯ ಪಾಠಗಳನ್ನು ಒಳಗೊಂಡಿದೆ. ಕೋಮುವಾದಿ ಧ್ರುವೀಕರಣದ ತನ್ನ ಸಿದ್ಧ ಸಫಲ ಸೂತ್ರದ ಮೂಲಕ ಚುನಾವಣಾ ಲಾಭ ಮಾಡಿಕೊಳ್ಳುವುದು, ಗರಿಷ್ಠ ಚುನಾವಣಾ ಲಾಭಕ್ಕಾಗಿ ಜಾತಿ ಸಮೀಕರಣಗಳನ್ನು ರೂಪಿಸುಉವದು, ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಬಳಸಿಕೊಂಡು ಪರಿಣಾಮಕಾರಿ ಚುನಾವಣಾ ಯಂತ್ರವನ್ನು ಸಜ್ಜುಗೊಳಿಸುವುದು, ಹಾಗೂ ಅಪಾರ ಹಣದ ಶಕ್ತಿಯನ್ನು ಬಳಸುವುದು ಬಿಜೆಪಿಗೆ ಸಾಧ್ಯವಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ 19 ಸ್ಥಾನಗಳ ಪೈಕಿ 16ರಲ್ಲಿ ಬಿಜೆಪಿ ಗೆದ್ದಿರುವುದು ಅದರ ಕೋಮುವಾದಿ ಪ್ರಚಾರದ ವಿಷಮಯ ಪರಿಣಾಮ ಹಾಗೂ ಆಮೂಲಕ ಸೃಷ್ಟಿಸಿದ ವಿಭಜನೆಗಳನ್ನು ಸಂಕೇತಿಸುತ್ತದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಚುನಾವಣಾ ಪ್ರಚಾರ ನಿಂದನೆ ಹಾಗೂ ಸುಳ್ಳುಗಳ ಒಂದು ಹೊಸ ಎತ್ತರವನ್ನು ತಲುಪಿತ್ತು. ಕರ್ನಾಟಕದವರಾದ ಕಾರಿಯಪ್ಪ ಮತ್ತು ತಿಮ್ಮಯ್ಯರಂಥ ಸೇನಾಧಿಕಾರಿಗಳನ್ನು ನೆಹರೂ ಸರಕಾರ ಹೇಗೆ ನಡೆಸಿಕೊಂಡಿತು ಎಂಬ ಸುಳ್ಳುಕಂತೆಗಳನ್ನು ಹೇಳುವ ಮೂಲಕ ಮೋದಿ ಸೇನೆಯನ್ನು ಚುನಾವಣಾ ಕಣಕ್ಕೆ ಎಳೆದು ತಂದರು.

ಕಾಂಗ್ರೆಸ್‌ಗೆ ಕರ್ನಾಟಕದಲ್ಲಿನ ಸೋಲು ಒಂದು ದೊಡ್ಡ ಹೊಡೆತವಾಗಿದೆ. ಕೇಂದ್ರಾಡಳಿತ ಪ್ರದೇಶ ಪುದುಚೇರಿ ಬಿಟ್ಟರೆ ದಕ್ಷಿಣದಲ್ಲಿ ಕಾಂಗ್ರೆಸ್ ಸರಕಾರವಿದ್ದ ಏಕೈಕ ರಾಜ್ಯವಾಗಿತ್ತು ಕರ್ನಾಟಕ. ಬಿಜೆಪಿ-ಆರ್‌ಎಸ್‌ಎಸ್ ಕೂಟವನ್ನು ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕವಾಗಿ ಎದುರಿಸಲು ಕಾಂಗ್ರೆಸ್ ಈಗಲೂ ಅಸಮರ್ಥವಾಗಿದೆ ಎಂಬುದನ್ನು ಚುನಾವಣಾ ಸೋಲು ಎತ್ತಿ ತೋರಿದೆ. ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ದೇವಸ್ಥಾನಗಳು ಮತ್ತು ಮಠಗಳಿಗೆ ಭೇಟಿ ಕೊಟ್ಟಿದ್ದು ಹಿಂದುತ್ವ ಶಕ್ತಿಗಳನ್ನು ಎದುರಿಸುವಲ್ಲಿ ಒಂದು ದೋಷಪೂರ್ಣ ಹಾಗೂ ರಾಜಿಯ ಧೋರಣೆ ಎನ್ನುವುದು ಸಾಬೀತಾಗಿದೆ. ಕಾಂಗ್ರೆಸ್ ಯಾವ ನವ-ಉದಾರವಾದಿ ನೀತಿಗಳ ಪರವಾಗಿದೆಯೋ ಆ ನೀತಿಗಳನ್ನು ಇನ್ನಷ್ಟು ತೀವ್ರ ರೀತಿಯಲ್ಲಿ ಮೋದಿ ಸರಕಾರ ಅನುಸರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಜನರ ಆರ್ಥಿಕ ಸ್ಥಿತಿ ಸುಧಾರಣೆಗೆ ಮತ್ತು ಜೀವನೋಪಾಯಕ್ಕೆ ಸಂಬಂಧಿಸಿದಂತೆ ಯಾವುದೇ ಉತ್ತಮ ವಿಚಾರಗಳನ್ನು ಮಂಡಿಸಿ ಜನರಿಗೆ ಮನವರಿಕೆ ಮಾಡುವಲ್ಲಿ ಕೂಡ ಕಾಂಗ್ರೆಸ್ ಸಮರ್ಥವಾಗಿಲ್ಲ.

ಈ ಚುನಾವಣೆಯ ಏಕೈಕ ಸಕಾರಾತ್ಮಕ ಬೆಳವಣಿಗೆಯೆಂದರೆ, ಸರಕಾರ ರಚನೆಗಾಗಿ ಜೆಡಿ(ಎಸ್)ಗೆ ಶೀಘ್ರವಾಗಿ ಕಾಂಗ್ರೆಸ್ ಬೆಂಬಲ ಘೋಷಿಸಿರುವುದು.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಚುನಾವಣೆಯಿಂದ ಸರಿಯಾದ ತೀರ್ಮಾನಗಳಿಗೆ ಬರಬೇಕಿದೆ. ಮೋದಿ ಸರಕಾರದ ನೀತಿಗಳ ವಿರುದ್ಧ ನಿರಂತರ ರಾಜಿರಹಿತ ಹೋರಾಟಗಳನ್ನು ನಡೆಸುವುದರಿಂದ ಮಾತ್ರವೇ ಬಿಜೆಪಿ ವಿರುದ್ಧ ಜನರ ಒಗ್ಗಟ್ಟನ್ನು ಬೆಸೆಯಬಹುದಾಗಿದೆ. ಎಲ್ಲಾ ಜಾತ್ಯತೀತ ಮತ್ತು ಜನತಾಂತ್ರಿಕ ಶಕ್ತಿಗಳನ್ನು ಒಗ್ಗೂಡಿಸಿ ಕೋಮುವಾದಿ ಶಕ್ತಿಗಳು ಮತ್ತು ಅವುಗಳ ಧಸಕ್ರಿಯೆಗಳ ವಿರುದ್ಧೊಂದು ರಾಜಿರಹಿತ ಹೋರಾಟವನ್ನು ನಡೆಸುವುದು ಅಗತ್ಯ. ಒಂದು ಪರ್ಯಾಯ ಕಾರ್ಯಕ್ರಮದ ಸುತ್ತ ಇಂಥ ಹೋರಾಟಗಳು ಮತ್ತು ಚಳವಳಿಗಳು ಬೆಳೆದುಬಂದಾಗಲಷ್ಟೆ ಒಂದು ವಿಶ್ವಾಸಾರ್ಹ ಪರ್ಯಾಯ ಎದ್ದು ಬರುತ್ತದೆ.

ಅನು: ವಿಶ್ವ


ನಮ್ಮ ಚುರು-ಟ್ವೀಟ್

ಕರ್ನಾಟಕದಲ್ಲಿ ಬಿಜೆಪಿಗೆ ಬಹುಮತ ಸಿಕ್ಕಿಲ್ಲ. ಆದರೆ ಜನರು ಕಾಂಗ್ರೆಸ್ 'ವಿರುದ್ಧ' ಮತ ಚಲಾಯಿಸಿದ್ದಾರೆ. ರಾಯ ಅಭಿವೃದ್ಧಿ ವಿಷಯಗಳ ಮಾತನಾಡದ ಎರಡೂ ದೊಡ್ಡ ಪಕ್ಷಗಳನ್ನು ಮತದಾರರು ಶಿಕ್ಷಿಸಿದ್ದಾರೆ. ಮತದಾರರು ಪರಿಣಾಮಕಾರಿ ಪರ್ಯಾಯದ ಹುಡುಕಾಟದಲ್ಲಿದ್ದಾರೆ. ಆದರೆ ಅದು ಲಭ್ಯವಾಗಿಲ್ಲ ಎಂಬುದು ಸ್ಪಷ್ಟವಾಗಿದೆ.


-ಯೋಗೇಂದ್ರ ಯಾದವ್
ಸ್ವರಾಜ್ ಇಂಡಿಯಾ ಪಕ್ಷದ
ರಾಷ್ಟ್ರೀಯ ಅಧ್ಯಕ್ಷರು

ಕರ್ನಾಟಕದಲ್ಲಿ ನಡೆದ ಚುನಾವಣಾ ಪ್ರಚಾರ ನಿಂದನೆ ಹಾಗೂ ಸುಳ್ಳುಗಳ ಒಂದು ಹೊಸ ಎತ್ತರವನ್ನು ತಲುಪಿತು. ಕರ್ನಾಟಕದವರಾದ ಕಾರಿಯಪ್ಪ ಮತ್ತು ತಿಮ್ಮಯ್ಯರಂಥ ಸೇನಾಧಿಕಾರಿಗಳನ್ನು ನೆಹರೂ ಸರಕಾರ ಹೇಗೆ ನಡೆಸಿಕೊಂಡಿತು ಎಂಬ ಸುಳ್ಳುಕಂತೆಗಳನ್ನು ಹೇಳುವ ಮೂಲಕ ಮೋದಿ ಸೇನೆಯನ್ನು ಚುನಾವಣಾ ಕಣಕ್ಕೆ ಎಳೆದು ತಂದರು.

ಕಾಂಗ್ರೆಸಿಗರು ಯಾರೂ ಮರಣದಂಡನೆಗೆ ಗುರಿಯಾಗಿದ್ದ ಭಗತ್‌ಸಿಂಗ್ ಅವರನ್ನು ಜೈಲಿನಲ್ಲಿ ಭೇಟಿಯಾಗಿದ್ದಾರೆಂಬ ಅವರ ಇನ್ನೊಂದು ಸುಳ್ಳು-ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ಲೇವಡಿಗೆ ಗುರಿಯಾಯಿತು.. ಆರೆಸ್ಸೆಸ್ ಮುಖಂಡರು ಯಾರು ಭೇಟಿಯಾಗಿದ್ದರೆಂದು ಕೆಲವರು ಕೇಳಿದರೆ, ಒಬ್ಬರು ಈ ಮೇಲಿನ ಫೋಟೋಶಾಪ್ ಮಾಡಿದ ಚಿತ್ರವನ್ನು "ಒಂದು ಅಪರೂಪದ ಫೋಟೋ- ಶ್ರೀ ನರೇಂದ್ರ ಮೋದಿ ಭಗತ್‌ಸಿಂಗ್ ಅವರಿಗೆ ಮನೆಯಲ್ಲಿ ತಯಾರಿಸಿದ ಆಹಾರ ಮತ್ತು ಚಹಾ ತಲುಪಿಸುತ್ತಿರುವುದು" ಎಂಬ ಶಿರೋನಾಮೆಯೊಂದಿಗೆ ಹಾಕಿದರು.



ಮಾತೆಂದರೆ ಇದು



ದುಡಿಮೆಗಾರ
ಉತ್ಪಾದನಾ
ವ್ಯವಸ್ಥೆಯ
ಬಂಧಿ. ಇವನ
ಬಿಡುಗಡೆಯೆಂದರೆ
ಅದು ಇಡೀ ಮಾನವ ಕುಲದ ಬಿಡುಗಡೆ.
ಅಂತಲೇ ನೇರವಾಗಿ ದುಡಿಯುವವರಲ್ಲ
ಎನಿಸಿಕೊಂಡವರೂ ಹಲವಾರು
ಬಂಧನಗಳಿಗೆ ಒಳಗಾಗಿರುತ್ತಾರೆ.
ದುಡಿಯುವ ವರ್ಗದ ವಿವಧ
ಬಂಧನಗಳಲ್ಲಿ ಅವರದೂ ಸೇರಿರುತ್ತದೆ.

-ಕಾರ್ಲ್ ಮಾರ್ಕ್ಸ್

ಕರ್ನಾಟಕ ಜನಮತ 2018 ಪ್ರಕಟವಾಗಿದೆ. ಐದು ವರ್ಷಗಳಿಗೊಮ್ಮೆ ನಡೆಯುವ ವಿಧಾನಸಭೆ ಚುನಾವಣೆಗಳು ನಮ್ಮ ಜನಗಣತಿಯಂತೆ ನಮ್ಮ ಸಾಮಾಜಿಕ ರಾಜಕೀಯ ಸಾಂಸ್ಕೃತಿಕ ಪರಿಸ್ಥಿಯ ಬಗ್ಗೆ ಬಹಳ ಹೇಳಬಲ್ಲವು. ಆದ್ದರಿಂದ ಚುನಾವಣೆಗಳಲ್ಲಿ ಯಾವ ಪಕ್ಷಕ್ಕೆ ಎಷ್ಟು ಸೀಟು ಬಂತು? ಯಾರು ಗೆದ್ದರು ಯಾರು ಸೋತರು? ಎಂಬುದನ್ನು ಮೀರಿ ಹಲವು ವಿವರಗಳು ರಾಜ್ಯದ ಜನರು ಏನು ಯೋಚಿಸುತ್ತಿದ್ದಾರೆ ಎಂದು ಹೇಳಬಲ್ಲುದು. ಅಂತಹ ಕೆಲವು ವಿಶೇಷ ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.



ಮೂರನೇ ಬಾರಿ "ಅತಂತ್ರ"

ಮೂರನೇ ಬಾರಿ ಕರ್ನಾಟಕದ ಜನ ಯಾವುದೇ ಒಂದು ಪಕ್ಷಕ್ಕೆ ಬಹುಮತ ಕೊಟ್ಟಿಲ್ಲ. 2004, 2008 ಮತ್ತು ಈಗ 2018ರಲ್ಲಿ ಯಾವ ಪಕ್ಷಕ್ಕೂ ಬಹುಮತ ಬಂದಿಲ್ಲ. 2004ರಲ್ಲಿ ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ್ದು, ಕಾಂಗ್ರೆಸ್-ಜೆಡಿ(ಎಸ್) ಸಮ್ಮಿಶ್ರ ಸರಕಾರ ರಚನೆಯಾಗಿತ್ತು. ಆ ಮೇಲೆ ಜೆಡಿ(ಎಸ್)-ಬಿಜೆಪಿಗಳ 20:20 ಸರಕಾರ ರಚನೆಯಾಗಿತ್ತು. 2008ರಲ್ಲಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿ, ಆ ಮೇಲೆ "ಆಪರೇಶನ್ ಕಮಲ" ನಡೆಸಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿತ್ತು. 'ರೆಸಾರ್ಟ್ ರಾಜಕೀಯ'ವೂ ಈ ಅವಧಿಯ 'ಕೊಡುಗೆ'. 2018ರಲ್ಲಿ ಸಹ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ಸರಕಾರ ರಚಿಸುವ ಮೊದಲ ಅವಕಾಶ ಬಿಜೆಪಿಗೆ ಹೋಗಿದೆ.


ಟಿ.ಬಿ.ಜಯಚಂದ್ರ

ಯಾವುದೇ ಪಕ್ಷಕ್ಕೆ ಬಹುಮತ ಬಾರದೆ ಇದ್ದಾಗ 'ಅತಂತ್ರ' ಎಂಬ ನಕಾರಾತ್ಮ ಶಬ್ದ ಬಳಸಲಾಗುತ್ತದೆ. ಕಳೆದ ಒಂದುವರೆ ದಶಕದಲ್ಲಿ ಅತಂತ್ರ ಅಂದರೆ ಅಭದ್ರ, "ಆಪರೇಶನ್ ಕಮಲ", 'ರೆಸಾರ್ಟ್ ರಾಜಕೀಯ' ಎಂದಾಗಿದೆ. ಹಾಗೆ ಆಗಬೇಕೆಂದೇನೂ ಇಲ್ಲ. ಹೆಚ್ಚಿನ ಅಭಿವೃದ್ಧ ದೇಶಗಳಲ್ಲಿ ಸಮ್ಮಿಶ್ರ ಸರಕಾರ ಸಾಮಾನ್ಯ. ಇದರ ಹಿಂದಿರುವುದು ಪರೋಕ್ಷವಾಗಿ ಎರಡು ಪಕ್ಷಗಳು ಮಾತ್ರ ಇರಬೇಕು ಆಳುವ ವರ್ಗಗಳ ಎ ಮತ್ತು ಬಿ ಪಕ್ಷಗಳಾಗಿರಬೇಕು ಎಂಬ ಆಶಯ. ಒಂದೇ ಪಕ್ಷದ ಸರಕಾರ ಇದ್ದಾಗಲೂ (ಹಿಂದೆ ಕಾಂಗ್ರೆಸ್, ಇತ್ತೀಚೆಗೆ ಬಿಜೆಪಿ) ಅಭದ್ರತೆ ಕಾಡಿದೆ. ಸ್ಪಷ್ಟ ರಾಜಕೀಯ-ಸೈದ್ಧಾಂತಿಕ ಧೋರಣೆಗಳು ಇದ್ದಷ್ಟು ಪಕ್ಷಗಳು ಇರುವುದು ಹೆಚ್ಚು ಪ್ರಜಾಸತ್ತಾತ್ಮಕ.

16 ಸಚಿವರ ಸೋಲು

ಸ್ಪೀಕರ್ ಕೆ.ಬಿ. ಕೋಳಿವಾಡ ಮತ್ತು ಇಬ್ಬರೂ ಸಚಿವೆಯರೂ ಸೇರಿದಂತೆ 16 ಸಚಿವರ ಸೋಲು ಫಲಿತಾಂಶದ ಗಮನ ಸೆಳೆದ ಅಂಶ. ಡಾ. ಎಚ್.ಸಿ. ಮಹಾದೇವಪ್ಪ, ರಮಾನಾಥ ರೈ, ಟಿ.ಬಿ.ಜಯಚಂದ್ರ, ಸಂತೋಷ ಲಾಡ್, ಎ ಮಂಜು, ಎಚ್.ಎಂ.ರೇವಣ್ಣ, ಎಚ್. ಆಂಜನೇಯ, ಶರಣಪ್ರಕಾಶ ಪಾಟೀಲ, ಬಸವರಾಜ ರಾಯರೆಡ್ಡಿ, ವಿನಯ ಕುಲಕರ್ಣಿ, ಎಸ್.ಎಸ್. ಮಲ್ಲಿಕಾರ್ಜುನ, ಕಾಗೋಡು ತಿಮ್ಮಪ್ಪ, ಪ್ರಮೋದ್ ಮಧ್ವರಾಜ್, ರುದ್ರಪ್ಪ ಲಮಾಣಿ, ಉಮಾಶ್ರೀ, ಮೋಹನಕುಮಾರಿ ಸೋಲುಂಡ ಸಚಿವರು.


ಕೆ.ಬಿ. ಕೋಳಿವಾಡ


ಮಾಲಿಕಯ್ಯ ಗುತ್ತೇದಾರ್

ಪಕ್ಷಾಂತರಿಗಳಿಗೆ ಪಾಠ

ಈ ವಿಧಾನಸಭೆಯಲ್ಲಿ ವಿವಿಧ ಹಂತಗಳಲ್ಲಿ ಪಕ್ಷಾಂತರ ಮಾಡಿದ 25 ಶಾಸಕರು ಮತ್ತೆ ಸ್ಪರ್ಧಿಸಿದ್ದರು. ಅವರಲ್ಲಿ 11 ಜನ ಮಾತ್ರ ಗೆದ್ದಿದ್ದಾರೆ. ಜೆಡಿ-ಎಸ್ ನಿಂದ ಕಾಂಗ್ರೆಸಿಗೆ ಹಾರಿದ 7 ಶಾಸಕರಲ್ಲಿ 3 ಜನ ಆಯ್ಕೆಯಾಗಿದ್ದಾರೆ. ಗೆದ್ದ 11 ಶಾಸಕರಲ್ಲಿ ಈಗ 5 ಕಾಂಗ್ರೆಸಿಗೆ 6 ಬಿಜೆಪಿಗೆ ಸೇರಿದವರು. ಸೋತ 14 ಶಾಸಕರಲ್ಲಿ 8 ಕಾಂಗ್ರೆಸಿಗರು. 6 ಬಿಜೆಪಿಗರು. ಗೆದ್ದವರಲ್ಲಿ ಜಮೀರ್ ಅಹಮದ್ ಖಾನ್, ಬಿ ನಾಗೇಂದ್ರ, ಆನಂದ ಸಿಂಗ್, ಬಸವನಗೌಡ ಪಾಟೀಲ್ ಯತ್ನಾಳ ಸೇರಿದ್ದಾರೆ. ಸೋತವರಲ್ಲಿ ಚಲುವರಾಯಸ್ವಾಮಿ, ಅಶೋಕ್ ಖೇಣಿ, ಬಿ.ಆರ್. ಪಾಟೀಲ, ಮಾಲಿಕಯ್ಯ ಗುತ್ತೇದಾರ್, ಸಿ ಪಿ ಯೋಗೇಶ್ವರ್ ಸೇರಿದ್ದಾರೆ.


ಸಿ ಪಿ ಯೋಗೇಶ್ವರ್



ಮಹಿಳಾ ಶಾಸಕಿಯರು ಕೇವಲ 7

ಈ ಬಾರಿ ಕೇವಲ 7 ಮಹಿಳಾ ಶಾಸಕಿಯರು ಚುನಾಯಿತರಾಗಿದ್ದಾರೆ. ಇವರಲ್ಲಿ 4 ಕಾಂಗ್ರೆಸಿಗೆ ಮತ್ತು 3 ಬಿಜೆಪಿಗೆ ಸೇರಿದವರು. ಕಳೆದ ಬಾರಿ 6 ಶಾಸಕಿಯರು ಆಯ್ಕೆಯಾಗಿದ್ದರು. ಈ ಬಾರಿ ಕಾಂಗ್ರೆಸ್ 15, ಬಿಜೆಪಿ 6 ಮತ್ತು ಜೆಡಿ-ಎಸ್ 4 ಮಹಿಳೆಯರಿಗೆ ಟಿಕೆಟ್ ಕೊಟ್ಟಿತ್ತು. ಮತ್ತೆ ಸ್ಪರ್ಧಿಸಿದ್ದ 4 (3 ಕಾಂಗ್ರೆಸ್, 1 ಜೆಡಿ-ಎಸ್) ಶಾಸಕಿಯರು ಸೋತಿದ್ದಾರೆ. ಶಾಸಕಿಯರಾಗಿ ಆಯ್ಕೆಯಾದವರು – ಶಶಿಕಲಾ ಜೊಲ್ಲೆ, ಲಕ್ಷ್ಮಿ ಹೆಬ್ಬಾಳ್ಕರ್, ಅಂಜಲಿ ನಿಂಬಾಳ್ಕರ್, ಕೆ.ಪೂರ್ಣಿಮಾ, ರೂಪಾಲಿ ಬಿ ನಾಯ್ಕ, ಪೂರ್ಣಿಮಾ ಶ್ರೀನಿವಾಸ್, ರೂಪಕಲಾ.


ಲಕ್ಷ್ಮಿ ಹೆಬ್ಬಾಳ್ಕರ್

ಕೋಟ್ಯಾಧೀಶ, ಕ್ರಿಮಿನಲ್ ಶಾಸಕರು

ಈಗ ಆಯ್ಕೆಯಾಗಿರುವ 221 ಶಾಸಕರಲ್ಲಿ 77 (ಶೇ. 35) ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವವರು. ಇವರಲ್ಲಿ ಬಿಜೆಪಿಯ 42, ಕಾಂಗ್ರೆಸಿನ 23 ಮತ್ತು ಜೆಡಿ-ಎಸ್ ನ 11 ಶಾಸಕರು ಸೇರಿದ್ದಾರೆ. 2013ರ 74 ರಿಂದ ಇದು ಏರಿದೆ. ಚುನಾಯಿತ ಶಾಸಕರಲ್ಲಿ 215 ಕೋಟ್ಯಾಧೀಶರು. 2013ರಲ್ಲಿ ಶಾಸಕರ ಸಂಪತ್ತು 23.54 ಕೋಟಿ ರೂ. ಇದ್ದಿದ್ದು, 2018 ಶಾಸಕರ ಸರಾಸರಿ ಸಂಪತ್ತು 34.59 ಕೋಟಿ ರೂ.ಗೆ ಏರಿದೆ. 94 ಶಾಸಕರು ಪುನರಾಯ್ಕೆಯಾಗಿದ್ದು ಅವರ ಸಂಪತ್ತು ಸರಾಸರಿ 28.07 ಇಂದ 53.40 ಕೋಟಿ ರೂ.ಗೆ ಅಂದರೆ ಶೇ. 90ರಷ್ಟು ಏರಿದೆ.

ಮತಗಳ ಅಂತರ

ಈ ಬಾರಿಯೂ ಮತಗಳ ಅಂತರ ಕೇವಲ 213 ರಿಂದ 81,623 ವರೆಗೆ ಇತ್ತು. ಮಸ್ಕಿಯಲ್ಲಿ ಪ್ರತಾಪಗೌಡ ಪಾಟೀಲ 213 ಗೆದ್ದರೆ, 5 ಅಭ್ಯರ್ಥಿಗಳು ಕೇವಲ 1 ಸಾವಿರಕ್ಕಿಂತ ಕಡಿಮೆ ಅಂತರದಿಂದ ಜಯ ಸಾಧಿಸಿದರು. ಇನ್ನೂ ಏಳು ಶಾಸಕರು 1 ರಿಂದ 2 ಸಾವಿರದ ಅಂತರದಲ್ಲಿ ಗೆದ್ದರು. ಗದಗದಿಂದ ಎಚ್.ಕೆ.ಪಾಟೀಲ 1868 ಮತಗಳಿಂದ ಗೆದ್ದರು. ಇನ್ನೊಂದು ಕಡೆ 11 ಶಾಸಕರು 50 ಸಾವಿರಕ್ಕಿಂತ ಹೆಚ್ಚಿನ ಭಾರೀ ಅಂತರದಿಂದ ಜಯಶಾಲಿಗಳಾಗಿದ್ದಾರೆ. ಅಖಂಡ ಶ್ರೀನಿವಾಸಮೂರ್ತಿ (81,626), ಡಿಕೆ ಶಿವಕುಮಾರ್ (79,909) ಮತ್ತು ಅಭಯ ಪಾಟೀಲ (58,692) ಅತ್ಯಂತ ಹೆಚ್ಚು ಮತಗಳ ಅಂತರದಿಂದ ಗೆದ್ದವರು.

ಇತರ ಕೆಲವು ಮುಖ್ಯ ಅಂಶಗಳು

- ಒಟ್ಟು 36 ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ 12, ಬಿಜೆಪಿ 16, ಜೆಡಿ-ಎಸ್ 8 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದಾರೆ
- ಒಟ್ಟು 39 ಶಾಸಕರು ಮೊದಲ ಬಾರಿಗೆ ಚುನಾಯಿತರಾಗಿದ್ದಾರೆ. ಬಿಜೆಪಿ 18, ಕಾಂಗ್ರೆಸ್ 10, 9 ಜೆಡಿ-ಎಸ್, ಬಿ.ಎಸ್.ಪಿ. 1, ಪಕ್ಷೇತರ 1 ಸೇರಿದ್ದಾರೆ.
- ಮತ್ತೆ ಸ್ಪರ್ಧಿಸಿದ್ದ 115 ಶಾಸಕರು ಸೋತಿದ್ದಾರೆ. ಅವರಲ್ಲಿ ಕಾಂಗ್ರೆಸಿನ 78, ಬಿಜೆಪಿಯ 15, ಜೆಡಿ-ಎಸ್ ನ 18 ಶಾಸಕರು ಸೇರಿದ್ದಾರೆ.
- ಫಿಲಂ ಗೆ ಸಂಬಂಧಿಸಿದ 12 ಅಭ್ಯರ್ಥಿಗಳಲ್ಲಿ ಕೇವಲ ಇಬ್ಬರು – ಕುಮಾರ್ ಬಂಗಾರಪ್ಪ, ಬಿ.ಸಿ. ಪಾಟೀಲ – ಗೆದ್ದಿದ್ದಾರೆ. ಕರ್ನಾಟಕದ ಜನತೆ ಫಿಲಂ ವ್ಯಕ್ತಿಗಳು ರಾಜಕಾರಣಕ್ಕೆ ಬರುವುದನ್ನು ಇಷ್ಟ ಪಡುವುದಿಲ್ಲ.


ಕುಮಾರ್ ಬಂಗಾರಪ್ಪ

ಕರ್ನಾಟಕ ಜನಮತ 2018–ಪ್ರಾದೇಶಿಕ ಚಿತ್ರಣ

2018 ಚುನಾವಣೆಯ ಫಲಿತಾಂಶವನ್ನು ವಿಶ್ಲೇಷಿಸಲು ಪ್ರಾದೇಶಿಕ ಚಿತ್ರಣವನ್ನು ನೋಡುವುದು ಅಗತ್ಯ. ಇದಕ್ಕಾಗಿ ಕರ್ನಾಟಕವನ್ನು ಆರು ಪ್ರದೇಶಗಳಾಗಿ ವಿಂಗಡಿಸಬೇಕಾಗುತ್ತದೆ. ಕರಾವಳಿ–ಮಲೆನಾಡು, ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ, ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕ, ಬೆಂಗಳೂರು ನಗರ. ಇವು ಏಕೀಕರಣ ಪೂರ್ವ ವಿಭಿನ್ನ ಆಡಳಿತಕ್ಕೆ ಒಳ ಪಟ್ಟಿದ್ದು ಚಾರಿತ್ರಿಕವಾಗಿಯೂ ಸಾಮಾಜಿಕ–ಆರ್ಥಿಕ–ರಾಜಕೀಯ ಬೆಳವಣಿಗೆ ದೃಷ್ಟಿಯಿಂದಲೂ ಭಿನ್ನವಾಗಿವೆ. ಈ ಪ್ರದೇಶಗಳಲ್ಲಿ 2018ರಲ್ಲಿ ಪ್ರಮುಖ ಮೂರು ಪಕ್ಷಗಳ ಸೀಟುಗಳಿಕೆ, 2013 ಸೀಟುಗಳಿಕೆ ಮತ್ತು ಬದಲಾವಣೆಗಳನ್ನು ಆರು ಕೋಷ್ಟಕಗಳಲ್ಲಿ ಕೊಡಲಾಗಿದೆ.

ಕರಾವಳಿ–ಮಲೆನಾಡು ಪ್ರದೇಶದಲ್ಲಿ ಬಿಜೆಪಿಯ ಅತ್ಯಂತ ಹೆಚ್ಚು ಸೀಟುಗಳನ್ನು ಪಡೆದಿದ್ದು ಮಾತ್ರವಲ್ಲ ಅತ್ಯಂತ ಹೆಚ್ಚು ಬದಲಾವಣೆಗಳನ್ನು ಸಹ ಕಂಡ ಪ್ರದೇಶ. ಕೋಮು ಧ್ರುವೀಕರಣ ಬಹಳವಾಗಿ ಕೆಲಸ ಮಾಡಿದ ಪ್ರದೇಶ ಇದು. ಕಾಂಗ್ರೆಸ್ ಈ ಪ್ರದೇಶದಲ್ಲಿ ಕುಗ್ಗಿದರೆ, ಜೆಡಿ–ಎಸ್ ಅಸ್ತಿತ್ವವೇ ಕಳೆದುಕೊಂಡಿದೆ.


ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ಬಿಜೆಪಿಗೆ 2013ರ ಕೆಜೆಪಿ ಬಿ.ಎಸ್.ಆರ್. ಸೀಟುಗಳು ಸೇರ್ಪಡೆಯಾಗಿ ಹೆಚ್ಚಾಗಿದೆ. ಕಾಂಗ್ರೆಸ್, ಜೆಡಿ–ಎಸ್ ಕೆಲವು ಸೀಟು ಕಳೆದುಕೊಂಡರೂ ತಮ್ಮ ಸ್ಥಾನ ಕಾಯ್ದುಕೊಂಡಿವೆ.

ಮುಂಬಯಿ ಕರ್ನಾಟಕದಲ್ಲಿ ಸಹ ಬಿಜೆಪಿ ಕರಾವಳಿ–ಮಲೆನಾಡಿನ ನಂತರ ಬಹಳ ಹೆಚ್ಚಳ ಸಾಧಿಸಿದೆ. ಕಾಂಗ್ರೆಸ್ ಬಹಳ ನಷ್ಟ ಕಂಡಿದೆ. ಜೆಡಿ–ಎಸ್ ತನ್ನ ಸ್ಥಾನಗಳನ್ನು ಕಾಯ್ದುಕೊಂಡಿದೆ. ಬೆಳಗಾವಿಯಲ್ಲಿ ಎಂ..ಇ.ಎಸ್.ಗೆ ಈ ವಿಧಾನಸಭೆಯಲ್ಲಿ ಪಾತಿನಿಧ್ಯ ಸಿಕ್ಕಿಲ್ಲ.

ದಕ್ಷಿಣ ಕರ್ನಾಟಕದಲ್ಲಿ ಜೆಡಿ–ಎಸ್ ಸ್ಥಾನವನ್ನು ಸಾಕಷ್ಟು ಉತ್ತಮ ಪಡಿಸಿಕೊಂಡಿದೆ. ಕಾಂಗ್ರೆಸ್ ಇಲ್ಲೂ ಸಾಕಷ್ಟು ಕಳೆದುಕೊಂಡು ತನ್ನ ನಂಬರ್ 1 ಸ್ಥಾನ ಕಳೆದುಕೊಂಡಿದೆ. ಬಿಜೆಪಿ ಈ ಪ್ರದೇಶದಲ್ಲಿ ಮೊದಲ ಬಾರಿ ಖಾತೆ ತೆರೆದಿದೆ.

ಮಧ್ಯ ಕರ್ನಾಟಕದಲ್ಲೂ ಬಿಜೆಪಿ ಹೆಚ್ಚಳ ಸಾಧಿಸಿದೆ. ಕಾಂಗ್ರೆಸ್ ಮತ್ತು ಜೆಡಿ–ಎಸ್ ಎರಡೂ ಸ್ಥಾನಗಳನ್ನು ಕಳೆದುಕೊಂಡಿವೆ.

ಬೆಂಗಳೂರು ನಗರ ಅತ್ಯಂತ ಕಡಿಮೆ ಬದಲಾವಣೆ ಕಂಡ ಪ್ರದೇಶ.



ಕರಾವಳಿ–ಮಲೆನಾಡು ಒಟ್ಟು 33 ಸೀಟುಗಳು			
ಪಕ್ಷ	2018	2013	ಬದಲಾವಣೆ
ಬಿಜೆಪಿ	28	7	+21
ಕಾಂಗ್ರೆಸ್	5	17	–12
ಜೆಡಿ–ಎಸ್	0	5	–5

ಮುಂಬಯಿ ಕರ್ನಾಟಕ ಒಟ್ಟು 50 ಸೀಟುಗಳು			
ಪಕ್ಷ	2018	2013	ಬದಲಾವಣೆ
ಬಿಜೆಪಿ	30	13	+17
ಕಾಂಗ್ರೆಸ್	17	31	–14
ಜೆಡಿ–ಎಸ್	2	1	+1

ಮಧ್ಯ ಕರ್ನಾಟಕ ಒಟ್ಟು 36 ಸೀಟುಗಳು			
ಪಕ್ಷ	2018	2013	ಬದಲಾವಣೆ
ಬಿಜೆಪಿ	15	3	+12
ಕಾಂಗ್ರೆಸ್	13	19	–6
ಜೆಡಿ–ಎಸ್	7	10	–3

ಹೈದರಾಬಾದ್ ಕರ್ನಾಟಕ ಒಟ್ಟು 40 ಸೀಟುಗಳು			
ಪಕ್ಷ	2018	2013	ಬದಲಾವಣೆ
ಬಿಜೆಪಿ	15	5	+10
ಕಾಂಗ್ರೆಸ್	21	23	–2
ಜೆಡಿ–ಎಸ್	4	5	–1

ದಕ್ಷಿಣ ಕರ್ನಾಟಕ ಒಟ್ಟು 37 ಸೀಟುಗಳು			
ಪಕ್ಷ	2018	2013	ಬದಲಾವಣೆ
ಬಿಜೆಪಿ	5	0	+5
ಕಾಂಗ್ರೆಸ್	8	19	–11
ಜೆಡಿ–ಎಸ್	24	16	+8

ಬೆಂಗಳೂರು ಒಟ್ಟು 26 ಸೀಟುಗಳು			
ಪಕ್ಷ	2018	2013	ಬದಲಾವಣೆ
ಬಿಜೆಪಿ	11	11	0
ಕಾಂಗ್ರೆಸ್	13	12	+1
ಜೆಡಿ–ಎಸ್	2	3	–1

ಉಳಿದವರು ಕಂಡಂತೆ... ರಾಜ್ಯಪಾಲರ ಹುದ್ದೆ ಘನತೆ ಉಳಿಯಲಿ

2008ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದ್ದ ಬಿಜೆಪಿ, 'ಆಪರೇಷನ್ ಕಮಲ' ಎಂಬ ಅನೈತಿಕ ರಾಜಕಾರಣವನ್ನು ಹುಟ್ಟು ಹಾಕಿತ್ತು. ಈಗಲೂ ಅಂತಹದೇ ಯತ್ನ ನಡೆಯುತ್ತಿದೆ ಎಂಬ ದೂರು ಕೇಳಿಬರುತ್ತಿದೆ. 'ನಮ್ಮ ಶಾಸಕರಿಗೆ ಆಮಿಷವೊಡ್ಡಲಾಗುತ್ತಿದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. 'ಅವರು ನಮ್ಮ ಶಾಸಕರ ತಂಟೆಗೆ ಬಂದರೆ ನಾವೂ ಅವರ ಪಕ್ಷದ ಶಾಸಕರನ್ನು ಸೆಳೆಯುತ್ತೇವೆ' ಎಂದು ಅವರು ಬಹಿರಂಗವಾಗಿಯೇ ಹೇಳಿದ್ದಾರೆ.ತಮ್ಮ ವಿರುದ್ಧ ಜಾರಿ ನಿರ್ದೇಶನಾಲಯದ ಬಳಕೆಯ ಬೆದರಿಕೆಗೆ ಮಣಿದು ಕಾಂಗ್ರೆಸ್ ಶಾಸಕ ಆನಂದ್ ಸಿಂಗ್ ಅವರು ಬಿಜೆಪಿ ಕಡೆ ವಾಲಿದ್ದಾರೆ ಎಂಬ ಮಾತನ್ನೂ ಅವರು ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿಕೂಟದ ಸರ್ಕಾರ ರಚನೆಯಾಗಲು ಬಿಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ ಎನ್ನಲಾದ ಮಾತುಗಳೂ ಪ್ರಜಾಪ್ರಭುತ್ವಕ್ಕೆ ಶೋಭೆ ತರುವಂತಹದ್ದಲ್ಲ. ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಎರಡು ದಿನ ಕಳೆಯುವುದರೊಳಗೇ ನಡೆಯುತ್ತಿರುವ ಈ ವಿದ್ಯಮಾನಗಳು ಪ್ರಜಾಪ್ರಭುತ್ವವನ್ನು ಅಣಕ ಮಾಡುವಂತಿವೆ. ಈ ಎಲ್ಲ ಬೆಳವಣಿಗೆ, ಪ್ರಾಮಾಣಿಕವಾಗಿ ಮತದಾನ ಮಾಡಿದ ರಾಜ್ಯದ ಜನರಿಗೆ ಮಾಡುವ ದ್ರೋಹ. ಇದಕ್ಕೆಲ್ಲಾ ರಾಜ್ಯಪಾಲರೇ ಹೊಣೆಯಾಗುತ್ತಾರೆ. ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದ ರಾಜ್ಯಪಾಲರು ಪಕ್ಷದ ಕಾರ್ಯಕರ್ತರಂತೆ ನಡೆದುಕೊಳ್ಳುವುದು ಪ್ರಜಾಪ್ರಭುತ್ವಕ್ಕೂ, ಸಂವಿಧಾನಕ್ಕೂ ಮಾಡುವ ಅಪಚಾರ.

–ಪ್ರಜಾವಾಣಿ ಸಂಪಾದಕೀಯ, ಮೇ 18

2008 ಮರಳಲಿದೆಯೇ?

...ಬಿಜೆಪಿಯಲ್ಲಿ ಮೂಲೆ ಗುಂಪಾಗಿದ್ದ ರೆಡ್ಡಿ ಸಹೋದರರು ಮತ್ತೆ ಮುನ್ನೆಲೆಗೆ ಬಂದಿದ್ದಾರೆ. ಬಿಜೆಪಿಯ ಪಾಲಿಗೆ ಇದು ಭವಿಷ್ಯದಲ್ಲಿ ಖಂಡಿತವಾಗಿಯೂ ಮಾರಕವಾಗಲಿದೆ. ಇಂದು ಬಿಜೆಪಿಯ ಮಾರುಕಟ್ಟೆಯಲ್ಲಿ ಒಬ್ಬ ಶಾಸಕ 100 ಕೋಟಿ ರೂ.ಬೆಲೆ ಬಾಳುತ್ತಾನೆ ಎಂಬ ವದಂತಿಗಳಿವೆ. 500 ಕೋಟಿ ರೂ.ಗೂ ಅಧಿಕ ರೂಪಾಯಿಗಳನ್ನು ಶಾಸಕರಿಗಾಗಿ ಚೆಲ್ಲಬೇಕು? ಇಷ್ಟು ಹಣ ಬಿಜೆಪಿ ಬಳಿ ಇದೆ ಎಂದರೆ ಏನು ಅರ್ಥ? ನೋಟು ನಿಷೇಧದ ನಂತರವೂ ಕಪ್ಪು ಹಣ ಬರಲಿಲ್ಲ ಎಂದು ಆರ್‌ಬಿಐ ಹೇಳುತ್ತದೆ. ಹಾಗಿದ್ದರೆ ಈ ಹಣವೆಲ್ಲ ಯಾರ ಬಳಿ ಸೇರಿದೆ ಎನ್ನುವುದನ್ನು ಊಹಿಸಲು ಕಷ್ಟವಿದೆಯೇ? ಇಂದು ಶ್ರೀಸಾಮಾನ್ಯ ನೋಟುಗಳಿಲ್ಲದೆ ಎಟಿಎಂ ಮುಂದೆ ಹತಾಶನಾಗಿ ನಿಂತಿದ್ದಾನೆ. ಇದೇ ಸಂದರ್ಭದಲ್ಲಿ ಬಿಜೆಪಿ ನೂರಾರು ಕೋಟಿ ರೂಪಾಯಿಗಳನ್ನು ಚೆಲ್ಲಿ ಕುದುರೆ ವ್ಯಾಪಾರಕ್ಕೆ ಹೊರಟಿದೆ. ಈ ಭ್ರಷ್ಟ ಹಣದಿಂದ ಶಾಸಕರನ್ನು ಕೊಂಡುಕೊಂಡು ರಚನೆ ಮಾಡುವ ಸರಕಾರ ರಾಜ್ಯಕ್ಕೆ ಒಳ್ಳೆಯ ಆಡಳಿತ ನೀಡುತ್ತದೆ ಎಂದು ಭಾವಿಸುವುದೇ ಮೂರ್ಖತನ. ಒಂದು ವೇಳೆ ಸರಕಾರ ರಚನೆ ಮಾಡುವಲ್ಲಿ ಬಿಜೆಪಿ ಯಶಸ್ವಿಯಾದದ್ದೇ ಆದರೆ, ರಾಜ್ಯದ ಸ್ಥಿತಿ 2008ಕ್ಕಿಂತಲೂ ಅಧ್ವಾನವಾಗುತ್ತದೆ.

–ವಾರ್ತಾಭಾರತಿ ಸಂಪಾದಕೀಯ, ಮೇ 18

ಕಾಂಗ್ರೆಸಿಗೆ 'ಎಡಗೈ ಏಟು'

ದಲಿತರ ಒಳಮೀಸಲಾತಿ ಕುರಿತು ನ್ಯಾಯಮೂರ್ತಿ ಸದಾಶಿವ ಆಯೋಗ ನೀಡಿರುವ ವರದಿಯ ಅಂಶಗಳನ್ನು ಜಾರಿಗೆ ತರಲು ಕೇಂದ್ರಕ್ಕೆ ಶಿಫಾರಸು ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರ ಗಟ್ಟಿ ನಿಲುವು ತಳೆಯಲಿಲ್ಲ ಎಂಬ ಸಿಟ್ಟು ಎಡಗೈ ಪಂಗಡದವರಿಗಿದೆ.

ಇದರೊಂದಿಗೆ ಎಡಗೈ ಒಳಪಂಗಡಕ್ಕೆ ನೀಡುವ ಟಿಕೆಟುಗಳ ಸಂಖ್ಯೆಗೂ ಕತ್ತರಿ ಬಿದ್ದದ್ದು ಈ ಪಂಗಡದ ಮುಖಂಡರನ್ನು ಕೆರಳಿಸಿತು. ಅದರ ಪರಿಣಾಮ ಎಂಬಂತೆ 'ಮಾದಿಗರಿಗೆ ಅನ್ಯಾಯ ಮಾಡಿದ ಪಕ್ಷಗಳ ವಿರುದ್ಧ 'ನೋಟಾ' ಚಲಾಯಿಸಿ' ಎಂಬ ಕರೆಯುಳ್ಳ ಪೂರ್ಣಪುಟದ ಜಾಹೀರಾತು ದಿನಪತ್ರಿಕೆಗಳಲ್ಲಿ ರಾರಾಜಿಸಿತು. ಈ ಜಾಹೀರಾತನ್ನು 'ಮಾದಿಗ ಮೀಸಲಾತಿ ಹೋರಾಟ ಪರಿಷತ್' ನೀಡಿತ್ತು. ಸದಾಶಿವ ಆಯೋಗದ ವರದಿ ಜಾರಿ ಪ್ರಕ್ರಿಯೆಗೆ ಅಡ್ಡಗಾಲು ಹಾಕಿರುವ ಮುಖಂಡರನ್ನು ಸೋಲಿಸುವಂತೆಯೂ ಕರೆ ಕೊಟ್ಟಿತ್ತು.

ಇಷ್ಟೇ ಅಲ್ಲ, ಚಾಮುಂಡೇಶ್ವರಿ, ಬಾದಾಮಿ, ಕನಕಪುರ, ಕನಕಗಿರಿ, ಕುಡಚಿ, ಮಳವಳ್ಳಿ, ಟಿ. ನರಸೀಪುರ, ಕೊರಟಗೆರೆ, ಚಿತ್ತಾಪುರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ಛಾತಿಯುಳ್ಳವರಿಗೆ ಮತ ಚಲಾಯಿಸುವಂತೆಯೂ ಮಹದೇವಪುರ ಕ್ಷೇತ್ರದಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಅಭ್ಯರ್ಥಿಗೆ ಮತ ನೀಡುವಂತೆಯೂ ಕರೆ ನೀಡಿತ್ತು. ಅಂದರೆ ಈ ಪಂಗಡದ ಆಕ್ರೋಶಕ್ಕೆ ಪ್ರಧಾನವಾಗಿ ತುತ್ತಾದದ್ದು ಕಾಂಗ್ರೆಸ್ ಎಂಬುದು ನಿಚ್ಚಳ.

ರಾಜ್ಯದ ಸುಮಾರು 120 ವಿಧಾನಸಭಾ ಕ್ಷೇತ್ರಗಳಲ್ಲಿ ಎಡಗೈ ಒಳಪಂಗಡದ ಜನಸಂಖ್ಯೆಯು ಬಲಗೈನವರಿಗಿಂತ ಹೆಚ್ಚಿದೆ. ಆದರೆ ಮೀಸಲು ಕ್ಷೇತ್ರಗಳಲ್ಲಿ ಪ್ರಧಾನ ಪಕ್ಷಗಳಿಂದ ಅವರಿಗೆ ದೊರೆಯುತ್ತಿರುವ ಟಿಕೆಟ್ ಸಂಖ್ಯೆ ಚುನಾವಣೆಯಿಂದ ಚುನಾವಣೆಗೆ ಕಡಿಮೆಯಾಗುತ್ತಾ ಬರುತ್ತಿದೆ ಎಂಬ ಮಾತಿದೆ. ಎಡಗೈ ಒಳಪಂಗಡದ ಜನಸಂಖ್ಯೆ ಬಲಗೈ ಪಂಗಡಕ್ಕಿಂತ ಹೆಚ್ಚಿದ್ದರೂ ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಬಲಗೈ ಪಂಗಡ ಮುಂದಿದೆ. ಇದು ಟಿಕೆಟ್ ಪಡೆಯುವಲ್ಲಿ ಹೇಗೆ ಪ್ರಮುಖ ಪಾತ್ರ ವಹಿಸುತ್ತಿದೆಯೋ ಅದೇ ರೀತಿ ಗೆಲುವಿನಲ್ಲೂ ಮುಖ್ಯ ಪಾತ್ರ ವಹಿಸುತ್ತಿದೆ.

ಎಡಗೈ ಸಮುದಾಯದ ಮತ ಕ್ರೋಡೀಕರಣಕ್ಕೆ ಬಿಜೆಪಿ ವ್ಯವಸ್ಥಿತ ಪ್ರಯತ್ನ ನಡೆಸಿರುವುದು ಕಣ್ಣಿಗೆ ಕಾಣುವಂತಿದ್ದರೂ ಕಾಂಗ್ರೆಸ್ ಎಚ್ಚೆತ್ತುಕೊಳ್ಳಲಿಲ್ಲ. ಸದಾಶಿವ ಆಯೋಗದ ಸಲಹೆಗಳ ಜಾರಿಗೆ ಶಿಫಾರಸು ಮಾಡುವ ಮೂಲಕ ಆ ಇಡೀ ಸಮುದಾಯವನ್ನು ಒಲಿಸಿಕೊಳ್ಳುವ ಅವಕಾಶ ಕಾಂಗ್ರೆಸಿಗೆ ಇತ್ತು. ಆದರೆ ಅದನ್ನು ಆ ಪಕ್ಷ ತಾನಾಗಿಯೇ ಕೈಚೆಲ್ಲಿತು ಎಂಬ ಅಭಿಪ್ರಾಯ ದಲಿತ ಚಿಂತಕರ ವಲಯದಲ್ಲಿ ಇದೆ.

ಬೋವಿ ಮತ್ತು ಲಂಬಾಣಿಯಂಥ ಸ್ಪೃಶ್ಯ ಪರಿಶಿಷ್ಟ ಸಮುದಾಯಗಳಿಗೆ ಬಿಜೆಪಿ ಮಣೆ ಹಾಕುತ್ತಾ ಬಂದಿದೆ ಮತ್ತು ಈ ಸಮುದಾಯಗಳ ಮುಖಂಡರು ಬಿಜೆಪಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿಬರುತ್ತಿದ್ದಾರೆ. ಬಿಜೆಪಿಯ ಈ 'ಮೇಲ್ಪಂಕ್ತಿ'ಯನ್ನು ಅನುಕರಿಸಲು ಮುಂದಾಗಿ ಕಾಂಗ್ರೆಸ್ ತಮಗೆ ಅನ್ಯಾಯ ಎಸಗಿದೆ ಎಂಬುದು ಎಡಗೈ ಮುಖಂಡರ ಆಕ್ರೋಶ. ಈ ಸಿಟ್ಟು, ಮತಯಂತ್ರದ ಗುಂಡಿ ಒತ್ತುವ ಸಂದರ್ಭದಲ್ಲಿ ಕೆಲಸ ಮಾಡದಿರುತ್ತದೆಯೇ!

– ಉದಯಕುಮಾರ್ ಎನ್., ಪ್ರಜಾವಾಣಿ, ಮೇ 16

ಕಾಂಗ್ರೆಸ್ ಏಕೆ ಸೋತಿತು?

ವಸಂತರಾಜ ಎನ್.ಕೆ.

ಕಾಂಗ್ರೆಸ್ ಬಹುಮತ ಗಳಿಸಲು ಆಗದೆ ಅತಿ ದೊಡ್ಡ ಪಕ್ಷವಾಗಿಯಾದರೂ ಹೊಮ್ಮಲು ಸಾಧ್ಯವಾಗದೆ ಏಕೆ ಇಷ್ಟು ಹೀನಾಯವಾಗಿ ಸೋತಿತು? ಕಾಂಗ್ರೆಸ್ ಅಸ್ತಿತ್ವದ ಗಂಭೀರ ಪ್ರಶ್ನೆ ಎದುರಿಸುತ್ತಿರುವಾಗ ಮತ್ತು ಬಿಜೆಪಿ ಸಹ ಕೇಂದ್ರದಲ್ಲೂ ರಾಜ್ಯದಲ್ಲೂ ರಾಜಕೀಯವಾಗಿ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ ಏಕೆ ಸೋತಿತು? ಕಾಂಗ್ರೆಸಿನಲ್ಲೇ ಅಪರೂಪವಾಗಿದ್ದ ಒಬ್ಬ ಪ್ರಾದೇಶಿಕ ನಾಯಕನಿಗೆ ಪೂರ್ಣ ಅಧಿಕಾರ ಕೊಟ್ಟಾಗಲೂ ಹಿಂದೆ ಉತ್ತಮ ನಾಯಕತ್ವ ತೋರಿಸಿದ್ದ ಸಿದ್ಧರಾಮಯ್ಯನವರು ಹೇಗೆ ಮುಗ್ಗರಿಸಿದರು? ಈ ಪ್ರಶ್ನೆಗೆ ಒಂದು ಉತ್ತರವಿಲ್ಲ. ಹಲವು ಅಂಶಗಳು ಇದರಲ್ಲಿ ಸೇರಿವೆ ಎಂಬುದು ನಿರ್ವಿವಾದಿತ.



ಕೃಪೆ: ಪಿ. ಮಹಮ್ಮದ್, ವಿ.ಕ.

ಸರಕಾರವನ್ನೇ ಹಿಮ್ಮೆಟ್ಟಿಸಬಲ್ಲ ಮಾಧ್ಯಮಗಳ ಮೇಲೆ ಬಿಜೆಪಿಯ ಭಾರಿ ಹಿಡಿತ, ಸಾಮಾಜಿಕ ಮಾಧ್ಯಮದಲ್ಲೂ ಚುನಾವಣೆಯ ಸಮಯದಲ್ಲೂ ಪತ್ರಿಕೆ–ಟಿವಿ ಎರಡರಲ್ಲೂ ಪೇಯ್ಡ್ ನ್ಯೂಸ್ ಮತ್ತು ಜಾಹೀರಾತುಗಳ ಅಸಮಾನ ಯುದ್ಧದಲ್ಲಿ ಬಿಜೆಪಿ ಮೇಲುಗೈ, ಉಗ್ರ ಕೋಮು–ಧ್ರುವೀಕರಣದ ಸತತ ಪ್ರಚಾರಾಂದೋಲನ, ಮೋದಿ–ಶಾದ್ವಯರ ಮಹಾಸುಳ್ಳುಗಳ ಕೀಳುಮಟ್ಟದ ಅಬ್ಬರದ ರ್‍ಯಾಲಿಗಳು, ಚುನಾವಣಾ–ಪೂರ್ವ ಮತ್ತು ಪ್ರಚಾರದ ಸಮಯದಲ್ಲಿ ಸಹ ಇ.ಡಿ. ಐ.ಟಿ. ಮುಂತಾದ ಕೇಂದ್ರೀಯ ಏಜೆನ್ಸಿಗಳ ದುರ್ಬಳಕೆ ಮಾಡಿ ರೈಡುಗಳು, ಚುನಾವಣಾ ಕಮಿಶನ್ ತಟಸ್ಥತೆ ಬಗ್ಗೆ ಸಂಶಯ ಬರುವ ನಡಾವಳಿಗಳು, ಸಂಘ ಪರಿವಾರದ ಅಪಾರ ಸಂಪನ್ಮೂಲಗಳಿಂದ ಸುಸಜ್ಜಿತ ಚುನಾವಣಾ ಪ್ರಚಾರ ಯಂತ್ರ – ಇವುಗಳನ್ನು ಎದುರಿಸಿ ಹಿಮ್ಮೆಟ್ಟಿಸುವುದು ಸುಲಭ ಸಾಧ್ಯವಾಗಿರಲಿಲ್ಲ ಎಂಬುದು ನಿಜ. ಆದರೆ ಅದನ್ನು ಮಾಡುವುದು ಅನಿವಾರ್ಯವಾಗಿತ್ತು.

ಬಿಜೆಪಿಯ ಸತತ ಕೋಮುವಾದಿ ಪ್ರಚಾರಾಂದೋಲನದ ಯಂತ್ರದ ಗೋಣು ಮುರಿಯುವುದು ಮನಸ್ಸು ಮಾಡಿದರೆ ಕಾಂಗ್ರೆಸಿಗೆ ಸಾಧ್ಯವಿತ್ತು. ಬಿಜೆಪಿಯ ಕೋಮುವಾದವನ್ನು ಆಡಳಿತಾತ್ಮಕವಾಗಿ, ರಾಜಕೀಯವಾಗಿ, ಸೈದ್ಧಾಂತಿಕವಾಗಿ ಎದುರಿಸಿ ಹಿಮ್ಮೆಟ್ಟಿಸುವುದು ಅಸಾಧ್ಯವೇನೂ ಆಗಿರಲಿಲ್ಲ. ಆದರೆ ಇದನ್ನು ಮಾಡುವ ಬದಲು ಕಾಂಗ್ರೆಸ್ ಮೃದು ಹಿಂದುತ್ವದ, ಮುಸ್ಲಿಮರ ಭದ್ರತೆ–ಕಲ್ಯಾಣಗಳ ಬಗ್ಗೆ ಬರಿಯ ಮೊಸಳೆ ಕಣ್ಣೀರು ಹಾಕುವ ಮತ್ತು ಮುಸ್ಲಿಂ ಕೋಮುವಾದಿ ಸಂಘಟನೆಗಳ ಜತೆ ಗುಟ್ಟಿನ ಮೈತ್ರಿ ಮಾಡುವ ಸುಲಭ ಹಾದಿಯನ್ನು ಹಿಡಿದದ್ದು ಮುಳುವಾಯಿತು. ಇದು ಕೋಮುವಾದಿ ಪ್ರಚಾರಾಂದೋಲನ ಪ್ರಬಲವಾಗಿದ್ದ ಮತ್ತು ಯಶಸ್ವಿಯಾಗಿದ್ದ ಕರಾವಳಿ (ದ.ಕ, ಉ.ಕ., ಉಡುಪಿ) ಮತ್ತು ಮಲೆನಾಡಿನ (ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು) ಜಿಲ್ಲೆಗಳ ಫಲಿತಾಂಶಗಳಿಂದ ಸ್ಪಷ್ಟ. ಈ ಜಿಲ್ಲೆಗಳ 33 ಸೀಟುಗಳಲ್ಲಿ 28ನ್ನು ಬಿಜೆಪಿ ಬಾಚಿಕೊಂಡಿತು. 2013ರಲ್ಲಿ 5 ವರ್ಷಗಳ ಆಡಳಿತದ ನಂತರ ಬಿಜೆಪಿ ಈ ಜಿಲ್ಲೆಗಳಲ್ಲಿ ಕೇವಲ 8 ಸೀಟು ಪಡೆದಿತ್ತು. ಅಂದರೆ ಈ ಬಾರಿ ಬಿಜೆಪಿ 20 ಹೆಚ್ಚಿನ ಸೀಟು ಪಡೆಯಿತು. ಇದನ್ನು ತಡೆದಿದ್ದರೆ, ಬೇರೆಲ್ಲಾ ಅಂಶಗಳು ಹಾಗೇ ಇದ್ದರೂ, ಪಕ್ಷಗಳ ಬಲಾಬಲದಲ್ಲಿ (ಕಾಂಗ್ರೆಸ್ – 98, ಬಿಜೆಪಿ – 84) ತಿರುವು ಮುರುವಾಗಿರುತ್ತಿತ್ತು. ಶಿವಮೊಗ್ಗ ಬಿಟ್ಟರೆ 2013ರ ಬಿಜೆಪಿ ಒಳಜಗಳ (ಕೆಜೆಪಿ ರಚನೆ) ಇತರ ಜಿಲ್ಲೆಗಳಲ್ಲಿ ಬಿಜೆಪಿ ಸೋಲಿಗೆ ಕಾರಣವಾಗಿರಲಿಲ್ಲವೆಂದು ಗಮನಿಸಬೇಕು. ಬಿಜೆಪಿಯ ಕೋಮು ಅತಿರೇಕದಿಂದ ಜನ ಬೇಸತ್ತು ಸೋಲಿಸಿದ್ದರು. ಬಿಜೆಪಿಯ ಕೋಮು ಅತಿರೇಕದಿಂದ ಕಾಂಗ್ರೆಸಿಗೆ ಲಾಭ. ಜನ ಬೇಸತ್ತು ತಮ್ಮನ್ನು ಆರಿಸುತ್ತಾರೆ ಎಂಬುದು ಕಾಂಗ್ರೆಸಿನ ಎಣಿಕೆಯಾಗಿತ್ತು ಅಂತ ಕಾಣುತ್ತದೆ. ಕರಾವಳಿಯ ಮತ್ತು ಕೋಮು ಧ್ರುವೀಕರಣ ಪ್ರಬಲವಾಗಿದ್ದ 24 ಕ್ಷೇತ್ರಗಳಲ್ಲಿ ಬಿಜೆಪಿ ಕೋಮು ಧ್ರುವೀಕರಣವನ್ನೇ ಪ್ರಮುಖವಾಗಿ ಬಳಸಿಕೊಂಡು ಗೆದ್ದಿದೆ ಎನ್ನಲಾಗಿದೆ.

ಸಿದ್ಧರಾಮಯ್ಯ ಮುಖ್ಯವಾಗಿ 'ಅಹಿಂದ' ಗುಂಪುಗಳ ಕಡೆ ಪಕ್ಷಪಾತ ತೋರಿ, ರಾಜ್ಯದ ಎರಡು ಪ್ರಬಲ ಕೋಮುಗಳನ್ನು ಪೂರ್ಣವಾಗಿ ಕಡೆಗಣಿಸಿದರು ಎಂಬ ಭಾವನೆ ಮೂಡಿತ್ತು. ಇತ್ತ ಅಹಿಂದ ಗುಂಪುಗಳು ಕಾಂಗ್ರೆಸಿನ ಪರವಾಗಿ ಒಗ್ಗೂಡಲಿಲ್ಲ ಎಂಬುದೂ ಕಾಂಗ್ರೆಸಿಗೆ ಮುಳುವಾಯಿತು ಎನ್ನಲಾಗಿದೆ. ಇದು ಪೂರ್ಣ ನಿಜವಲ್ಲ. ಇದು ಜಾತಿಯ ಕಣ್ಣಿಂದ ಮಾತ್ರ ಎಲ್ಲವನ್ನೂ ನೋಡುವ ಅರ್ಥೈಸುವ ಧೋರಣೆಯ ಫಲ. ಸಿದ್ಧರಾಮಯ್ಯ 'ಅಹಿಂದ' ಗುಂಪುಗಳಿಗೆ ಪಕ್ಷಪಾತ ತೋರಿದರು ಎಂಬುದೇ ತಪ್ಪು ಕಲ್ಪನೆ. ಅವರ ಆಡಳಿತದಲ್ಲಿ ಅಲ್ಪಸಂಖ್ಯಾತ ಮತ್ತು ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾದವೇ ವಿನಾ ಕಡಿಮೆ ಆಗಲಿಲ್ಲ. ಅಲ್ಪಸಂಖ್ಯಾತ ಮತ್ತು ದಲಿತರನ್ನು ಮುಟ್ಟುವ ತಟ್ಟುವ ಯಾವುದೇ ನಿಜವಾದ ದೂರಗಾಮಿ ಅಭಿವೃದ್ಧಿ ಮತ್ತು ಕಲ್ಯಾಣ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಸಂಘ ಪರಿವಾರ ಸಂಘಟಿಸುತ್ತಿದ್ದ ಸದಾ ಅಭದ್ರತೆಯ ಪರಿಸ್ಥಿತಿಗೆ ಪರಿಣಾಮಕಾರಿಯಾಗಿ ಸರಕಾರ ಏನೂ ಮಾಡಿಲ್ಲ. ಅದೇ ರೀತಿ ದಲಿತರಲ್ಲಿ ಒಳಮೀಸಲಾತಿಯ ಸಮಸ್ಯೆಯನ್ನು ಪರಿಹರಿಸದೆ ಇದ್ದುದು, ಸದಾಶಿವ ಆಯೋಗದ ಶಿಫಾರಸುಗಳನ್ನು ನೆನೆಗುದಿಗೆ ಹಾಕಿದ್ದು ಮಾದಿಗರ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ದಲಿತರಲ್ಲೇ ಮಾದಿಗರು ಅತ್ಯಂತ ದಟ್ಟದರಿದ್ರಾಗಿದ್ದು ಮೀಸಲಾತಿಯ ಪ್ರಯೋಜನಗಳಿಂದ ವಂಚಿತರಾಗಿದ್ದಾರೆ. ಶಿಕ್ಷಣ ಉದ್ಯೋಗಗಳಲ್ಲೂ ರಾಜಕೀಯ ಪ್ರಾತಿನಿಧ್ಯದಲ್ಲೂ ವಂಚಿತರಾಗಿದ್ದಾರೆ. ಬಲಗೈ ದಲಿತರಲ್ಲಿ ಉಚ್ಚವಲಯದವರಿಗೆ ಕಾಂಗ್ರೆಸಿನಲ್ಲಿ ಹೆಚ್ಚಿನ ಪ್ರಭಾವವಿದ್ದು ಮಾದಿಗರು ಕಾಂಗ್ರೆಸಿನ ವಿರುದ್ಧ ಚುಣವಣೆಯಲ್ಲಿ ತಮ್ಮ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಹಿಂದುಳಿದ ಜಾತಿಗಳಲ್ಲೂ ತಮ್ಮ ಮತ್ತು ಇತರ ಕೆಲವು ಜಾತಿ ಬಗ್ಗೆ ಪಕ್ಷಪಾತ ತೋರಿದರೂ, ಅದೂ ಆ ಜಾತಿಗಳ ಉಚ್ಚವಲಯದವರಿಗೆ ಸರಕಾರಿ ಹುದ್ದೆ ಮತ್ತಿತರ ಸವಲತ್ತುಗಳಲ್ಲಿ ಪ್ರಾಶಸ್ತ್ಯಕ್ಕೆ ಸೀಮಿತವಾಗಿತ್ತು. ಆ ಜಾತಿಗಳ ಬಡವರಿಗೆ ಏನೂ ಪ್ರಯೋಜನವಾಗಲಿಲ್ಲ. ಎಲ್ಲಾ ಜಾತಿಗಳ ಬಡವರನ್ನು ಬಾಧಿಸಿದ ಗ್ರಾಮೀಣ ಪ್ರದೇಶಗಳ ಮತ್ತು ಕೃಷಿ ಕ್ಷೇತ್ರದ ತೀವ್ರ ಬಿಕ್ಕಟ್ಟು ಬಗ್ಗೆ ಏನೂ ನಿರ್ಣಾಯಕವಾಗಿ ಮಾಡದಿರುವುದೂ ಕಾಂಗ್ರೆಸಿನ ತೀವ್ರ ಹಿನ್ನಡೆಗೆ ಕಾರಣವಾಗಿದೆ. 'ಅಹಿಂದ' ಗುಂಪಿನ ಬಹುಸಂಖ್ಯಾತ ಜನ ಬಡ ರೈತರು ಮತ್ತು ಕೃಷಿ ಕೂಲಿಕಾರರಾಗಿ, ಕುಶಲಕರ್ಮಿಗಳಾಗಿದ್ದು ಗ್ರಾಮೀಣ ಪ್ರದೇಶಗಳ ಮತ್ತು ಕೃಷಿ ಕ್ಷೇತ್ರದ ತೀವ್ರ ಬಿಕ್ಕಟ್ಟು ಹಾಗೂ ನವ–ಉದಾರವಾದಿ ನೀತಿಗಳು ಅವರನ್ನು ತೀವ್ರವಾಗಿ ತಟ್ಟುತ್ತದೆ. ನಗರ ಪ್ರದೇಶಗಳಿಗೆ ವಲಸೆ ತಡೆಯಬಹುದಾದ ಬರ ಪರಿಹಾರದ ಕ್ರಮಗಳು, ರೇಗಾ ಜಾರಿಯಲ್ಲಿ ಅಸಮರ್ಪಕತೆ, ಭ್ರಷ್ಟಾಚಾರಗಳಿಂದ ಅವರಿಗೆ ಕಾಂಗ್ರೆಸ್ ಸರಕಾರದ ಬಗ್ಗೆ ನಿರ್ಲಕ್ಷ ಅಥವಾ ಆಕ್ರೋಶವೂ ಇದ್ದರೆ ಏನೂ ಆಶ್ಚರ್ಯವಿಲ್ಲ. ಅನ್ನ ಭಾಗ್ಯದಂತಹ ಆಹಾರ ಭದ್ರತೆಯ ಮತ್ತಿತರ ಇಂತಹ ಕಲ್ಯಾಣದ ಸೀಮಿತ ಕ್ರಮಗಳೂ ಜಾರಿಯಲ್ಲಿ ಬಡವರಿಗೆ ಅತಿ ಬಡವರಿಗೆ 'ಗುರಿಯಿಡುವ' ಹೆಸರಲ್ಲಿ ಕಡಿತ, ಅಸಮರ್ಪಕತೆ ಭ್ರಷ್ಟಾಚಾರಗಳಿಂದ ಕೂಡಿದ್ದು ಸಹ ಕಾಂಗ್ರೆಸ್ ಸರಕಾರದ ಬಗ್ಗೆ ನಿರ್ಲಕ್ಷ/ಆಕ್ರೋಶಕ್ಕೆ ಕಾರಣವಾಗಿದೆ. ಬಗರ್ ಹುಕುಂ, ಅರಣ್ಯ ಮತ್ತು ಸರಕಾರಿ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದ ಬಡ ರೈತರಿಗೆ ಹಕ್ಕುಪತ್ರ ಕೊಡುವುದರಲ್ಲೂ ಮೀನಮೇಷ ಎಣಿಸಿ ತೀವ್ರ ಹೋರಾಟಗಳ ನಂತರವೇ ಕೊನೆಯ ಹೊತ್ತಿಗೆ ಅಗತ್ಯ ಕಾನೂನು ತಿದ್ದುಪಡಿಗಳಾದರೂ ಅದನ್ನೂ ಜಾರಿ ಮಾಡುವ ರಾಜಕೀಯ ಇಚ್ಛೆ ತೋರಿಸದೆ ಕಾಂಗ್ರೆಸಿಗೆ ಅದರ ಪ್ರಯೋಜನ ಸಿಗಲಿಲ್ಲ. ಭೂಮಾಲಕ ರಿಯಲ್ ಎಸ್ಟೇಟ್ ಧಣಿ ಅಭ್ಯರ್ಥಿಗಳಿಗೆ ಇರುಸುಮುರುಸಾಗುತ್ತದೋ ಎಂಬ ಆತಂಕದಿಂದಲೋ ಏನೋ ಅದನ್ನು ಸಾಕಷ್ಟು ಪ್ರಚಾರವೂ ಮಾಡಲಿಲ್ಲ. ಅದೇ ರೀತಿ ನಗರ–ಪಟ್ಟಣಗಳಲ್ಲೂ ಗ್ರಾಮೀಣ ಪ್ರದೇಶಗಳಲ್ಲೂ ಕೆಲಸ ಮಾಡುವ ಬಹುಸಂಖ್ಯಾತ ದುಡಿಯುವ ಜನರ ಕನಿಷ್ಟ ಕೂಲಿ ಮತ್ತಿತರ ಸವಲತ್ತುಗಳು, ಹಾಗೂ ಖಾಯಮೇತರ ಕಾರ್ಮಿಕರನ್ನು ಖಾಯಂ ಮಾಡುವ ಬಗ್ಗೆ ಯಾವುದೇ ಬದ್ಧತೆ ತೋರಿಸದ್ದು; ಒಟ್ಟಾರೆಯಾಗಿ ಕಾರ್ಮಿಕ–ವಿರೋಧ ಮಾಲಿಕ–ಪರ ನೀತಿ ಜನಪ್ರಿಯವಾಗುವುದಂತೂ ಖಂಡಿತ ಸಾಧ್ಯವಿರಲಿಲ್ಲ.

ಆದರೆ ಸಿದ್ಧರಾಮಯ್ಯ ಮತ್ತು ಕಾಂಗ್ರೆಸ್ 'ಅಹಿಂದ' ಗುಂಪುಗಳ ಪರ ಪಕ್ಷಪಾತ ಮಾಡುತ್ತಾರೆ. ಒಕ್ಕಲಿಗರು ಹಾಗೂ ಲಿಂಗಾಯತರನ್ನು ನಿರ್ಲಕ್ಷಿಸುತ್ತಾರೆ ಎಂಬ ಪ್ರಚಾರದಲ್ಲಿ ಬಿಜೆಪಿ ಮತ್ತು ಜೆಡಿ–ಎಸ್ ಯಶಸ್ವಿಯಾದಂತೆ ಕಾಣುತ್ತದೆ. ಇದನ್ನು ಈ ಎರಡು ಕೋಮುಗಳು ಪ್ರಬಲವಾಗಿರುವ ಪ್ರದೇಶ/ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಜೆಡಿ–ಎಸ್ ವಿಜಯಕ್ಕೆ ಕಾರಣವಾಗಿ ಹೇಳಲಾಗುತ್ತದೆ. ಆದರೆ ಬರಿಯ ಪ್ರಬಲ ಜಾತಿ ಅಹಿಂದ ಗುಂಪುಗಳ ನಡುವೆ ಧ್ರುವೀಕರಣವೇ ಇದಕ್ಕೆ ಕಾರಣ ಎಂದು ಹೇಳಲಾಗದು. ಪ್ರಬಲ ಕೋಮುಗಳ ಬಹುಸಂಖ್ಯಾತರು ಸಣ್ಣ ಮತ್ತು ಮಧ್ಯಮ ರೈತರೂ ಹೌದು. ಬರ, ನೀರಾವರಿಯ ಅಭಾವ, ಕಾವೇರಿ–ಮಹದಾಯಿ ನೀರು ಹಂಚಿಕೆ ವಿವಾದ, ನೀರಿನ ಅಲಭ್ಯತೆ, ಬೆಳೆಗಳಿಗೆ ಲಾಭದಾಯಕ ಬೆಲೆ ಕೊಡುವ ಖರೀದಿ ವ್ಯವಸ್ಥೆ, ಕೃಷಿ ಸಾಲ, ನಿರುದ್ಯೋಗ ಮುಂತಾದವು ಇವರೆಲ್ಲರನ್ನೂ ಬಾಧಿಸುವ ಪ್ರಶ್ನೆಗಳು. ಈ ಬಗ್ಗೆ ಯಾವುದೇ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳದಿರುವುದರ ಬಗ್ಗೆ ಕೋಪ ಪ್ರಮುಖ ಕಾರಣವಾಗಿರಬಹುದು. ಅದರಿಂದಾಗಿ ಬಿಜೆಪಿ ಮತ್ತು ಜೆಡಿ–ಎಸ್ ಪ್ರಚಾರವನ್ನು ಅವರು ಹೆಚ್ಚು ನಂಬುವ ಸ್ಥಿತಿಯುಂಟಾಗಿರಬಹುದು.

ಕಾಂಗ್ರೆಸ್ ಬಿಜೆಪಿಗಿಂತ ಜೆಡಿ–ಎಸ್ ತನ್ನ ಪ್ರಥಮ ವೈರಿ, ಬಿಜೆಪಿಯ ಬಿ–ಟೀಮ್ ಎಂದು ಬಿಂಬಿಸಿ ಅದಕ್ಕೆ ಒತ್ತು ಕೊಟ್ಟಿದ್ದು ಒಕ್ಕಲಿಗ–ಪ್ರಧಾನ ಕ್ಷೇತ್ರಗಳಲ್ಲಿ ಕಾಂಗ್ರೆಸ್ ವಿರುದ್ಧ ಜಾತಿ ಧ್ರುವೀಕರಣಕ್ಕೆ ಕಾರಣವಾಗಿರಬಹುದು. ಅದೇ ರೀತಿ ಪ್ರತ್ಯೇಕ ಲಿಂಗಾಯತ ಧರ್ಮದ ಬಗ್ಗೆ ಶಿಫಾರಸು ಕಾಂಗ್ರೆಸಿಗೆ ಯಾವುದೇ ಲಾಭ ತಂದಿಲ್ಲ, ಮಾತ್ರವಲ್ಲ ನಷ್ಟವಾಗಿದೆ ಎಂಬುದು ವ್ಯಾಪಕ ಅಭಿಪ್ರಾಯ. ಲಿಂಗಾಯತ ಪ್ರತ್ಯೇಕ ಧರ್ಮದ ಉದಾತ್ತ ಉದ್ದೇಶಗಳ ಬಗ್ಗೆ ತಳಮಟ್ಟದಲ್ಲಿ ಪ್ರಚಾರ ಮಾಡುವ ಕಾರ್ಯಕರ್ತರ ಪಡೆ ಮತ್ತು ಛಲ ಕಾಂಗ್ರೆಸಿಗಿರಲಿಲ್ಲ. 'ಲಿಂಗಾಯತ ಮುಖ್ಯಮಂತ್ರಿ ತಪ್ಪಿಸುವ ಹುನ್ನಾರ', 'ಲಿಂಗಾಯತರನ್ನು ಒಡೆದು ದುರ್ಬಲಗೊಳಿಸುವ ತಂತ್ರ' ಎಂದು ಲಿಂಗಾಯತರಲ್ಲೂ; 'ಹಿಂದೂ ಧರ್ಮ ಒಡೆಯುವ ಪ್ರಯತ್ನ' ಎಂದು ಇತರ ಜಾತಿಗಳಲ್ಲೂ ಮಾಡಿದ ಸಂಘಪರಿವಾರದ ಅಪಪ್ರಚಾರ ಪರಿಣಾಮಕಾರಿಯಾದ ಹಾಗೆ ಕಾಣುತ್ತದೆ. ಲಿಂಗಾಯತ–ಪ್ರಾಧಾನ್ಯ ಇರುವ 62 ಕ್ಷೇತ್ರಗಳಲ್ಲಿ 37 ರಲ್ಲಿ ಬಿಜೆಪಿ ಗೆದ್ದಿರುವುದು ಇದಕ್ಕೆ ಪುರಾವೆ ಎನ್ನಲಾಗಿದೆ.

ಅಂತಿಮವಾಗಿ ಮನಮೋಹನ ಸಿಂಗ್ ಹಾಕಿಕೊಟ್ಟ ನವ–ಉದಾರವಾದಿ ನೀತಿಗಳ ಚೌಕಟ್ಟಿನಿಂದ ಹೊರಬರದಿರುವುದು, ಮೋದಿ ಸರಕಾರ ಅವನ್ನು ಆಕ್ರಾಮಕವಾಗಿ ಜಾರಿ ಮಾಡುವುದರ ವಿರುದ್ಧ ಪ್ರತಿರೋಧ ಒಡ್ಡಲು ಸಾಧ್ಯವಾಗದಿರುವುದು, ಅದಕ್ಕೆ ಬದಲಿ ನೀತಿಗಳನ್ನು ರೂಪಿಸಲು ಪ್ರಯತ್ನ ಮಾಡದಿರುವುದು ಸಿದ್ಧರಾಮಯ್ಯ ಸರಕಾರದ 'ಜನಪರ' ಕಾರ್ಯಕ್ರಮಗಳ ಮಿತಿಯಾಗಿತ್ತು. ಸಾರ್ವಜನಿಕ ಉದ್ಯಮಗಳ ಖಾಸಗೀಕರಣ, ಕೈಗಾರಿಕೀಕರಣಕ್ಕೆ ವಿದೇಶೀ ಹೂಡಿಕೆಗೆ ಕಾದುಕೊಂಡಿರುವ ನೀತಿಯಿಂದಾಗಿ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ಯಾವುದೇ ಸೃಜನಶೀಲ ಪರಿಣಾಕಾರಿ ಕ್ರಮಗಳ ಅಭಾವದಿಂದಾಗಿ ಯುವ ಮತದಾರರನ್ನು ಮೋದ–ಬಿಜೆಪಿಗಳಿಂದ ಆಚೆಗೆ ಸೆಳೆಯುವುದು ಸಾಧ್ಯವಾಗಿಲ್ಲ.

ಸಿದ್ಧರಾಮಯ್ಯ ಅವರಿಗೆ ಅಭ್ಯರ್ಥಿಗಳ ಆಯ್ಕೆ, ಚುನಾವಣೆ ಪ್ರಚಾರದ ವೈಖರಿ ಇವುಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸಾಕಷ್ಟು ಅಧಿಕಾರ ಕೊಟ್ಟಿದ್ದು, ಅದನ್ನು ಬಳಸಿ ಕಾಂಗ್ರೆಸ್ ಗೆಲ್ಲಿಸುವ ತಂತ್ರ ರೂಪಿಸುವುದರಲ್ಲಿ ವಿಫಲರಾದರು. ಪುತ್ರವ್ಯಾಮೋಹಕ್ಕೆ ಬಲಿ ಬಿದ್ದು ತಮ್ಮ ಸುರಕ್ಷಿತ ಕ್ಷೇತ್ರವನ್ನು ಮಗನಿಗೆ ಬಿಟ್ಟುಕೊಟ್ಟು ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲು ಹೊರಟದ್ದು ಅವರ ವಿಶ್ವಾಸಾರ್ಹತೆಗೆ ಮುಳುವಾಯಿತು. ಕಾಂಗ್ರೆಸಿನ ನಾಯಕತ್ವವನ್ನು ತಮ್ಮೊಂದಿಗೆ ಒಯ್ಯುವುದರಲ್ಲಿ ವಿಫಲರಾದರು. ಬಿಜೆಪಿಯನ್ನು ಸೋಲಿಸುವ ಪ್ರಧಾನ ಗುರಿಯನ್ನು ಮರೆತುಬಿಟ್ಟು, ಜೆಡಿ–ಎಸ್ ಮತ್ತು ದೇವೇಗೌಡರೇ ಪ್ರಥಮ ಶತ್ರು ಎಂಬಂತೆ ಪ್ರಚಾರ ಮಾಡಿದ್ದು ಕಾಂಗ್ರೆಸ್ ಗೆಲ್ಲಿಸುವ ತಂತ್ರ ಖಂಡಿತ ಆಗಿರಲಿಲ್ಲ.

ಕಾಂಗ್ರೆಸಿನಲ್ಲಿ ಬಹುಶಃ ದೇಶದಲ್ಲೇ ಮೊದಲ ಬಾರಿಗೆ ಸಿದ್ಧರಾಮಯ್ಯ ಹಿಂದಿ ಭಾಷೆಯ ಹೇರಿಕೆ, ಮನುವಾದದ ಹೇರಿಕೆ, ಮೂಢನಂಬಿಕೆಗಳ ವಿರುದ್ಧ, ಒಕ್ಕೂಟವಾದದ ನೀತಿಗಳ ಉಲ್ಲಂಘನೆ ಬಗ್ಗೆ ಸರಿಯಾದ ಪ್ರತಿರೋಧ ವ್ಯಕ್ತಪಡಿಸಿದರು. ಪ್ರಾದೇಶಿಕ ಅಸ್ಮಿತೆಯನ್ನು ಎತ್ತಿ ಹಿಡಿದರು. ಅದನ್ನು ಸ್ವಲ್ಪ ಮಟ್ಟಿಗೆ ಚುನಾವಣಾ ವಿಷಯ ಮಾಡುವುದರಲ್ಲೂ ಯಶಸ್ವಿಯಾದರು. ಸಾಮಾಜಿಕ ಮಾಧ್ಯಮಗಳಲ್ಲಿ ಬಿಜೆಪಿಗೆ ತಕ್ಕ ಉತ್ತರ ನೀಡಿದ್ದೂ ಸಕಾರಾತ್ಮಕವಾಗಿತ್ತು. ಅಂತಿಮವಾಗಿ ಚುನಾವಣಾ ಕಾಲದಲ್ಲೂ ಇತರ ಅವಧಿಗಳಲ್ಲೂ ಸತತವಾಗಿ ಜನಸಂಪರ್ಕ ಇಟ್ಟುಕೊಳ್ಳುವ ಬದ್ಧತೆ ಇರುವ ಕಾರ್ಯಕರ್ತರು ಇಲ್ಲದೆ ಯಾವ ಪಕ್ಷವೂ ಬೆಳೆಯಲಾರದು, ಬದುಕಿ ಬಾಳಲಾರದು. ಕಾಂಗ್ರೆಸಿಗೆ ಇಂತಹ ಬದ್ಧ ಕಾರ್ಯಕರ್ತರ ಪಡೆ ಇಲ್ಲ.

ಇವೆಲ್ಲ ಕಾರಣಗಳಿಂದ ಕಾಂಗ್ರೆಸ್ ಸೋತಿದೆ. ಕಾಂಗ್ರೆಸ್–ಜೆಡಿ(ಎಸ್) ಕೂಟ ಸರಕಾರ ರಚಿಸಿದರೂ ಇವನ್ನು ಸರಿಪಡಿಸದೆ 2019ರ ಲೋಕಸಭಾ ಚುನಾವಣೆಯನ್ನು ಸಮರ್ಥವಾಗಿ ಎದುರಿಸಲಾರದು.

ಕರ್ನಾಟಕ ವಿಧಾನಸಭಾ ಚುನಾವಣೆ 2018 ಮತ್ತು ಸಿಪಿಐ(ಎಂ) ಸ್ಪರ್ಧೆ

ಸಿಪಿಐ(ಎಂ) 19 ಸ್ಥಾನಗಳಲ್ಲಿ ಸ್ಪರ್ಧೆ ಮಾಡಿದ್ದು ಈ ಕ್ಷೇತ್ರಗಳಲ್ಲಿ ಪಕ್ಷದ ಮತಗಳಿಕೆ ಮತ್ತು ಸ್ಥಾನ ಈ ಕೆಳಗೆ ಕೊಡಲಾಗಿದೆ. ಆ ಕ್ಷೇತ್ರದಲ್ಲಿ ಮೊದಲ ಮೂರು ಸ್ಥಾನ ಪಡೆದ ಅಭ್ಯರ್ಥಿಗಳ ಹೆಸರು, ಮತಗಳಿಕೆಯನ್ನೂ ಕೊಡಲಾಗಿದೆ. ಈ ವಿವರಗಳಿಂದ ಈ ಕೆಳಗಿನ ಮುಖ್ಯಾಂಶಗಳನ್ನು ಗ್ರಹಿಸಬಹುದು:

* ಬಾಗೇಪಲ್ಲಿಯಲ್ಲಿ ಎರಡನೇ ಸ್ಥಾನ ಪಡೆದಿದ್ದು, ಮತಗಳಿಕೆ 2013ರ 35,263 ರಿಂದ 51,697 ಕ್ಕೆ ಏರಿದೆ.
* ಈ 19 ಕ್ಷೇತ್ರಗಳಲ್ಲಿ 10 ಕ್ಷೇತ್ರದಲ್ಲಿ ಕಾಂಗ್ರೆಸ್, 8 ಕ್ಷೇತ್ರಗಳಲ್ಲಿ ಬಿಜೆಪಿ, 1 ಕ್ಷೇತ್ರದಲ್ಲಿ ಜೆಡಿ–ಎಸ್ ಗೆದ್ದಿದೆ. ಯಾವ ಕ್ಷೇತ್ರದಲ್ಲೂ ಸಿಪಿಐ(ಎಂ) ಸ್ಪರ್ಧೆಯಿಂದಾಗಿ ಬಿಜೆಪಿಗೆ ಗೆಲುವು ಸಿಕ್ಕಿಲ್ಲ.
* ಬಾಗೇಪಲ್ಲಿ ಮತ್ತು ಗೌರಿಬಿದನೂರು ಬಿಟ್ಟರೆ ಹಿಂದೆ ಸ್ಪರ್ಧಿಸಿದ್ದ ಇತರ ಕ್ಷೇತ್ರಗಳಲ್ಲಿ ಮತಗಳಿಕೆ ಕಡಿಮೆಯಾಗಿದೆ
* ಮೂರು ಕ್ಷೇತ್ರಗಳಲ್ಲಿ ಸಿಪಿಐ(ಎಂ) ಮೂರನೇ ಸ್ಥಾನದಲ್ಲಿದೆ. ಮಂಗಳೂರು–ದಕ್ಷಿಣ ಮತ್ತು ಬೈಂದೂರು ಕ್ಷೇತ್ರಗಳಲ್ಲಿ ಜೆಡಿ–ಎಸ್ 4ನೇ ಸ್ಥಾನದಲ್ಲಿದೆ. ಮಂಗಳೂರು–ಉತ್ತರದಲ್ಲಿ ಜೆಡಿ–ಎಸ್ ಅಭ್ಯರ್ಥಿ ಇರಲಿಲ್ಲ.
* ಏಳು ಕ್ಷೇತ್ರಗಳಲ್ಲಿ ಸಿಪಿಐ(ಎಂ) 4ನೇ ಸ್ಥಾನದಲ್ಲಿದೆ. ಮೊದಲ ಮೂರು ಸ್ಥಾನಗಳನ್ನು ಕಾಂಗ್ರೆಸ್, ಬಿಜೆಪಿ, ಜೆಡಿ–ಎಸ್ ಗಳು ಪಡೆದಿವೆ.
* ಎಂಟು ಕ್ಷೇತ್ರಗಳಲ್ಲಿ ಸಿಪಿಐ(ಎಂ) 5ನೇ ಸ್ಥಾನದಲ್ಲಿದೆ. ಈ ಕ್ಷೇತ್ರಗಳಲ್ಲಿ ಸಣ್ಣ ಪಕ್ಷಗಳಾದ ಆರ್.ಪಿ.ಐ., ಬಿ.ಎಸ್.ಪಿ., ಪಿರಮಿಡ್ ನ ಅಭ್ಯರ್ಥಿಗಳು ಮತ್ತು 4 ಕ್ಷೇತ್ರಗಳಲ್ಲಿ ಪಕ್ಷೇತರರು ಸಿಪಿಐ(ಎಂ) ಗಿಂತ ಹೆಚ್ಚು ಮತ ಪಡೆದಿದ್ದಾರೆ.
* ಸಿಪಿಐ(ಎಂ) ಮತಗಳಿಕೆ (ಬಾಗೇಪಲ್ಲಿಯಲ್ಲಿ ಬಿಟ್ಟು) 1 ಕ್ಷೇತ್ರದಲ್ಲಿ 3 ಸಾವಿರಕ್ಕಿಂತ ಹೆಚ್ಚು, 4 ಕ್ಷೇತ್ರಗಳಲ್ಲಿ 2 ರಿಂದ 3 ಸಾವಿರ, 12 ಕ್ಷೇತ್ರಗಳಲ್ಲಿ 1 ರಿಂದ 2 ಸಾವಿರ, 1 ಕ್ಷೇತ್ರದಲ್ಲಿ 1 ಸಾವಿರಕ್ಕಿಂತ ಕಡಿಮೆ ಮತಗಳಿಕೆ ಇದೆ.
* ನಾಲ್ಕು ಕ್ಷೇತ್ರಗಳಲ್ಲಿ ಇತರ ಎಡ ಪಕ್ಷಗಳ – ಸಿಪಿಐ(ಎಂ–ಎಲ್–ಲಿಬರೇಶನ್) ಹಗರಿಬೊಮ್ಮನಹಳ್ಳಿ, ಕೆ.ಆರ್.ಪುರಂ ಮತ್ತು ಗಂಗಾವತಿ ಕ್ಷೇತ್ರಗಳಲ್ಲಿ ಹಾಗೂ ಎಸ್.ಯು.ಸಿ.ಐ(ಸಿ) ಕಲಬುರ್ಗಿಯಲ್ಲಿ – ಅಭ್ಯರ್ಥಿಗಳು ಸಿಪಿಐ(ಎಂ) ವಿರುದ್ಧ ಸ್ಪರ್ಧಿಸಿದ್ದಾರೆ.

ಸಿಪಿಐ(ಎಂ) ಮತಗಳಿಕೆ – ವಿಧಾನಸಭಾ ಚುನಾವಣೆ 2018

	ಕ್ಷೇತ್ರ ಸಿಪಿಐ(ಎಂ) ಅಭ್ಯರ್ಥಿ	ಸ್ಥಾನ ಮತಗಳಿಕೆ	ಗೆದ್ದವರು ಪಕ್ಷ, ಮತಗಳಿಕೆ	ಎರಡನೇ ಸ್ಥಾನ ಪಕ್ಷ, ಮತಗಳಿಕೆ	ಮೂರನೇ ಸ್ಥಾನ ಪಕ್ಷ, ಮತಗಳಿಕೆ	ಟಿಪ್ಪಣಿ
1.	ಬಾಗೇಪಲ್ಲಿ ಜಿ.ವಿ.ಶ್ರೀರಾಮರೆಡ್ಡಿ	ಎರಡನೇ 51,697	ಸುಬ್ಬಾರೆಡ್ಡಿ, ಕಾಂಗ್ರೆಸ್ 65,710	**ಜಿ.ವಿ.ಶ್ರೀರಾಮರೆಡ್ಡಿ, ಸಿಪಿಎಂ 51,697**	ಮನೋಹರ್, ಜೆಡಿ–ಎಸ್ 38,302	ಸಾಯಿಕುಮಾರ್, ಬಿಜೆಪಿ (4ನೇ ಸ್ಥಾನ) 4140
2.	ಕಲಬುರ್ಗಿ ಗ್ರಾಮೀಣ ಮಾರುತಿ ಮಾನ್ಪಡೆ	ನಾಲ್ಕನೇ 3491	ಬಸವರಾಜ್ ಮಟ್ಟಿಮುದ್ ಬಿಜೆಪಿ, 61750	ವಿಜಯಕುಮಾರ್ ಜಿ ಕಾಂಗ್ರೆಸ್ 49364	ರೇವು ನಾಯಕ್ ಜೆಡಿ–ಎಸ್ 29538	ಎಸ್.ಯು.ಸಿ.ಐ. – 1044
3.	ಮಂಗಳೂರು–ಉತ್ತರ ಮುನೀರ್ ಕಾಟಿಪಳ್ಳ	ಮೂರನೇ 2472	ಭರತ ಶೆಟ್ಟಿ ಬಿಜೆಪಿ 98648	ಮೊಹಿಯುದ್ದೀನ್ ಬಾವಾ ಕಾಂಗ್ರೆಸ್ 72000	**ಮುನೀರ್ ಕಾಟಿಪಳ್ಳ ಸಿಪಿಎಂ 2472**	ಜೆಡಿ–ಎಸ್ ಅಭ್ಯರ್ಥಿ ಇಲ್ಲ
4.	ಬೈಂದೂರು ಸುರೇಶ್ ಕಲ್ಲಾಗರ	ಮೂರನೇ 2415	ಸುಕುಮಾರ ಶೆಟ್ಟಿ ಬಿಜೆಪಿ, 96029	ಗೋಪಾಲ ಪೂಜಾರಿ ಕಾಂಗ್ರೆಸ್ 71636	**ಸುರೇಶ್ ಕಲ್ಲಾಗರ ಸಿಪಿಎಂ 2415**	ಜೆಡಿ–ಎಸ್ – 1911 (4ನೇ ಸ್ಥಾನ)
5.	ಮಂಗಳೂರು (ಉಳ್ಳಾಲ) ನಿತಿನ್ ಕುತ್ತಾರ್	ನಾಲ್ಕನೇ 2372	ಯು.ಟಿ. ಅಬ್ದುಲ್ ಖಾದರ್ ಕಾಂಗ್ರೆಸ್ 80813	ಸಂತೋಷ ಕುಮಾರ್ ಬಿಜೆಪಿ 61074	ಕೆ.ಅಶ್ರಫ್ ಜೆಡಿ–ಎಸ್, 3692	
6.	ಮಂಗಳೂರು–ದಕ್ಷಿಣ ಸುನಿಲ್ ಕುಮಾರ್ ಬಜಾಲ್	ಮೂರನೇ 2329	ವೇದವ್ಯಾಸ ಕಾಮತ್ ಬಿಜೆಪಿ, 86545	ಜೆ ಆರ್ ಲೊಬೊ ಕಾಂಗ್ರೆಸ್ 70470	**ಸುನಿಲ್ ಬಜಾಲ್ ಸಿಪಿಎಂ 2329**	ಜೆಡಿ–ಎಸ್ – 773 (5 ನೇ ಸ್ಥಾನ)
7.	ಕೆ.ಜಿ.ಎಫ್. ಪಿ ತಂಗರಾಜ್	ಐದನೇ 1746	ರೂಪಕಲಾ ಕಾಂಗ್ರೆಸ್ 71151	ಅಶ್ವಿನಿ ಸಂಪಂಗಿ ಬಿಜೆಪಿ 30324	ಎಸ್ ರಾಜೇಂದ್ರನ್ ಆರ್.ಪಿ.ಐ. 20393	ಜೆಡಿ–ಎಸ್ 8976 (4ನೇ ಸ್ಥಾನ)
8.	ದಾಸರಹಳ್ಳಿ ನರಸಿಂಹಮೂರ್ತಿ	ನಾಲ್ಕನೇ 1674	ಆರ್. ಮಂಜುನಾಥ ಜೆಡಿ–ಎಸ್ 94,044	ಎಸ್ 'ಮುನಿರಾಜು ಬಿಜೆಪಿ 83,369	ಪಿ ಎನ್ ಕೃಷ್ಣಮೂರ್ತಿ ಕಾಂಗ್ರೆಸ್ 31,711	
9.	ರಾಮದುರ್ಗ ಗೈಬು ಜೈನೇ ಖಾನ್	ಐದನೇ 1516	ಮಹಾದೇವಪ್ಪ ಯಾದವಾಡ ಬಿಜೆಪಿ, 68349	ಅಶೋಕ ಪಟ್ಟನ್ ಕಾಂಗ್ರೆಸ್ 65474	ಪಂಚಕಟ್ಟಿಮಠ ಪಕ್ಷೇತರ 8427	ಜೆಡಿ–ಎಸ್ 2266 (4ನೇ ಸ್ಥಾನ)
10.	ಹಗರಿಬೊಮ್ಮನಹಳ್ಳಿ ಬಿ ಮಾಳಮ್ಮ	ಐದನೇ 1493	ಭೀಮಾ ನಾಯಕ್ ಕಾಂಗ್ರೆಸ್ 78337	ನೇಮಿರಾಜ ನಾಯಕ್ ಬಿಜೆಪಿ 71105	ಪರಮೇಶ್ವರ ಪಕ್ಷೇತರ, 17058	ಜೆಡಿ–ಎಸ್ 5100(4ನೇ ಸ್ಥಾನ) ಸಿಪಿಐ–ಎಂಎಲ್(ಲಿಬರೇಶನ್):305
11.	ಆನೇಕಲ್ ಮಹಾದೇಶ್ ಡಿ	ನಾಲ್ಕನೇ 1425	ಬಿ ಶಿವಣ್ಣ ಕಾಂಗ್ರೆಸ್ 1,13,894	ಎ ನಾರಾಯಣಸ್ವಾಮಿ ಬಿಜೆಪಿ 1,05,267	ಜಿ ಶ್ರಿನಿವಾಸ ಬಿ.ಎಸ್.ಪಿ. 2932	
12.	ರೋಣ ಮಲ್ಲಿಕಾರ್ಜುನ ಹಡಪದ	ಐದನೇ 1177	ಕಲಕಪ್ಪ ಬಂಡಿ ಬಿಜೆಪಿ, 83735	ಗುರುಪಾದಗೌಡ ಪಾಟಿಲ್ ಕಾಂಗ್ರೆಸ್ 76401	ರವೀಂದ್ರನಾಥ ದೊಡ್ಡನಮೇಟಿ ಜೆಡಿ–ಎಸ್ 3421	ಪಕ್ಷೇತರ – 1813 (4ನೇ ಸ್ಥಾನ)
13.	ಹಳಿಯಾಳ ಯಮುನಾ ಗಾಂವ್ಕರ್	ಐದನೇ 1127	ಆರ್.ವಿ. ದೇಶಪಾಂಡೆ ಕಾಂಗ್ರೆಸ್ 61577	ಸುನಿಲ್ ಹೆಗಡೆ ಬಿಜೆಪಿ 56437	ಪರಮೇಶ್ವರ ಜೆಡಿ–ಎಸ್ 7209	ಪಕ್ಷೇತರ – 2629 (4ನೇ ಸ್ಥಾನ)
14.	ಮೂಡಬಿದರಿ ಯಾದವಶೆಟ್ಟಿ	ಐದನೇ 1114	ಉಮಾನಾಥ ಕೋಟ್ಯಾನ್ ಬಿಜೆಪಿ, 87444	ಅಭಯಚಂದ್ರ ಜೈನ್ ಕಾಂಗ್ರೆಸ್ 57645	ಅಶ್ವಿನ್ ಪೆರೇರಾ ಪಕ್ಷೇತರ 2111	ಜೆಡಿ–ಎಸ್ 1845 (4ನೇ ಸ್ಥಾನ)
15.	ಕಂಪ್ಲಿ ಶಿವಶಂಕರಪ್ಪ	ಐದನೇ 1111	ಜೆ ಎನ್ ಗಣೇಶ ಕಾಂಗ್ರೆಸ್ 80592	ಸುರೇಶ ಬಾಬು ಬಿಜೆಪಿ 75037	ಕೆ ರಾಘವೇಂದ್ರ ಜೆಡಿ–ಎಸ್ 4832	ಪಿರಮಿಡ್ ಪಾರ್ಟಿ – 1217 (4ನೇ ಸ್ಥಾನ)
16.	ಕೆ.ಆರ್.ಪುರಂ ಎಚ್.ಎನ್.ಗೋಪಾಲಗೌಡ	ನಾಲ್ಕನೇ 1108	ಬಸವರಾಜ ಕಾಂಗ್ರೆಸ್ 1,35,404	ನಂದೀಶ ರೆಡ್ಡಿ ಬಿಜೆಪಿ 1,02,675	ಡಿ ಎ ಗೋಪಾಲ ಜೆಡಿ–ಎಸ್ 6578	ಆಪ್ – 1103 (5ನೇ ಸ್ಥಾನ) ಸಿಪಿಐ–ಎಂಎಲ್(ಲಿಬರೇಶನ್):535
17.	ಗೌರಿಬಿದನೂರು ರವಿಚಂದ್ರರೆಡ್ಡಿ	ನಾಲ್ಕನೇ 1095	ಶಿವಶಂಕರ ರೆಡ್ಡಿ ಕಾಂಗ್ರೆಸ್ 69000	ನರಸಿಂಹಮೂರ್ತಿ ಜೆಡಿ–ಎಸ್ 59832	ಜಯಪಾಲ್ ರೆಡ್ಡಿ ಬಿಜೆಪಿ 34759	
18.	ಗಂಗಾವತಿ ಜಿ. ನಾಗರಾಜ್	ನಾಲ್ಕನೇ 1045	ಈಶ್ವರಪ್ಪ ಮುನಾವಳ್ಳಿ ಬಿಜೆಪಿ, 61617	ಇಕ್ಬಾಲ್ ಅನ್ಸಾರಿ ಕಾಂಗ್ರೆಸ್ 59644	ಕರಿಯಣ್ಣ ಸಂಗತಿ ಜೆಡಿ–ಎಸ್ 14161	ಸಿಪಿಐ–ಎಂಎಲ್(ಲಿಬರೇಶನ್) – 758
19.	ಶ್ರೀನಿವಾಸಪುರ ಪಿ.ಆರ್.ಸೂರ್ಯನಾರಾಯಣ	ಐದನೇ 784	ರಮೇಶ ಕುಮಾರ್ ಕಾಂಗ್ರೆಸ್ 93571	ವೆಂಕಟಶಿವಾರೆಡ್ಡಿ ಜೆಡಿ–ಎಸ್ 83019	ವೇಣುಗೋಪಾಲ ಕೆ ಎನ್ ಬಿಜೆಪಿ 4208	ಪಕ್ಷೇತರ – 837(4ನೇ ಸ್ಥಾನ)

ರೂಪಾಯಿ ಮೌಲ್ಯ, ರಫ್ತು ಮೌಲ್ಯ ತತ್ತರ–ಶೇರು ಸೂಚ್ಯಂಕ ನಾಗಾಲೋಟ

ಮೇ 15 ರ ಬೆಳಿಗ್ಯೆ–ರೂಪಾಯಿ ಮೌಲ್ಯ ಮೇ 15ರಂದು ಕಳದೆ 16ತಿಂಗಳಲ್ಲೇ ಅತೀ ಕೆಳಗಿನ ಮಟ್ಟಕ್ಕೆ, ಡಾಲರಿಗೆ 68.07ರ ಮಟ್ಟಕ್ಕೆ ಇಳಿದಿತ್ತು. ಆದರೆ ಶೇರು ಪೇಟೆ ಸೂಚ್ಯಂಕಗಳು, ಅಚ್ಛೇ ದಿನ್ ಮುಖ್ಯಮಂತ್ರಿ ಅಭ್ಯರ್ಥಿ ತಾನು ಮಧ್ಯಾಹ್ನ ಮೂರು ಗಂಟೆಗೆ ದಿಲ್ಲಿಗೆ ಹೊರಟಿದ್ದೇನೆ, ಪ್ರತಿಜ್ಞಾ ಸ್ವೀಕಾರದ ಆಹ್ವಾನವನ್ನು ತಮ್ಮ ಅಧ್ಯಕ್ಷರು ಮತ್ತು ದೇಶದ ಪ್ರಧಾನಿಗಳಿಗೆ ಕೊಟ್ಟು ಬರುತ್ತೇನೆ ಎಂದಿದ್ದಾರೆ ಎಂಬ ಸುದ್ದಿಯೊಡನೆ ನಾಗಾಲೋಟ ಹೂಡಿದವು. ಮಧ್ಯಾಹ್ನ ದಾಟುವ ವೇಳೆಗೆ ಚಿತ್ರ ಬದಲಾಗಲಾರಂಭಿಸಿತು. ಮುಖ್ಯಮಂತ್ರಿಯಾಗಬೇಕಾದವರ ದಿಲ್ಲಿ ಹಾರಾಟ, ಅವರ ರಾಷ್ಟ್ರ ಅಧ್ಯಕ್ಷರ ಪತ್ರಿಕಾ ಗೋಷ್ಠಿ ರದ್ದಾದ ಸುದ್ದಿಯೊಡನೇ ಶೇರು ಪೇಟೆಯ ನಾಗಾಲೋಟವೂ ನಿಂತಿತು. ಮೇ 17 ರಂದು ಕೊನೆಗೂ ರಾಜ್ಯಪಾಲರ ಕೃಪೆಯಿಂದ ಮುಖ್ಯಮಂತ್ರಿ ಪ್ರತಿಜ್ಞೆ ಸ್ವೀಕಾರ ಮಾಡಿದರೂ, ಕೆಳಗಿಳಿದ ಶೇರು ಪೇಟೆ ಸೂಚ್ಯಂಕಗಳು ಮೇಲೇಳಲು ಆರಂಭವಾಗಿಲ್ಲ–ಬಹುಶಃ ಯೋಜಿಸಿದ್ದಂತೆ ಪ್ರಧಾನಿಗಳು ಮತ್ತು ಪಕ್ಷದ ಅಧ್ಯಕ್ಷರು ಈ ಪ್ರತಿಜ್ಞಾ ಸ್ವೀಕಾರದಲ್ಲಿ ಭಾಗವಹಿಸಲಾಗದ ಶೋಕಾಚರಣೆಯಿಂದಾಗಿ.

ಈ ನಡುವೆ ದೇಶದ ಅರ್ಥಿಕ ಪರಿಸ್ಥಿತಿ ಗಂಭೀರವಾಗುತ್ತಿದೆ ಎಂದು ಆಳುವ ವಲಯಗಳೇ ಆತಂಕ ಪಡುತ್ತಿವೆ. ಇದು ಶೇರು ಸೂಚ್ಯಂಕಗಳೇ ಅಚ್ಛೇದಿನ್ ಸೂಚ್ಯಂಕಗಳು ಎಂದು ನಂಬಿಸಿರುವ, ಕಳೆದ ನಾಲ್ಕು ವರ್ಷಗಳಲ್ಲಿ ಇನ್ನಷ್ಟು ತೀವ್ರಗೊಂಡ ಆರ್ಥಿಕ ಧೋರಣೆಗಳ ಫಲಿತಾಂಶ ಎಂದು ಬೇರೆ ಹೇಳಬೇಕಾಗಿಲ್ಲ.


*ನಮ್ಮ ರೂಪಾಯಿ ಈಗ ಏಶ್ಯಾದಲ್ಲೇ ಅತ್ಯಂತ ಕೆಟ್ಟ ಪ್ರದರ್ಶನ ತೋರುತ್ತಿರುವ ಕರೆನ್ಸಿಯಾಗಿದೆ ಎನ್ನುತ್ತಾರೆ ಪರಿಣಿತರು.** ಇದಕ್ಕೆ ಒಂದು ಕಾರಣ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರುತ್ತಿರುವ ಕಚ್ಚಾತೈಲ ಬೆಲೆಗಳು ಎಂಬುದು ಅವರ ವಿಶ್ಲೇಷಣೆ.

*ರೂಪಾಯಿ ಮೌಲ್ಯ ಇಳಿದರೂ ನಮ್ಮ ರಫ್ತುಗಳ ಮೊತ್ತ ಏರುವ ಬದಲು ಇಳಿದಿದೆ, ಮುಖ್ಯವಾಗಿ ಮಾನವ ಸಂಪನ್ಮೂಲದ ಮೇಲೆ ಹೆಚ್ಚು ಅವಲಂಬಿಸಿರುವ ಸಿದ್ಧ ಉಡುಪುಗಳು, ರತ್ನಗಳು, ಆಭರಣಗಳು ಮುಂತಾದ ಉತ್ಪನ್ನಗಳ ರಫ್ತಿನಲ್ಲಿ ತೀವ್ರ ಇಳಿಕೆಯಾಗಿದೆ. ಆಮದು– ರಫ್ತಿನ ನಡುವಿನ ಅಂತರ ಎಪ್ರಿಲ್ 2017ರಲ್ಲಿ 13.25 ಬಿಲಿಯ ಡಾಲರುಗಳಿದ್ದದ್ದು ಎಪ್ರಿಲ್ 2018ರಲ್ಲಿ 13.7 ಬಿಲಿಯ ಡಾಲರುಗಳಿಗೆ ಏರಿದೆಯಂತೆ. ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಆಮದಿನ ಮೊತ್ತದಲ್ಲಿ 41.5% ಏರಿಕೆಯಾಗಿದೆ. ಇದು ಇರಾನ್ ಒಪ್ಪಂದವನ್ನು ಟ್ರಂಪ್ ಹರಿದು ಹಾಕಿದ ಮೇಲೆ ಇನ್ನಷ್ಟು ಹೆಚ್ಚುವ ಭೀತಿಯಿದೆ.

*ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಕಳೆದ ಐದು ತಿಂಗಳಲ್ಲಿ ಇಳಿಯುತ್ತ ಬರುತ್ತಿದ್ದು ಮಾರ್ಚ್ 2018ರಲ್ಲಿ 4.4%ಕ್ಕೆ ಬಂದು ನಿಂತಿದೆ.

*ಎಪ್ರಿಲ್ ತಿಂಗಳಲ್ಲಿ ವಿದೇಶಿ ಶೇರು ಹೂಡಿಕೆಗಳಲ್ಲಿ 15, 500 ಕೋಟಿ ರೂ.ಗಳು ದೇಶದಿಂದ ಹೊರಕ್ಕೆ ಹರಿದಿವೆ ಎಂಬುದು ಪರಿಣಿತರನ್ನು ಆತಂಕಕ್ಕೆ ಈಡು ಮಾಡಿರುವ ಇನ್ನೊಂದು ಸಂಗತಿ.

***ಚಿಲ್ಲರೆ ಹಣದುಬ್ಬರ ದರ 4.58%ಕ್ಕೆ ಏರಿದೆ. ಕರ್ನಾಟಕದಲ್ಲಿ ಚುನಾವಣೆಗಳ ಹಿನ್ನೆಲೆಯಲ್ಲಿ ಅಚ್ಛೇದಿನ್‌ಚಿತ್ರಕ್ಕೆ ಭಂಗ ಬರದಂತೆ ಮಾಡಲು 19 ದಿನಗಳ ಕಾಲ ತಡೆಹಿಡಿದಿದ್ದ ಪೆಟ್ರೋಲ್–ಡೀಸೆಲ್ ಬೆಲೆಗಳು ಅವನ್ನು ಬೇಗನೇ ತುಂಬಿ ಕೊಳ್ಳಲೆಂಬಂತೆ ಮತ್ತೆ ಏರಿಕೆಗಳನ್ನು ಕಾಣುತ್ತಿವೆ.** ಮೇಲೆ ಗಮನಿಸಿದಂತೆ, ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆಗಳು ಏರುತ್ತಿರುವುದರಿಂದ ಒಟ್ಟಾರೆ ಹಣದುಬ್ಬರ, ಬೆಲೆಯೇರಿಕೆ ಮತ್ತಷ್ಟು ಏರುವ ಭೀತಿ ಜನಸಾಮಾನ್ಯರನ್ನು ಆವರಿಸುತ್ತಿದೆ. ಇತ್ತ **ಕಚ್ಚಾತೈಲ ಬೆಲೆಗಳು ಇಳಿಯುತ್ತಿದ್ದಾಗ ತನ್ನ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಹೆಚ್ಚಿಸಿದ ಅಬಕಾರಿ ಸುಂಕಗಳನ್ನು ಇಳಿಸಿ ಜನಸಾಮಾನ್ಯರ ಮೇಲಿನ ಬೆಲೆಯೇರಿಕೆ ಹೊರೆಯನ್ನು ಇಳಿಸುವ ಯಾವ ಯೋಚನೆಯೂ ಅಚ್ಛೇದಿನ್ ಮಂದಿಗೆ ಇದ್ದಂತಿಲ್ಲ.**



ಖಾಸಗಿಯವರಿಂದ ಚುನಾವಣಾ ಬಾಂಡ್, ಖಾಸಗಿಯವರಿಗೆ ವಿವಿಪಿಎಟಿ?

ಎಲೆಕ್ಟ್ರಾನಿಕ್ ಮತದಾನ ಯಂತ್ರ ಅಥವ ಇವಿಎಂ ನ ದುರುಪಯೋಗವನ್ನು ತಡೆಯುವ ಒಂದು ಕ್ರಮವಾಗಿ ನಾವು ಇವಿಎಂ ಗುಂಡಿ ಒತ್ತಿದಾಗ ನಮ್ಮ ಮತ ನಮ್ಮ ಆಯ್ಕೆಯ ಅಭ್ಯರ್ಥಿಗೇ ಜಮಾ ಅಗಿದೆ ಎಂದು ಖಾತ್ರಿ ಮಾಡಿಕೊಳ್ಳಲು ವಿವಿಪಿಎಟಿ, ಅಂದರೆ 'ಪರೀಕ್ಷಿಸಬಹುದಾದ ಕಾಗದ ಪರಿಶೋಧನೆ ಜಾಡು' ಎಂಬುದನ್ನು ಯಂತ್ರಕ್ಕೆ ಜೋಡಿಸುವ ತಂತ್ರಜ್ಞಾನ ಅಳವಡಿಸಬೇಕು, 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಇದು ಸಂಪೂರ್ಣವಾಗಿ ಜಾರಿಗೆ ಬರಬೇಕು ಎಂದು 2013ರಲ್ಲಿ ಸುಪ್ರಿಂ ಕೋರ್ಟ್ ಆದೇಶ ನೀಡಿತ್ತು. ಆದರೆ ನಂತರ ಬಂದ ಅಚ್ಛೇ ದಿನ್‌ಗಳ ಸರಕಾರ ಇದಕ್ಕೆ ಹಣ ಒದಗಿಸದ್ದರಿಂದ ಜಾರಿಗೆ ಬರುವಲ್ಲಿ ವಿಳಂಬವಾಯಿತು. ಹಣ ಮಂಜೂರು ಮಾಡಿದಾಗಲೂ ಖಾಸಗಿಯವರಿಂದ ಇದನ್ನು ಖರೀದಿಸಬೇಕು ಎಂದು ಕಾನೂನು ಮಂತ್ರಾಲಯ ಸೂಚಿಸಿತ್ತಂತೆ. ಇದನ್ನು ಚುನಾವಣಾ ಆಯೋಗ ಖಡಾಖಂಡಿತವಾಗಿ ನಿರಾಕರಿಸಿತು ಎಂದು ಇತ್ತೀಚೆಗೆ ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದ ಮಾಹಿತಿಯಿಂದ ಬಯಲಿಗೆ ಬಂದಿದೆ.

ಈಗಾಗಲೇ ಇವಿಎಂನ ವಿಶ್ವಾಸಾರ್ಹತೆಯ ಬಗ್ಗೆ ಸಂದೇಹ ಮೂಡಿರುವಾಗ ಖಂಡಿತ ವಿವಿಪಿಎಟಿಯನ್ನು ಖಾಸಗಿಯವರಿಂದ ಖರೀದಿಸಬಾರದು ಎಂದ ಚುನಾವಣಾ ಆಯೋಗ ಇದಕ್ಕೆ ಇನ್ನೂ ಕೆಲವು ಕಾರಣಗಳನ್ನು ಕೊಟ್ಟಿತು.

* ಇವಿಎಂ ಯಂತ್ರಗಳನ್ನು ಕೇವಲ ಎರಡೇ ಸಾರ್ವಜನಿಕ ವಲಯದ ಉದ್ದಿಮೆಗಳು, ಬೆಂಗಳೂರಿನ ಬಿಇಎಲ್ ಮತ್ತು ಹೈದರಾಬಾದಿನ ಇಸಿಐಎಲ್ ತಯಾರಿಸಿ ಕೊಡುತ್ತಿವೆ. ಅವು ವಿವಿಪಿಎಟಿ ಯಂತ್ರಗಳನ್ನೂ ತಯಾರಿಸಿಕೊಡುತ್ತವೆ. ಮತ್ತು 15 ವರ್ಷಗಳ ಸರ್ವಿಸ್‌ನ ಬೇಷರತ್ ಹೊಣೆ ವಹಿಸುತ್ತವೆ. ಖಾಸಗಿ ಕಂಪನಿಗಳು ಇಂತಹ ಹೊಣೆ ತಗೊಳ್ಳುವುದಿಲ್ಲ.
* ಇವುಗಳನ್ನು ಯಾರೂ ದುರುಪಯೋಗ ಪಡಿಸದಂತೆ ಭದ್ರತಾ ವ್ಯವಸ್ಥೆಗಳನ್ನು ಖಾಸಗಿಯವರು ಒದಗಿಸಬಲ್ಲರು ಎಂಬುದು ಖಾತ್ರಿಯಿಲ್ಲ.
* ಬಿಇಎಲ್, ಇಸಿಐಎಲ್‌ನಂತೆ ಖಾಸಗಿ ಯವರು ಇದಕ್ಕಾಗಿ ಉನ್ನತ ಗುಣಮಟ್ಟದ ಮೂಲರಚನೆ ಹೊಂದಿದ್ದಾರೆಯೇ ಎಂಬುದು ಮತ್ತೊಂದು ಪ್ರಮುಖ ಪ್ರಶ್ನೆ.

ಅಷ್ಟಕ್ಕೂ, ಚುನಾವಣಾ ಪ್ರಕ್ರಿಯೆ ಭಾರತೀಯ ಪ್ರಜಾಪ್ರಭುತ್ವದ ಅಭಿನ್ನ ಅಂಗ. ಸಾರ್ವಜನಿಕ ವಲಯದ ಉದ್ದಿಮೆಗಳು ಚೆನ್ನಾಗಿಯೇ ಈ ನಿಟ್ಟಿನಲ್ಲಿ ಸೇವೆ ಒದಗಿಸುತ್ತಿರುವಾಗ ಈ ಸರಕಾರಕ್ಕೆ ಖಾಸಗಿಯವರಿಂದ ಖರೀದಿಸುವ ಯೋಚನೆಯಾದರೂ ಏಕೆ ಎಂಬುದು ನಾಗರಿಕರಲ್ಲಿ ಎದ್ದಿರುವ ಪ್ರಶ್ನೆ.

ಈ ಸರಕಾರ ಚುನಾವಣಾ ನಿಧಿ ಸಂಗ್ರಹವನ್ನು ಪಾರದರ್ಶಕಗೊಳಿಸುವ ಹೆಸರಿನಲ್ಲಿ ಚುನಾವಣಾ ಬಾಂಡುಗಳನ್ನು ತಂದು ಇನ್ನಷ್ಟು ಅಪಾರದರ್ಶಕಗೊಳಿಸಿದೆ; ರಾಜಕೀಯ ಪಕ್ಷಗಳಿಗೆ ವಿದೇಶಿ ನಿಧಿ ಪಡೆಯಲು ಅವಕಾಶ ನೀಡಿದೆ. ಈಗ ವಿವಿಪಿಎಟಿಯನ್ನು ಖಾಸಗಿಯವರ ಮೂಲಕ 'ನಿರ್ವಹಿಸ' ಬಯಸುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ಮೇಲೆ ನಡೆಸಿರುವ ವ್ಯವಸ್ಥಿತ ದಾಳಿಯ ಭಾಗ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

'ನ ಖಾನೇ ದೂಂಗಾ'ದಲ್ಲಿ 'ನ' ಮಾಯವಾಗಿದೆಯೇ?

ಜಮ್ಮು–ಕಾಶ್ಮೀರ ಮುಖಂಡರುಗಳಿಗೆ ಎನ್‌ಪಿಎ ನೋಟೀಸುಗಳು ಬಂದಿರುವುದೇಕೆ?

ಸೇನೆಯ ಬಗ್ಗೆ ವಿಮರ್ಶಾತ್ಮಕವಾಗಿ ಮಾತಾಡುವುದೇ ದೇಶದ್ರೋಹ ಎನ್ನುವ ಅಚ್ಛೇ ದಿನ್ ಪಕ್ಷದ ಜಮ್ಮುಪ್ರದೇಶದ ಮುಖಂಡರು ಈಗ ಸೇನಾಧಿಕಾರಿಗಳೊಂದಿಗೇ ಜಗಳಕ್ಕೆ ಇಳಿದಿರುವಂತೆ ಕಾಣುತ್ತದೆ. ಸೇನಾ ಮದ್ದುಗುಂಡುಗಳ ಡಿಪೋ ಬಳಿ ಜಮ್ಮು–ಕಾಶ್ಮೀರದ ವಿಧಾನಸಭಾ ಅಧ್ಯಕ್ಷರು(ಮೊನ್ನೆ–ಮೊನ್ನೆಯ ವರೆಗೆ ಸ್ವತಃ ಉಪಮುಖ್ಯಮಂತ್ರಿಗಳಾಗಿದ್ದವರು!) ಮನೆ ಕಟ್ಟುವುದನ್ನು ನಿಲ್ಲಿಸಬೇಕು, ಇದು ಡಿಪೋದ ಮತ್ತು ಸುತ್ತಲಿರುವವರ ಭದ್ರತೆಗೆ ಮಾರಕ ಮತ್ತು ಕಾನೂನುಬಾಹಿರ ಕೂಡ ಎಂದು ಡಿಪೋದ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಹುದ್ದೆಯ ಸೇನಾಧಿಕಾರಿ ನೋಟೀಸ್ ಕೊಟ್ಟಿರುವ ಬಗ್ಗೆ ಈ ಮಾಜಿ ಉಪಮುಖ್ಯಮಂತ್ರಿಗಳಿಗೆ ಆಕ್ರೋಶ.

ಈ ಬಗ್ಗೆ ತನಿಖೆ ನಡೆಸಿದ ಇಂಡಿಯನ್ ಎಕ್ಸ್‌ಪ್ರೆಸ್ ಇನ್ನಷ್ಟು ಮಾಹಿತಿಗಳನ್ನು ಹೊರ ತಂದಿದೆ. ಸಂಕ್ಷಿಪ್ತವಾಗಿ ಅವು ಹೀಗಿವೆ:

* ಈಗಿನ ಉಪಮುಖ್ಯಮಂತ್ರಿ(ಇತ್ತೀಚೆಗೆ ಕಠುವಾ ಪ್ರಕರಣ ನಡೆಯುವ ವರೆಗೆ ವಿಧಾನಸಭಾಧ್ಯಕ್ಷ)ಯವರ ಜಮೀನೂ ಇಲ್ಲೇ ಇದೆ. ಅಲ್ಲದೆ ಅವರದೇ ಪಕ್ಷದ ಲೋಕಸಭಾ ಸದಸ್ಯರ ಜಮೀನೂ ಇಲ್ಲೇ ಇದೆ.
* ಈ ಜಮೀನನ್ನು ಹಿಮಗಿರಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿ. ಎಂಬ ಕಂಪನಿ ಖರೀದಿಸಿದ್ದು.
* ಇದು 2000ದಲ್ಲಿ ಇದೇ ಮುಖಂಡರುಗಳು ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರಚಿಸಿಕೊಂಡ ಖಾಸಗಿ ಕಂಪನಿ. ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಸರಕಾರ ಇದ್ದಾಗ ಅದಕ್ಕೊಂದು ವಿದ್ಯುತ್ ಪ್ರಾಜೆಕ್ಟ್ ಸಿಕ್ಕಿತ್ತು.
* ಈ ಕಂಪನಿ 2014ರಲ್ಲಿ ಈ ಜಮೀನುಗಳನ್ನು ಖರೀದಿಸಿತ್ತು.
* ಜಮ್ಮು–ಕಾಶ್ಮೀರದಲ್ಲಿ ಪಿಡಿಪಿ–ಬಿಜೆಪಿ ಸರಕಾರ 'ರಚನೆಯಾದ ನಂತರ ಐಐಟಿ, ಐಐಎಂ ಮತ್ತು ಪ್ರಾಣಿ ಸಂಗ್ರಹಾಲಯವನ್ನು ಇಲ್ಲಿ ಸುತ್ತಮುತ್ತ ಸ್ಥಾಪಿಸುವ ಯೋಜನೆ ತಯಾರಿಸಲಾಗಿದೆ.
* ಇತ್ತೀಚೆಗೆ ಹಿಮಗಿರಿ ಕಂಪನಿ ಜಮ್ಮು ಮತ್ತು ಕಾಶ್ಮೀರ ಬ್ಯಾಂಕಿನಿಂದ ಪಡೆದ 29.31 ಕೊಟಿ ರೂ.ಗಳ ಸಾಲ ಎನ್‌ಪಿಎ ಅಂದರೆ ವಾಪಾಸು ಬರುವ ಸಾಧ್ಯತೆ ಇಲ್ಲದ ಸಾಲವಾಗಿ ಬಿಟ್ಟಿದೆ– ಈ ಬಗ್ಗೆ ಮಾಜಿ/ ಹಾಲಿ ಉಪಮುಖ್ಯಮಂತ್ರಿಗಳು/ ವಿಧಾನಸಭಾಧ್ಯಕ್ಷರುಗಳಿಗೆ ನೋಟೀಸ್ ಬಂದಿದೆ. ಈ ಸಾಲ ತಗೊಂಡದ್ದು ಹಿಮಾಚಲ ಪ್ರದೇಶದ ವಿದ್ಯುತ್ ಯೋಜನೆಗೆಂದು. ಹಾಲಿ ವಿಧಾನಸಭಾಧ್ಯಕ್ಷರು ಇದುವರೆಗೆ ವಿದ್ಯುತ್ ಮಂತ್ರಿಯೂ ಆಗಿದ್ದರು!

2014ರಲ್ಲಿ ಚುನಾವಣಾ ಪ್ರಚಾರದ ವೇಳೆಯಲ್ಲಿ ಹುಟ್ಟು ಹಾಕಿದ ಹಲವು 'ಜನಪ್ರಿಯ' ಘೋಷಣೆಗಳಲ್ಲಿ 'ನ ಖಾವೂಂಗಾ, ನ ಖಾನೆ ದೂಂಗಾ' (ಲಂಚ ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ) ಎಂಬುದು ಕೂಡಾ ಒಂದು.

ಲಲಿತ್ ಮೋದಿ, ನೀರವ್ ಮೋದಿ, ಮೆಹುಲ್'ಬಾಯ್', ವಿಜಯ್ ಮಲ್ಯ ಮುಂತಾದವರು 'ತಿಂದು' ದೇಶ ಬಿಟ್ಟು ಹೋದಾಗ 'ನ ಖಾನೆ ದೂಂಗಾ' ಎಂಬ ಬಗ್ಗೆ ಸಂದೇಹವೆದ್ದಿತ್ತು. ಜಮ್ಮು–ಕಾಶ್ಮೀರದ ಈ ಪ್ರಕರಣ ಅದನ್ನು ಇನ್ನಷ್ಟು ಮುಂದೆ ಒಯ್ದಿರುವಂತೆ ಕಾಣುತ್ತದೆ.

ಪ್ರಧಾನ ಮಂತ್ರಿಗಳು, 10 ಸಂಪುಟ ಮಂತ್ರಿಗಳು, 11 ರಾಜ್ಯ ಮಂತ್ರಿಗಳು, 4 ಮುಖ್ಯಮಂತ್ರಿಗಳು ಮತ್ತು 104 ಸೀಟುಗಳು

"ಮಿಲಾರ್ಡ್, ಕೇಂದ್ರ ಸಂಪುಟ ಕರಡು ಯೋಜನೆಯನ್ನು ಮಂಜೂರು ಮಾಡಲು ಸಭೆ ಸೇರಲಾಗಲಿಲ್ಲ ಏಕೆಂದರೆ ಪ್ರಧಾನ ಮಂತ್ರಿಗಳು ಸೇರಿದಂತೆ ಮುಖಂಡರು ಕರ್ನಾಟಕದಲ್ಲಿ ನಡೆಯುತ್ತಿರುವ ಚುನಾವಣೆಗಳಲ್ಲಿ ಮಗ್ನರಾಗಿದ್ದಾರೆ"–ಹೀಗೆಂದು ಸುಪ್ರಿಂ ಕೋರ್ಟ್ ಮುಂದೆ ದೇಶದ ಅಟಾರ್ನಿ ಜನರಲ್ ಮೇ 8ರಂದು ಹೇಳಬೇಕಾಗಿ ಬಂತು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಫೆಬ್ರುವರಿಯಲ್ಲಿ ಸುಪ್ರಿಂ ಕೋರ್ಟ್ ನೀಡಿದ ಆದೇಶದಂತೆ ಕಾವೇರಿ ನಿರ್ವಹಣಾ ಮಂಡಳಿ ರಚಿಸುವ ಬಗ್ಗೆ ಮೇ 8ರ ವರೆಗೂ ಕ್ರಮ ಕೈಗೊಳ್ಳದ ಬಗ್ಗೆ ಕೇಳಿದಾಗ ಅವರು ನೀಡಿದ ಕಾರಣ ಇದು.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಹೌದು, ಪಾಪ ಅವರೆಲ್ಲ ಕರ್ನಾಟಕದಲ್ಲಿ ಓಡಾಡುತ್ತಿದ್ದುದು ನಿಜ. ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ 150 ಸ್ಥಾನಗಳನ್ನು ಗಳಿಸುವ ಮಿಶನ್‌ಗಾಗಿ ಬೆವರು ಸುರಿಸುತ್ತಿದ್ದರು– ಪ್ರಧಾನ ಮಂತ್ರಿಗಳು ಮತ್ತು ಪಕ್ಷದ ಅಧ್ಯಕ್ಷರಲ್ಲದೆ ಒಟ್ಟು ಕರ್ನಾಟಕದ ಇಬ್ಬರು ಸೇರಿದಂತೆ 10 ಸಂಪುಟ ಮಂತ್ರಿಗಳು, ಕರ್ನಾಟಕದ ಒಬ್ಬರು ಸೇರಿದಂತೆ 11 ರಾಜ್ಯ ದರ್ಜೆಯ ಮಂತ್ರಿಗಳು, ನಾಲ್ಕು ಬಿಜೆಪಿ ರಾಜ್ಯ ಸರಕಾರಗಳ ಮುಖ್ಯಮಂತ್ರಿಗಳು ಹಲವು ದಿನಗಳ ಕಾಲ ಕರ್ನಾಟಕದಲ್ಲಿ ಠಿಕಾಣಿ ಹೂಡಿದ್ದರು.

ಕನಿಷ್ಟ ಸರಕಾರ ಅಂದರೆ ಇದೇ ಇರಬೇಕು – ಆದರೆ ಗರಿಷ್ಟ ಆಡಳಿತ? ಸುಪ್ರಿಂ ಕೋರ್ಟ್‌ನಿಂದ ಇದು ನ್ಯಾಯಾಂಗ ನಿಂದನೆಯಲ್ಲದೆ ಬೇರೇನೂ ಅಲ್ಲ ಎಂಬ ಟಿಪ್ಪಣಿ?

ಚುನಾವಣಾ ಫಲಿತಾಂಶ ಬಂದ ಮೇಲೂ ಮತ್ತೆ ಮೂರು ಮಂತ್ರಿಗಳು ಬೆಂಗಳೂರಿಗೆ ಧಾವಿಸಬೇಕಾಗಿದೆ. ಬಹುಶಃ 'ತಾಂತ್ರಿಕ ಕಾರಣ'ಗಳಿಂದ ಪ್ರಧಾನಿಗಳು, ಮತ್ತು ಪಕ್ಷದ ಅಧ್ಯಕ್ಷರು ಈ ಬಾರಿ ಬರಲಾಗಲಿಲ್ಲ!

ಫೇಕ್ ನ್ಯೂಸ್‌ಗಳ ಬೆನ್ನತ್ತಿರುವ ಆಲ್ಟ್‌ನ್ಯೂಸ್ ಇದಲ್ಲದೆ ಚುನಾವಣಾ ಪ್ರಚಾರದ ಅವಧಿಯಲ್ಲಿ 13 ಫೇಕ್ ನ್ಯೂಸ್‌ಗಳನ್ನು ಪತ್ತೆ ಹಚ್ಚಿತು. ಅದರಲ್ಲಿ 11 ಅಚ್ಛೇದಿನ್ ಬೆಂಬಲಿಗರದ್ದು!



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ನ್ಯೂಸ್

ರಾಜ್ಯಗಳ ವಿತ್ತೀಯ ಹಕ್ಕುಗಳನ್ನು ರಕ್ಷಿಸುವ ಸಂದರ್ಭದಲ್ಲಿ ಪಕ್ಷ ರಾಜಕೀಯದ ಒಲವು-ನಿಲುವು ಅಡ್ಡ ಬರಬಾರದು



ಎಲ್ಲ ರಾಜ್ಯಗಳ ಹಣಕಾಸು ಮಂತ್ರಿಗಳಿಗೆ ಕೇರಳದ ಹಣಕಾಸು ಮಂತ್ರಿಗಳ ಒಂದು ಬಹಿರಂಗ ಪತ್ರ



15ನೇ ಹಣಕಾಸು ಆಯೋಗಕ್ಕೆ ಕೊಟ್ಟಿರುವ ಪರಾಮರ್ಶೆಯ ವಿಷಯ ವ್ಯಾಪ್ತಿಯಲ್ಲಿ ಜನಸಂಖ್ಯೆಯ ಪರಿಗಣನೆಗಾಗಿ ಮೂಲ ವರ್ಷವನ್ನು 1971 ರಿಂದ 2011ಕ್ಕೆ ಬದಲಾಯಿಸಿರುವ ಅಂಶಕ್ಕೆ ಮಾತ್ರ ಕೇರಳ, ಕರ್ನಾಟಕ ಮತ್ತಿತರ ದಕ್ಷಿಣದ ರಾಜ್ಯಗಳ ಕಳವಳ ಸಂಬಂಧಿಸಿದೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ. ದಕ್ಷಿಣದ, ಅದರಲ್ಲೂ ಎಲ್‌ಡಿಎಫ್ ಆಳ್ವಿಕೆಯ ಕೇರಳದ ಆಕ್ಷೇಪ ಇನ್ನೂ ಮೂಲಭೂತವಾದದ್ದು, ಅದು ವಿತ್ತೀಯ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ವಿತ್ತೀಯ ಸ್ವಾಯತ್ತತೆಗೆ ಸಂಬಂಧಪಟ್ಟದ್ದು ಎಂಬುದರತ್ತ ದೇಶದ ಇತರ ರಾಜ್ಯಗಳ ಹಣಕಾಸು ಮಂತ್ರಿಗಳ ಗಮನ ಸೆಳೆಯಲು ಕೇರಳ ಹಣಕಾಸು ಮಂತ್ರಿ ಡಾ.ಟಿ.ಎಂ.ಥಾಮಸ್ ಐಸ್ಸಾಕ್ ಒಂದು ಬಹಿರಂಗ ಪತ್ರವನ್ನು 'ದಿ ಹಿಂದೂ' ಪತ್ರಿಕೆಯಲ್ಲಿ ಬರೆದಿದ್ದಾರೆ. ಇದು ರಾಜ್ಯಗಳ ಹಣಕಾಸು ಮಂತ್ರಿಗಳು ಮಾತ್ರವಲ್ಲ, ಭಾರತದ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸ ಬಯಸುವ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಗಮನಿಸಬೇಕಾದ ಸಂಗತಿ. 'ಜನಶಕ್ತಿ' ಓದುಗರಿಗಾಗಿ ಇದರ ಭಾವಾನುವಾದ: ಕೆ.ಎಂ.ನಾಗರಾಜ್

ರಾಜ್ಯಗಳ ಪಾಲಿಗೆ ಕೇಂದ್ರದಿಂದ ಬರಬೇಕಾದ ಹಣವನ್ನು ನಿಗದಿಪಡಿಸುವ ಹಣಕಾಸು ಆಯೋಗದ ನಿರ್ಣಯಗಳು ರಾಜ್ಯಗಳಿಗೆ ಜೀವ ಸೆಲೆಯಂತಿವೆ ಎಂಬುದನ್ನು ನೀವು ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಹದಿನೈದನೇ ಹಣಕಾಸು ಆಯೋಗವು ಪರಾಮರ್ಶೆಗೆ ಒಳಪಡಿಸುವ ವಿಷಯದ ವ್ಯಾಪ್ತಿಯನ್ನು ಕೇಂದ್ರ ಸರ್ಕಾರವು ಈಗಾಗಲೇ ನಿರ್ಧರಿಸಿದೆ. ಈ ಒಂದು ತೀರ್ಮಾನದಿಂದಾಗಿ ಉಂಟಾಗುವ ಗಂಭೀರ ಪರಿಣಾಮಗಳ ಬಗ್ಗೆ ನಮಗೆ ಆತಂಕವಾಗಿದೆ. ಹಾಗಾಗಿ, ಆಯೋಗದ ಪರಾಮರ್ಶೆಗೆ ಒಳಪಡಿಸಿರುವ ವಿಷಯದ ವ್ಯಾಪ್ತಿಯನ್ನು ಕುರಿತು, ನಾವು ಕೆಲವರು ಪ್ರಾರಂಭದಲ್ಲಿ ಕೇರಳದ ತಿರುವನಂತಪುರದಲ್ಲಿ ಮತ್ತು ಆನಂತರ ಆಂಧ್ರ ಪ್ರದೇಶದ ಅಮರಾವತಿಯಲ್ಲಿ ಒಟ್ಟಿಗೆ ಸೇರಿದ್ದೆವು. ಲಭ್ಯವಿರುವ ಸಂಪನ್ಮೂಲಗಳನ್ನು ನಮ್ಮ ನಮ್ಮೊಳಗೆ ಹೇಗೆ ಹಂಚಿಕೆಕೊಳ್ಳಬೇಕು ಎಂಬುದನ್ನು ಅಲ್ಲಿ ನಾವು ಚರ್ಚಿಸಿದ ಸಂಗತಿಯು ಮಾಧ್ಯಮಗಳಲ್ಲಿ ಪ್ರಮುಖ ಸುದ್ದಿಯಾಗಿತ್ತು. ಆದರೆ, ಈ ಸಮಸ್ಯೆ ಮತ್ತು ಅದರ ಸುತ್ತ ಸುತ್ತಿಕೊಂಡಿರುವ ವಿವಾದಗಳ ಸ್ವರೂಪ ಗಂಭೀರವಾಗಿದೆ.


ಕೇಂದ್ರ ಸರ್ಕಾರವು ಆಯೋಗದ ಪರಾಮರ್ಶೆಗೆ ಸೂಚಿಸಿರುವ ಈ ವಿಷಯ ವ್ಯಾಪ್ತಿಯು(terms of reference), ನಮ್ಮ ಸಂವಿಧಾನದಲ್ಲಿ ಪ್ರತಿಸ್ಥಾಪಿಸಿರುವ ಫೆಡರಲ್ ಮೌಲ್ಯಗಳಿಗೆ ಮತ್ತು ರಾಜ್ಯ ಸರ್ಕಾರಗಳಿಗೆ ಲಭ್ಯವಿದ್ದ ಅಲ್ಪ ಸ್ವಲ್ಪ ವಿತ್ತೀಯ ಸ್ವಾಯತ್ತತೆಗೆ ಧಕ್ಕೆ ಒಡ್ಡಿದೆ. ಜನಸಂಖ್ಯೆಯ ಪರಿಗಣನೆಗಾಗಿ ಮೂಲ ವರ್ಷವನ್ನು 1971 ರಿಂದ 2011ಕ್ಕೆ ಬದಲಾಯಿಸಿರುವ ಅಂಶಕ್ಕೆ ಮಾತ್ರ ನಮ್ಮ ಕಳವಳ ಸಂಬಂಧಿಸಿದೆ ಎಂದು ನೀವು ತಪ್ಪಾಗಿ ತಿಳಿಯಬಾರದು ಎಂಬ ಉದ್ದೇಶದಿಂದ ನಾನು ಈ ಬಹಿರಂಗ ಪತ್ರವನ್ನು ಬರೆಯುತ್ತಿದ್ದೇನೆ. ಈ ಅಂಶವು, ಸಾಧಾರಣವಾಗಿ ದಕ್ಷಿಣ ರಾಜ್ಯಗಳನ್ನಷ್ಟೇ ಅಲ್ಲದೆ ಜನ ಸಂಖ್ಯೆ ಇಳಿಕೆಯಾಗಿರುವ ಎಲ್ಲ ರಾಜ್ಯಗಳನ್ನೂ ತಟ್ಟುತ್ತದೆ. ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ರಾಜ್ಯಗಳಿಗೆ ಅನ್ಯಾಯವಾಗಬಾರದು ಎಂಬ ನ್ಯಾಯ ಸಮ್ಮತವಾದ ವಾದವನ್ನು ನಾವು ಖಂಡಿತವಾಗಿ ಮಂಡಿಸುತ್ತೇವೆ. ನಾವು ಅನೂಚಾನವಾಗಿ ಅನುಸರಿಸಿದ ಕ್ರಮದ ಪ್ರಕಾರವಾಗಿ, ಸಮತಲ ಹಂಚಿಕೆಯ(horizontal distribution) ಸಲುವಾಗಿ ಯಾವ ಅತಿ ಉತ್ತಮ ಮಾನದಂಡಗಳನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ, ಈ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನು ಗೌರವಿಸಲು ಸಮ್ಮತಿಸೋಣ, ಹಣಕಾಸು ಆಯೋಗಕ್ಕೆ ನಾವು ಸಲ್ಲಿಸಲಿರುವ ಮನವಿ ಪತ್ರದಲ್ಲಿ ತಿಳಿಸಲಾಗುವುದು. ಕೇಂದ್ರ ಸರ್ಕಾರ ಮತ್ತು ರಾಜ್ಯಗಳ ನಡುವೆ ಸಮಗ್ರವಾಗಿ ಮೇಲಿಂದ ತಳದವರೆಗೂ ಸಂಪನ್ಮೂಲಗಳ ಲಂಬತಲ ಹಂಚಿಕೆಯ (vertical distribution) ಬಗ್ಗೆ ಭಾರತ ಒಕ್ಕೂಟದಲ್ಲಿರುವ ನಮ್ಮೆಲ್ಲರಿಗೂ ಸಮಾನ ಹಕ್ಕು-ಬಾಧ್ಯತೆಗಳಿವೆ.

ನಮ್ಮಲ್ಲಿ ಅನೇಕರು ರಾಜಕೀಯ ಕಾರಣಗಳಿಂದಾಗಿ, ಒಂದು ಕಡೆ ರಾಜ್ಯಗಳ ಹಕ್ಕುಗಳು ಮತ್ತೊಂದು ಕಡೆ ದೇಶದ ವಿತ್ತೀಯ ಒಕ್ಕೂಟ ವ್ಯವಸ್ಥೆ(fiscal federalism) ಇವುಗಳನ್ನು ರಕ್ಷಿಸುವ ರಾಷ್ಟ್ರೀಯ ಕರ್ತವ್ಯ ನಿರ್ವಹಣೆಯಲ್ಲಿ ವಿಮುಖರಾಗಿರುವುದು ನನಗೆ ವಿಷಾದನೀಯವಾಗಿ ಕಾಣುತ್ತಿದೆ. ಹಣಕಾಸು ಆಯೋಗದ ಪರಾಮರ್ಶೆಗೆ ಸೂಚಿಸಿರುವ ಕೆಲವು ವಿಷಯಗಳು ರಾಜ್ಯಗಳ ಹಣಕಾಸು ಸಂಪನ್ಮೂಲಗಳು ಮತ್ತು ರಾಜ್ಯಗಳ ವಿತ್ತೀಯ ಸ್ವಾಯತ್ತತೆ ಇವುಗಳ ಮೇಲೆ ಹೇಗೆ ಪ್ರತಿಕೂಲ ಪರಿಣಾಮ ಬೀರುತ್ತವೆ ಎಂಬುದನ್ನು ನಿಮ್ಮ ಮುಂದೆ ಮತ್ತು ಜನತೆಯ ಮುಂದೆ ಪ್ರಸ್ತಾಪಿಸಲು ನಾನು ಬಯಸುತ್ತೇನೆ. ನನ್ನ ಜೊತೆಗಾರ ಹಣಕಾಸು ಮಂತ್ರಿಗಳಲ್ಲಿ ಯಾರೊಬ್ಬರಿಗಾದರೂ ಭಿನ್ನಾಭಿಪ್ರಾಯಗಳಿದ್ದರೆ, ಈ ಸಂಬಂಧವಾಗಿ ಒಂದು ಸಾರ್ವಜನಿಕ ಚರ್ಚೆಯಲ್ಲಿ ನನ್ನೊಂದಿಗೆ ದಯವಾಡಿ ಪಾಲ್ಗೊಳ್ಳುವಂತೆ ವಿನಂತಿಸುತ್ತೇನೆ. ನಿಮ್ಮಲ್ಲಿ ಕೆಲವರಾದರೂ ಈ ಚರ್ಚೆಯಲ್ಲಿ ಭಾಗವಹಿಸುತ್ತೀರೆಂದು ಭಾವಿಸುತ್ತೇನೆ.

ಮೊದಲನೆಯದಾಗಿ, ಹದಿನಾಲ್ಕನೆಯ ಹಣಕಾಸು ಆಯೋಗವು ತೆರಿಗೆಗಳ 42% ಪಾಲನ್ನು ರಾಜ್ಯಗಳಿಗೆ ಕೊಟ್ಟಿದ್ದ ಮೊತ್ತದಲ್ಲಿ ಕಡಿತ ಮಾಡುವುದನ್ನು ಸ್ವಾಗತಿಸುವ ಹಣಕಾಸು ಮಂತ್ರಿ ಯಾರಾದರೂ ಇದ್ದಾರೆಂಯೇ? ಹಣಕಾಸು ಆಯೋಗವು ಪರಾಮರ್ಶಿಸುವುದು ಖಚಿತವಾಗಿಯೂ ಇದೇ ವಿಷಯವನ್ನು. ಆಯೋಗಕ್ಕೆ ಸೂಚಿಸಿರುವ ಐಟಂ 6(4) ರ ಅರ್ಥ ಇದಲ್ಲದೆ ಬೇರೆ ಏನು? ಹಣಕಾಸು ಆಯೋಗದ ಚರಿತ್ರೆಯಲ್ಲೇ ತನ್ನ ಪೂರ್ವಾಧಿಕಾರಿಯು (ಈ ಸಂದರ್ಭದಲ್ಲಿ, ಹದಿನಾಲ್ಕನೆಯ ಹಣಕಾಸು ಆಯೋಗ) ಕೊಟ್ಟ ತೀರ್ಪನ್ನು ಉತ್ತರಾಧಿಕಾರಿಯು ವಿಮರ್ಶೆಗೊಳಪಡಿಸಿದ ಕೆಲಸ ನಡೆದಿಲ್ಲ. ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಕೆಲವೊಂದು ಅಂಶಗಳಿವೆ: ಹದಿಮೂರನೆಯ ಆಯೋಗದ 32% ಪಾಲು ಮತ್ತು ಹದಿನಾಲ್ಕನೆಯ ಆಯೋಗದ 42% ಪಾಲು, ಇವೆರಡರ ನಡುವೆ ಹೋಲಿಕೆ ಮಾಡುವಂತಿಲ್ಲ. ಏಕೆಂದರೆ, ಮೊದಲನೆಯದು ಯೋಜನೇತರ ರೆವಿನ್ಯೂ ವೆಚ್ಚಗಳಿಗೂ ಮತ್ತು ಎರಡನೆಯದು ಒಟ್ಟು ರೆವಿನ್ಯೂ ವೆಚ್ಚಗಳಿಗೂ ಸಂಬಂಧಿಸುತ್ತವೆ. ಯೋಜನಾ ಅನುದಾನಗಳನ್ನು ಈಗ ಕೊನೆಗೊಳಿಸಲಾಗಿದೆ. ಅಷ್ಟೇ ಅಲ್ಲದೆ, ಭಾರತ ಸರ್ಕಾರವು, ಕೇಂದ್ರ ಪ್ರಾಯೋಜಿತ ಸ್ಕೀಂಗಳಿಗೆ ರಾಜ್ಯಗಳು ಭರಿಸುವ ಪಾಲನ್ನು ಹೆಚ್ಚಿಸಿದೆ. ಹಾಗಾಗಿ, ಕೇಂದ್ರದಿಂದ ಬರುತ್ತಿದ್ದ ಒಟ್ಟು ಪಾಲು, ಜಿಡಿಪಿಯ ಅನುಪಾತದಲ್ಲಿ ನೋಡಿದಾಗ, ಹೆಚ್ಚೂ ಕಡಿಮೆ ಅಷ್ಟೇ ಆಗುತ್ತದೆ. ಜಿಎಸ್‌ಟಿ ಜಾರಿಯಾದನಂತರ, 50:50 ಅನುಪಾತದಲ್ಲಿ ಕೆಲವು ತೆರಿಗೆಗಳು ಹಂಚಿಕೆಯಾಗುವುದರಿಂದ ರಾಜ್ಯಗಳ ಪರಿಸ್ಥಿತಿಯು ಹದಗೆಡುತ್ತಿದೆ. ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು, ಜಿಎಸ್‌ಟಿ ಕುರಿತು ಆಯೋಗಕ್ಕೆ ಉಲ್ಲೇಖಿಸುವ ಸಂದರ್ಭದಲ್ಲಿ, ಜಿಎಸ್‌ಟಿ ಜಾರಿ ನಂತರ ಸಂಪನ್ಮೂಲಗಳ ಕ್ರೋಢೀಕರಣವು ಎಷ್ಟು ತ್ರಾಸದಾಯಕವಾಗಿದೆ ಎಂದು ಕೇಂದ್ರ ಸರ್ಕಾರವು ವಿವರಿಸಿರುವುದನ್ನು ಓದಿದರೆ ಸಾಕು. ಜಿಎಸ್‌ಟಿಯ ಹೊರೆಯು ಕೇಂದ್ರ ಮತ್ತು ರಾಜ್ಯಗಳ ಮೇಲೆ ಅಸಮವಾಗಿದೆ ಎನ್ನುವ ವಾದವು ಒಂದು ಜೋಕ್‌ನಂತಿದೆ.

ಎರಡನೆಯದಾಗಿ, ಭಾರತದ ಪ್ರತಿಯೊಬ್ಬ ನಾಗರಿಕನಿಗೂ ತೆರಿಗೆಯ ಹೊಣೆ ಮತ್ತು ಸಾರ್ವಜನಿಕ ಸೇವೆಗಳ ಲಭ್ಯತೆ ಸಮಾನವಾಗಿರಬೇಕು ಎಂಬ ಅಂಶವು ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಯಲ್ಲಿ ಅಡಕವಾಗಿದೆ. ಈ ಕಾರಣಕ್ಕಾಗಿ, ರಾಜ್ಯಗಳ ಆದಾಯದಲ್ಲಿ ಬೀಳುವ ಕೊರತೆಯನ್ನು ಅನುದಾನವಾಗಿ ಒದಗಿಸುವಂತೆ ಸಂವಿಧಾನದಲ್ಲಿ ಹೇಳಲಾಗಿದೆ. ಸಂವಿಧಾನದಲ್ಲಿರುವ ಈ ಅಂಶವನ್ನು ಯಾವ ಹಣಕಾಸು ಆಯೋಗವೂ ವಿಮರ್ಶಿಸುವಂತಿಲ್ಲ. ಹಾಗಿದ್ದರೂ, ಆಯೋಗಕ್ಕೆ ಸೂಚಿಸಿರುವ ಐಟಂ 5 ಹೇಳುತ್ತದೆ, "ರಾಜ್ಯಗಳ ಆದಾಯದ ಕೊರತೆಯನ್ನು ಅನುದಾನವಾಗಿ ಒದಗಿಸಬಹುದೇ? ಎಂಬ ಅಂಶವನ್ನು ಆಯೋಗವು ಪರಾಮರ್ಶಿಸಬಹುದು". ಇದು, ರಾಜ್ಯಗಳಿಗೆ ದತ್ತವಾಗಿರುವ ಸಂವಿಧಾನಾತ್ಮಕ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂಬುದನ್ನು ನೀವು ಒಪ್ಪುವುದಿಲ್ಲವೇ?

> ಮೊದಲನೆಯದಾಗಿ, ಹದಿನಾಲ್ಕನೆಯ ಹಣಕಾಸು ಆಯೋಗವು ತೆರಿಗೆಗಳ 42% ಪಾಲನ್ನು ರಾಜ್ಯಗಳಿಗೆ ಕೊಟ್ಟಿದ್ದ ಮೊತ್ತದಲ್ಲಿ ಕಡಿತ ಮಾಡುವುದನ್ನು ಸ್ವಾಗತಿಸುವ ಹಣಕಾಸು ಮಂತ್ರಿ ಯಾರಾದರೂ ಇದ್ದಾರೆಯೇ?
>
> ಎರಡನೆಯದಾಗಿ, "ರಾಜ್ಯಗಳ ಆದಾಯದ ಕೊರತೆಯನ್ನು ಅನುದಾನವಾಗಿ ಒದಗಿಸಬಹುದೇ? ಎಂಬ ಅಂಶವನ್ನು ಆಯೋಗವು ಪರಾಮರ್ಶಿಸಬಹುದು" ಎಂದಿರುವುದು ರಾಜ್ಯಗಳಿಗೆ ದತ್ತವಾಗಿರುವ ಸಂವಿಧಾನಾತ್ಮಕ ಹಕ್ಕುಗಳ ಉಲ್ಲಂಘನೆಯಲ್ಲವೇ?
>
> ಮೂರನೆಯದಾಗಿ, ಹದಿನಾಲ್ಕನೆ ಆಯೋಗದ ಶಿಫಾರಸಿನ ಅನ್ವಯ ಸಾಲ ಎತ್ತುವ' ನಮ್ಮ ಹಕ್ಕುಗಳ ಮೇಲೆ ಇದುವರೆಗೆ ಇಲ್ಲದ ಮಿತಿ/ಶರತ್ತುಗಳನ್ನು ಹಾಕುವುದು ರಾಜ್ಯಗಳ ವಿತ್ತೀಯ ಸ್ವಾತಂತ್ರ್ಯದ ಮೇಲಿನ ಈ ಅನಿರೀಕ್ಷಿತ ದಾಳಿಯಲ್ಲವೇ?
>
> ನಾಲ್ಕನೆಯದಾಗಿ, ಆಯೋಗ ಕೊಟ್ಟ ಅನುದಾನದ ಹಂಚಿಕೆಗೆ ಸಂಬಂಧಪಟ್ಟಂತೆ ಸರಕಾರದ ವಿವೇಚನಾ ಅಧಿಕಾರವನ್ನು ಕೊನೆಗೊಳಿಸುವ ಹದಿನಾಲ್ಕನೆಯ ಆಯೋಗದ ಶ್ರಮವನ್ನು ವ್ಯರ್ಥಗೊಳಿಸುವ ಪ್ರಯತ್ನವಲ್ಲವೇ?
>
> ದೇಶದ ಸಂವಿಧಾನವನ್ನು ಮತ್ತು ರಾಜ್ಯಗಳ ಹಕ್ಕುಗಳನ್ನು ಎತ್ತಿಹಿಡಿಯಲು ಹಾಗೂ ದೇಶದ ವಿತ್ತೀಯ ಒಕ್ಕೂಟ ವ್ಯವಸ್ಥೆಯ ಮೂಲ ಸೂತ್ರಗಳನ್ನು ಒಳಗೊಳಗೇ ಕೊರೆದು ಹಾಕುವ ಹುನ್ನಾರಕ್ಕೆ ತಡೆಯೊಡ್ಡಲು ಎಲ್ಲರೂ ಕೈ ಜೋಡಿಸಬೇಕೆಂಬುದಾಗಿ ನಾನು ಮನವಿ ಮಾಡುತ್ತೇನೆ.



ಮೂರನೆಯದಾಗಿ, ಒಂದು ವೇಳೆ, ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ಪರಿಶೀಲನಾ ಸಮಿತಿಯ ಶಿಫಾರಸುಗಳು ಅನ್ವಯವಾದರೆ, ರಾಜ್ಯಗಳು ಸಾಲ ಎತ್ತಲು ಈಗ ಜಾರಿಯಲ್ಲಿರುವ ರಾಜ್ಯವೊಂದರ ಒಟ್ಟು ಆಂತರಿಕ ಉತ್ಪನ್ನದ ಶೇ.3ರ ಮಿತಿಯನ್ನು ಶೇ.1.7 ಗೆ ಇಳಿಸುವ ಅಂಶವನ್ನು ಪರಿಶೀಲಿಸುವಂತೆ ಹಣಕಾಸು ಆಯೋಗವನ್ನು ಕೋರಲಾಗಿದೆ.

ಹದಿನಾಲ್ಕನೆ ಆಯೋಗದ ಶಿಫಾರಸಿನ ಅನ್ವಯ ಸಾಲ ಎತ್ತುವ ನಮ್ಮ ಹಕ್ಕುಗಳನ್ನು ಬಳಸಿಕೊಳ್ಳಲು ಇದೀಗ ತಾನೇ ಆರಂಭಿಸಿದ್ದೇವೆ. ಈ ಪ್ರಕ್ರಿಯೆಯನ್ನು ನಿರರ್ಥಕಗೊಳಿಸಿದರೆ ಅದು ನಮ್ಮ ಸ್ಥಿರಾಸ್ತಿಗಳನ್ನು ಹೆಚ್ಚಿಸಿಕೊಳ್ಳಲು ಮಾಡುವ ವೆಚ್ಚಗಳನ್ನು ಮೊಟಕುಗೊಳಿಸುವ ಪರಿಣಾಮವು ಪ್ರತಿಕೂಲವಾಗುತ್ತದೆ. ಅಷ್ಟೇ ಅಲ್ಲದೆ, ಸಾಲ ಎತ್ತುವ ರಾಜ್ಯಗಳ ಮೇಲೆ ಎಂತಹ ಶರತ್ತುಗಳನ್ನು ವಿಧಿಸಬಹುದು ಎಂಬುದನ್ನು ಒಳಹೊಕ್ಕು ನೋಡುವಂತೆ ಆಯೋಗವನ್ನು ಕೋರಿರುವುದು ರಾಜ್ಯಗಳಿಗೆ ಕಿರಿಕಿರಿ ಉಂಟುಮಾಡುತ್ತದೆ. ಇಲ್ಲಿಯವರೆಗೆ, ಒಟ್ಟು ಆಂತರಿಕ ಉತ್ಪನ್ನದ ಶೇ.3ರ ಮಿತಿಯಲ್ಲಿ ತೆಗೆಯುವ ಸಾಲಗಳ ಮೇಲೆ ಯಾವ ಶರತ್ತುಗಳೂ ಇರಲಿಲ್ಲ. ಹಾಗಾಗಿ, ರಾಜ್ಯಗಳ ವಿತ್ತೀಯ ಸ್ವಾತಂತ್ರ್ಯದ ಮೇಲಿನ ಈ ಅನಿರೀಕ್ಷಿತ ದಾಳಿಯನ್ನು ಹಿಮ್ಮೆಟ್ಟಿಸಬೇಕಾಗುತ್ತದೆ.

ನಾಲ್ಕನೆಯದಾಗಿ, ಆಯೋಗ ಕೊಟ್ಟ ಅನುದಾನದ ಹಂಚಿಕೆಗೆ ಸಂಬಂಧಪಟ್ಟಂತೆ ಸರಕಾರದ ವಿವೇಚನಾ ಅಧಿಕಾರವನ್ನು ಕೊನೆಗೊಳಿಸಲು ಹದಿನಾಲ್ಕನೆಯ ಆಯೋಗವು ತನ್ನೆಲ್ಲಾ ಶ್ರಮವನ್ನು ವ್ಯಯಿಸಿತು. ಆದ್ದರಿಂದ, ಅನುದಾನ ಹಂಚಿಕೆಯ ವಿಷಯವನ್ನು 15ನೇ ಆಯೋಗದ ಪರಿಶೀಲನೆಗೆ ಒಳಪಡಿಸಿರುವ ಉದ್ದೇಶವು, ಅನುದಾನಗಳ ಮೇಲೆ ಹತ್ತಾರು ಶರತ್ತುಗಳನ್ನು ಹಣಕಾಸು ಆಯೋಗದ ಮಾರ್ಗವಾಗಿ ರಾಜ್ಯಗಳ ಮೇಲೆ ಹೇರಲು ಬಯಸುತ್ತಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಆಯೋಗಕ್ಕೆ ಸೂಚಿಸಿರುವ ಐಟಂ 7ರಲ್ಲಿ, 9 ಬೇರೆ ಬೇರೆ ಸ್ಕೀಂಗಳಿಗೆ ಪ್ರೋತ್ಸಾಹ ಧನ ಕೊಡುವ ಪ್ರಸ್ತಾಪವಿದೆ. ಅವುಗಳಲ್ಲಿ ಅನೇಕ ಐಟಂಗಳಿಗೆ ನನ್ನ ವಿರೋಧವಿಲ್ಲ. ರಾಜ್ಯಗಳಿಗೆ ಆಯ್ಕೆಯ ಸ್ವಾತಂತ್ರ್ಯ ಇರಬೇಕೆಂಬುದೇ ನನ್ನ ಅಪೇಕ್ಷೆ. ಚುನಾಯಿತ ಸರ್ಕಾರಗಳ ಅಧಿಕಾರ ವ್ಯಾಪ್ತಿಗೆ ಸಂಪೂರ್ಣವಾಗಿ ಒಳಪಡುವ ಜನಪ್ರಿಯ ಯೋಜನೆಗಳ ಬಗ್ಗೆ ವಿಷಯ ವ್ಯಾಪ್ತಿಯಲ್ಲಿ ಉಲ್ಲೇಖಿಸಿರುವುದನ್ನೂ ಸಹ ಒಪ್ಪಲಾಗದು. ಇದು ಪ್ರಜಾಪ್ರಭುತ್ವ ವಿರೋಧಿ ಕ್ರಮವಲ್ಲವೇ?

ದೇಶದ ಸಂವಿಧಾನವನ್ನು ಮತ್ತು ರಾಜ್ಯಗಳ ಹಕ್ಕುಗಳನ್ನು ಎತ್ತಿಹಿಡಿಯಲು ಹಾಗೂ ದೇಶದ ವಿತ್ತೀಯ ಒಕ್ಕೂಟ ವ್ಯವಸ್ಥೆಯ(fiscal federalism) ಮೂಲ ಸೂತ್ರಗಳನ್ನು ಒಳಗೊಳಗೇ ಕೊರೆದು ಹಾಕುವ ಹುನ್ನಾರಕ್ಕೆ ತಡೆಯೊಡ್ಡಲು ಎಲ್ಲರೂ ಕೈ ಜೋಡಿಸಬೇಕೆಂಬುದಾಗಿ ನಾನು ಮನವಿ ಮಾಡುತ್ತೇನೆ.

ಲಭ್ಯವಿರುವ ಸಂಪನ್ಮೂಲಗಳನ್ನು ನಮ್ಮ ನಮ್ಮೊಳಗೆ ಹಂಚಿಕೆಕೊಳ್ಳುವ ಸಲುವಾಗಿ ಯಾವ ಅತಿ ಉತ್ತಮ ಮಾನದಂಡಗಳನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಪರಸ್ಪರ ಗೌರವಿಸಲು ಸಮ್ಮತಿಸೋಣ ಮತ್ತು ಅದೇ ಪ್ರಕಾರವಾಗಿ ನಮ್ಮ ಪ್ರತ್ಯೇಕ ಮನವಿಗಳನ್ನು ಹದಿನೈದನೆಯ ಹಣಕಾಸು ಆಯೋಗಕ್ಕೆ ಸಲ್ಲಿಸೋಣ. ಈ ಅಂಶಗಳನ್ನು ಒಪ್ಪುವ ಎಲ್ಲರೂ ದೇಶದ ಸಂವಿಧಾನವನ್ನು ಮತ್ತು ಸಂವಿಧಾನ ದತ್ತವಾದ ರಾಜ್ಯಗಳ ಹಕ್ಕುಗಳನ್ನು ರಕ್ಷಿಸಲು ನಮ್ಮೊಂದಿಗೆ ಕೈ ಜೋಡಿಸಬೇಕೆಂದು ಮನವಿ ಮಾಡುತ್ತೇನೆ. ರಾಜ್ಯಗಳ ಹಕ್ಕುಗಳನ್ನು ರಕ್ಷಿಸುವ ಸಂದರ್ಭದಲ್ಲಿ ಪಕ್ಷ ರಾಜಕೀಯದ ಒಲವು-ನಿಲುವು ಅಡ್ಡ ಬಾರದಿರಲಿ.

ಪಶ್ಚಿಮ ಬಂಗಾಲ ಪಂಚಾಯತು ಚುನಾವಣೆಗಳಲ್ಲಿ ವ್ಯಾಪಕ ಹಿಂಸಾಚಾರ, ಮೋಸ







ಪಶ್ಚಿಮ ಬಂಗಾಲದಲ್ಲಿ ಮೇ 14ರಂದು ಪಂಚಾಯತು ಚುನಾವಣೆಗಳ ಮತದಾನದ ದಿನದಂದು ಬೃಹತ್‌ಪ್ರಮಾಣದಲ್ಲಿ ಹಿಂಸಾಚಾರ, ಮತದಾನಕ್ಕೆ ಹೋಗುವ ಜನಗಳ ಮೇಲೆ ಮಾರಣಾಂತಿಕ ಹಲ್ಲೆಗಳು ಕಂಡು ಬಂದಿವೆ. ಈ ಚುನಾವಣಾ ಪ್ರಕ್ರಿಯೆ ಹಿಂಸಾಚಾರದಿಂದಲೇ ಅರಂಭವಾಗಿದ್ದರಿಂದ ಇದು ಅನಿರೀಕ್ಷಿತವೇನೂ ಆಗಿರಲಿಲ್ಲ.



ಸುವಾರಾಗಿ ಎಲ್ಲ ಜಿಲ್ಲೆಗಳಲ್ಲಿ ಟಿಎಂಸಿ ಗ್ಯಾಂಗ್‌ಗಳು ಮತ ಹಾಕಲು ಬಂದ ಜನಗಳನ್ನು ಹೊಡೆ ದೋಡಿಸಿದರು, ಹಳ್ಳಿಗಳನ್ನು ಸುತ್ತುವರೆದು ಜನಗಳು ಮನಯೊಳಗಿಂದ ಕದಲದಂತೆ ಮಾಡಿದರು, ಪ್ರತಿಪಕ್ಷಗಳ ಪೋಲಿಂಗ್ ಏಜೆಂಟರನ್ನು ಮತಗಟ್ಟೆಗಳಿಂದ ಹೊರಗಟ್ಟಿದರು, ಮತಪತ್ರಗಳನ್ನು ಹರಿದು ಹಾಕಿದರು, ಹಲವೆಡೆಗಳಲ್ಲಿ ಮತಪಟ್ಟಿಗೆಗಳನ್ನೇ ಕಸಿದುಕೊಂಡು ಒಯ್ದರು, ಕೂಚ್‌ಬೆಹಾರ್‌ನಲ್ಲಿ ರಾಜ್ಯದ ಮಂತ್ರಿ ರಬೀಂದ್ರನಾಥ್ ಘೋಷ್ ನೇತೃತ್ವದಲ್ಲೇ ಮತಪೆಟ್ಟಿಗೆ ಅಪಹರಣಗಳು ನಡೆದಿವೆ. ಕೆಲವೆಡೆಗಳಲ್ಲಿ ಮತಗಟ್ಟೆ ಅಧಿಕಾರಗಳ ಮೇಲೂ ಹಲ್ಲೆಗಳು ನಡೆದವು.ಮತದಾರರ ಮೇಲೆ ದಾಳಿ ಮಾಡುವಲ್ಲಿ ಪೋಲಿಸರೂ ಟಿಎಂಸಿ ಗಲಭೆಕೋರರೊಂದಿಗೆ ಕೈಜೋಡಿಸಿದರು.

ದಕ್ಷಿಣ 24 ಪರಗಣ ಜಿಲ್ಲೆಯ ನಂಖಾನ ಬ್ಲಾಕ್‌ನಲ್ಲಿ ಸಿಪಿಐ(ಎಂ) ಕಾರ್ಯಕರ್ತರಾದ ದೇಬು ದಾಸ್ ಮನೆಯ ಮೇಲೆ ಮೇ13–14ರ ಮಧ್ಯರಾತ್ರಿಯ ವೇಳೆ ದಾಳಿ ನಡೆಸಿ ದೇಬುದಾಸ್ ಮತ್ತು ಆತನ ಪತ್ನಿ ಉಷಾ ದಾಸ್‌ರನ್ನು ಜೀವಂತ ಸುಟ್ಟು ಹಾಕಲಾಯಿತು. ಇದು ಹಿಂಸಾಕಾಂಡದ ಆರಂಭವಾಗಿತ್ತು.

ಜಿಲ್ಲಾ ಕೇಂದ್ರಗಳಲ್ಲೂ, ಕೊಲ್ಕತಾದಲ್ಲೂ ರಾಜ್ಯ ಚುನಾವಣಾ ಆಯೋಗದ ಕಚೇರಿಗಳಲ್ಲಿ ನೂರಾರು ದೂರುಗಳು ದಾಖಲಾಗಿವೆ. ಆದರೆ ಆಯೋಗದ ಅಧಿಕಾರಿಗಳು ಸುಮಾರಾಗಿ ಎಲ್ಲ ಸಂದರ್ಭಗಳಲ್ಲೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಮತಪತ್ರಗಳ, ಮತಪೆಟ್ಟಿಗೆಗಳ ಲೂಟಿ, ಧ್ವಂಸ ನಡೆದ ಪ್ರಕರಣಗಳಲ್ಲೂ ಚುನಾವಣಾ ಆಯೋಗ ತೆಪ್ಪಗೆ ಕೂತಿದೆ.

500ಕ್ಕೂ ಹೆಚ್ಚು ಮತಗಟ್ಟೆಗಳಲ್ಲಿ ಮೇ 16ರಂದು ಮರು ಮತದಾನದಲ್ಲೂ ಹಿಂಸಾಚಾರಗಳು, ಮತಪೆಟ್ಟಿಗೆ ಅಪಹರಣ ರಾಜಾರೋಷವಾಗಿ ನಡೆದಿವೆ.

ಜನಗಳು ಮತ ಚಲಾಯಿಸಲು ಈ ಎಲ್ಲ ಹಿಂಸಾಚಾರಗಳ ನಡುವೆಯೂ ಪ್ರಯತ್ನ ನಡೆಸಿದರು. ಹಲವು ಕಡೆಗಳಲ್ಲಿ ಗಲಭೆಕೋರ ಪಡೆಗಳಿಗೆ ಪ್ರತಿರೋಧ ಒಡ್ಡಿದರು. ಜನಗಳ ಪ್ರತಿರೋಧದಿಂದ ಕೆಲವೆಡೆಗಳಲ್ಲಿ ಈ ಟಿಎಂಸಿ ಪಡೆಗಳಲ್ಲೂ ಸಾವು–ನೋವುಗಳಾಗಿವೆ ಎಂದು ವರದಿಯಾಗಿದೆ.

ಮೇ 14 ರ ಮಧ್ಯಾಹ್ನ ಎಡರಂಗ ರಾಜ್ಯ ಚುನಾವಣಾ ಆಯೋಗದ ಕಚೇರಿ ವರೆಗೆ ದೊಡ್ಡ ಮೆರವಣಿಗೆ, ಅಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಿದೆ.

ದಿಲ್ಲಿ, ಲಕ್ನೌ, ರಾಂಚಿ, ಪಾಟ್ನ ಮತ್ತಿತರ ಕಡೆಗಳಲ್ಲೂ ಪಶ್ಚಿಮ ಬಂಗಾಲದಲ್ಲಿ ಗ್ರಾಮ ಪ್ರಜಾಪ್ರಭುತ್ವದದ ಈ ಕೊಲೆಯ ವಿರುದ್ಧ ಪ್ರತಿಭಟನೆಗಳು ನಡೆದಿವೆ.





ಝಾರ್ಖಂಡ್‌ನ ಲತೆಹರ್ ಜಿಲ್ಲೆಯಲ್ಲಿ ಹುಲಿ ಸಾಕಣೆ ಪ್ರಾಜೆಕ್ಟ್ ನಿರ್ಮಿಸುವ ಹೆಸರಲ್ಲಿ 190 ರೆವಿನ್ಯೂ ಗ್ರಾಮಗಳ 38,000 ಕುಟುಂಬಗಳನ್ನು ಸ್ಥಳಾಂತರಿಸುವುದನ್ನು ವಿರೋಧಿಸಿ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್(ಎಎಆರ್‌ಎಂ), ದಿಲತ್ ಶೋಷಣ್ ಮುಕ್ತಿ ಮಂಚ್(ಡಿಎಸ್‌ಎಂಎಂ) ಮತ್ತು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಜಂಟಿಯಾಗಿ ಜಿಲ್ಲೆಯ ಡೆಪ್ಯುಟಿ ಕಮಿಶನರ್ ಕಚೇರಿಯೆದುರು ಪ್ರತಿಭಟನೆ ನಡೆಸಿದವು. ಇದು 5ನೇ ಶೆಡ್ಯೂಲಿನ ಸ್ಥಳವಾಗಿದ್ದು, ಈ ಕುರಿತ ಅಧಿಸೂಚನೆ ಹೊರಡಿಸುವ ಮೊದಲು ಗ್ರಾಮಸಭಾವನ್ನು ನಡೆಸಬೇಕಾಗಿತ್ತು. ಹಾಗೆ ಮಾಡದಿರುವುದುನ್ನು ಖಂಡಿಸಿ ಡೆಪ್ಯುಟಿ ಕಮಿಶನರ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಎಎಆರ್‌ಎಂ ರಾಷ್ಟ್ರೀಯ ಸಂಯೋಜಕ ಜಿತೇಂದ್ರ ಚೌಧರಿ, ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಜಿ.ಕೆ,ಬಕ್ಷಿ ಮತ್ತು ರಾಜ್ಯ ಎಎಆರ್‌ಎಂ ಕಾರ್ಯದರ್ಶಿ ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಇದರ ಮೊದಲು ರಾಜ್ಯದ ಇನ್ನೊಂದು ಆದಿವಾಸಿ ಪ್ರದೇಶ ಛತ್ರದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯೆದುರು 5000ಕ್ಕೂ ಹೆಚ್ಚು ಆದಿವಾಸಿ, ದಲಿತ ಮತ್ತು ಪಾರಂಪರಿಕ ಅರಣ್ಯವಾಸಿಗಳಿಗೆ ಅರಣ್ಯ ಹಕ್ಕುಗಳ ಕಾಯ್ದೆಯ ಪ್ರಕಾರ ಹಕ್ಕುಗಳನ್ನು ಕೊಡಬೇಕು ಎಂಬ ಬೇಡಿಕೆಯ ಮೇಲೆ ನೂರಾರು ಆದಿವಾಸಿಗಳು, ದಲಿತರು, ಅರಣ್ಯವಾಸಿಗಳು ಮತಪ್ರದರ್ಶನ ನಡೆಸಿದರು.

ಮೇ 12ರಂದು ಅಸ್ಸಾಂನ ಬರ್ಪೆಟ ಜಿಲ್ಲೆಯ ಸೊರ್ಭೋಗ್‌ನಲ್ಲಿ 3000 ರೈತರು ಭಾಗವಹಿಸಿದ್ದ ಒಂದು ರ್‍ಯಾಲಿ ನಡೆಯಿತು. ಅದನ್ನುದ್ದೇಶಿಸಿ ರಾಜ್ಯದ ಹಿರಿಯ ರೈತ ಮುಖಂಡರೂ, ಮಾಜಿ ಶಾಸಕರೂ ಆದ ಹೆಮೆನ್ ದಾಸ್, ಮಾಜಿ ಸಂಸದ ಉದ್ಧಬ್ ಬರ್ಮನ್ ಮತ್ತು ಎಐಕೆಎಸ್ ಅಧ್ಯಕ್ಷ ಡಾ.ಅಶೋಕ ಧವಳೆ ಮತ್ತಿತರರು ಮಾತಾಡಿದರು. ನಂತರ ಮೇ 12–13ರಂದು ನಡೆದ ಅಸ್ಸಾಂ ಎಐಕೆಎಸ್ ಘಟಕದ ಪದಾಧಿಕಾರಿಗಳು ಮತ್ತು ರಾಜ್ಯ ಜನರಲ್ ಕೌನ್ಸಿಲಿನ ವಿಸ್ತೃತ ಸಭೆ ರಾಜ್ಯದಲ್ಲಿ ರೈತರ ಹೋರಾಟವನ್ನು ತೀವ್ರ ಗೊಳಿಸಲು ಮತ್ತು ಮುಂಬರುವ ಅಖಿಲ ಭಾರತ ಹೋರಾಟಗಳಲ್ಲಿ ರಾಜ್ಯದ ರೈತರನ್ನು ದೊಡ್ಡ ಸಂಖ್ಯೆಯಲ್ಲಿ ಅಣಿನೆರೆಸಲು ನಿರ್ಧರಿಸಿತು.



ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಆಮೂಲಾಗ್ರ ಸುಧಾರಣೆ ಮಾಡಿ –ಎರಡು ಬಿಜೆಪಿ ಸರಕಾರಗಳಿಗೆ ಹೈಕೋರ್ಟ್‌ಗಳ ತಾಕೀತು

2012ರಿಂದ ಮಹಾರಾಷ್ಟ್ರದ ಸರಕಾರೀ ಮತ್ತು ಸ್ಥಳೀಯ ಸಂಸ್ಥೆಗಳ ಆಸ್ಪತ್ರೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡಿಲ್ಲ ಎಂದು ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯಲ್ಲಿ ಮನಗಂಡ ಮುಂಬೈ ಹೈಕೋರ್ಟ್ ಈ ಎಲ್ಲ ಆಸ್ಪತ್ರೆಗಳಲ್ಲಿ ಎಷ್ಟು ಡಾಕ್ಟರುಗಳು ಮತ್ತು ಇತರ ಸಿಬ್ಬಂದಿಯ ಆವಶ್ಯಕತೆ ಇದೆ ಎಂದು ಸರ್ವೆ ನಡೆಸಬೇಕು ಎಂದು ಆದೇಶಿಸಿದೆ. ಅಲ್ಲದೆ ಆದ್ಯತೆಯ ಮೇಲೆ ಈ ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ಅಭಿಯಾನ ನಡೆಸಬೇಕು ಎಂದೂ ಆದೇಶಿಸಿದೆ.

2012ರಿಂದ ರಾಜ್ಯದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಹಲವಾರು ಹುದ್ದೆಗಳು ಭರ್ತಿಯಾಗದೆ ಉಳಿದಿವೆ ಎಂಬ ಮಾಹಿತಿ ಹಕ್ಕು ಆಯೋಗದ ಉತ್ತರದ ಆಧಾರದಲ್ಲಿ ಮಾಲೆಗಾಂವ್‌ನ ಅರ್ಜಿದಾರರೊಬ್ಬರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯ ನಂತರ ಹೈಕೋರ್ಟ್ ಈ ನಿರ್ದೇಶನ ನೀಡಿದೆ ಎಂದು ವರದಿಯಾಗಿದೆ. ಆಸ್ಪತ್ರೆಗಳಲ್ಲಿ ಜನಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿ ಎಂದು ಅದು ನೆನಪಿಸಿದೆ.

ಇದಲ್ಲದೆ 2016ರಲ್ಲಿ ಹೈಕೋರ್ಟ್ ರಾಜ್ಯದ ಮುನಿಸಿಪಲ್ ಆಸ್ಪತ್ರೆಗಳ ಪರಿಸ್ಥಿತಿಗಳ ವಿಚಾರಣೆ ಮತ್ತು ಪರಾಮರ್ಶೆ ನಡೆಸಲು ವಿಶೇಷ ಸಮಿತಿಗಳನ್ನು ರಚಿಸಬೇಕು, ಇವು ಎರಡು ತಿಂಗಳಿಗೊಮ್ಮೆ ಸಭೆ ಸೇರಿ ಪರಾಮರ್ಶೆ ನಡೆಸಬೇಕು ಎಂದು ಆದೇಶ ನೀಡಿತ್ತು. ಈ ಪ್ರಕಾರ ಸಮಿತಿಗಳೇನೋ ರಚನೆಯಾದವು, ಆದರೆ ಅವು ಕಳೆದ ಸುಮಾರು 2 ವರ್ಷಗಳ ಅವಧಿಯಲ್ಲಿ ಸಭೆ ಸೇರಿದ್ದು ಮೂರು ಬಾರಿ ಮಾತ್ರ, ಈ ಮೂಲಕ ನ್ಯಾಯಾಲಯ ನಿಂದನೆಯಾಗಿದೆ ಎಂಬ ಸಂಗತಿಯತ್ತ ಅರ್ಜಿದಾರರು ಗಮನ ಸೆಳೆದಾಗ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಜೂನ್ 15ರೊಳಗೆ ಉತ್ತರ ನೀಡುವಂತೆಯೂ ಆದೇಶಿಲಾಗಿದೆ ಎಂದು ವರದಿಯಾಗಿದೆ.

***

ಇದಕ್ಕೆ ಮೊದಲು ಮಾರ್ಚ್ ತಿಂಗಳಲ್ಲಿ ಅಲಹಾಬಾದ್ ಹೈಕೋರ್ಟ್ ಉತ್ತರ ಪ್ರದೇಶ ಸರಕಾರಕ್ಕೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಆಮೂಲಾಗ್ರ ಸುಧಾರಣೆಗೆ ನಿರ್ದೇಶನಗಳ ಒಂದು ದೊಡ್ಡ ಪಟ್ಟಿಯನ್ನೇ ಹೊಂದಿದ್ದ 96 ಪುಟಗಳ ಆದೇಶವನ್ನು ಹೊರಡಿಸಿತ್ತು. ರಾಜ್ಯದ ಆರೋಗ್ಯ ವೆಚ್ಚಗಳ ಲೆಕ್ಕ ಪರಿಶೋಧನೆಗಳಿಂದ ಹಿಡಿದು, ಪುಕ್ಕಟೆ ಆಂಬುಲೆನ್ಸ್ ಸೇವೆ ಮತ್ತು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಪುಕ್ಕಟೆ ಊಟ ಒದಗಿಸುವವರೆಗೆ ವ್ಯಾಪಕವಾದ ನಿರ್ದೇಶನಗಳು ಇದರಲ್ಲಿ ಇವೆ ಎಂದು 'ದಿ ವೈರ್' ವೆಬ್ ಪತ್ರಿಕೆ ಹೇಳಿದೆ. ಸರಕಾರೀ ನೌಕರರು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನೇ ಬಳಸಬೇಕು, ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಗಳಿಗೆ ಹಣ ನೀಡಬಾರದು ಎಂದೂ ಹೇಳಿದೆಯಂತೆ.

ಉತ್ತರಪ್ರದೇಶ ರಾಜ್ಯ ಸರಕಾರ ಈ ನಿರ್ದೇಶನಗಳನ್ನು ಪಾಲಿಸುವುದು ಹೇಗೆ ಎಂದು ತಲೆಕೆಡಿಸಿಕೊಳ್ಳುವ ಬದಲು, ಕಳೆದ ಮೂರು ತಿಂಗಳಿಂದ ಈ ಆದೇಶವನ್ನು ನಿರರ್ಥಕಗೊಳಿಸುವುದು ಹೇಗೆ ಎಂದೇ ತಲೆಕೆಡಿಸಿಕೊಳ್ಳುತ್ತಿದೆ, ಈ ಆದೇಶದ ವಿರುದ್ಧ ಸುಪ್ರಿಂ ಕೋರ್ಟಿನಿಂದ ಇಂಜಂಕ್ಷನ್ ತರಲು ಅದು ಶತಪ್ರಯತ್ನ ನಡೆಸುತ್ತಿದೆ ಎಂದು ಈ ಪತ್ರಿಕೆ ಹೇಳಿದೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ತೀವ್ರ ಕೊರತೆಗಳಿಂದಾಗಿ ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂದ ಮಹಿಳೆಯೊಬ್ಬಳ ಪರವಾಗಿ ಹಾಕಿದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆಯಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣ ವಿಭಾಗದ ಪ್ರಿನ್ಸಿಪಲ್ ಸೆಕ್ರೆಟರಿ ಮತ್ತು ಅಲಹಾಬಾದಿನ ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಸುಳ್ಳು ಅಫಿಡವಿಟ್ ಸಲ್ಲಿಸಿದ್ದು ನ್ಯಾಯಾಲಯದ ಗಮನಕ್ಕೆ ಬಂದಿದ್ದು ಅವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆಯ ಕ್ರಮವನ್ನೇಕೆ ಕೈಗೊಳ್ಳಬಾರದು ಎಂದು ಹೈಕೋರ್ಟ್ ಕೇಳಿರುವುದೂ ಯೋಗಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ ಎನ್ನಲಾಗಿದೆ.

‘ಐತಿಹಾಸಿಕ ಪ್ರಮಾದ’ವೊಂದಕ್ಕೆ ಈಗ 70 ವರ್ಷ!





ಇಸ್ರೇಲ್ ರಾಷ್ಟ್ರವು ತಾನು ಅಸ್ಥಿತ್ವಕ್ಕೆ ಬಂದ ಕ್ಷಣದಿಂದಲೂ ಪ್ಯಾಲೇಸ್ತೀನ್ ಮತ್ತು ಇತರ ನೆರೆಹೊರೆ ದೇಶಗಳ ಮೇಲೆ ಯುದ್ಧವನ್ನು ನಡೆಸುತ್ತಲೇ ಇದೆ. ಆದ್ದರಿಂದಲೇ ಪ್ರಖ್ಯಾತ ನಾಟಕಕಾರ ಟೋನಿ ಕೃಶ್ನರ್ ಇಸ್ರೇಲನ್ನು ಒಂದು “ಐತಿಹಾಸಿಕ ಪ್ರಮಾದ”ವೆಂದು ತೀರ್ಮಾನಿಸಿದ್ದು ಮತ್ತು ಪ್ಯಾಲೆಸ್ತೀನಿಯನ್ನರು ಇದನ್ನು ಈಗಲೂ ‘ನಕ್ಬಾ ದಿನ’(ಮಹಾಕೇಡಿನ ದಿನ) ಎಂದು ಆಚರಿಸುತ್ತಿರುವುದು.

ಲೇಖನ ಕೃಪೆ: ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಇಪಿಡಬ್ಲ್ಯು), ಮೇ 12, 2018 ಅನು: ಶಿವಸುಂದರ್

ಯುದ್ಧವನ್ನು ಮಾಡುತ್ತಲೇ ಅಸ್ಥಿತ್ವಕ್ಕೆ ಬಂದ ಇಸ್ರೇಲ್ ತನ್ನ 70ನೇ ವಾರ್ಷಿಕೋತ್ಸವದ ಸನಿಹದಲ್ಲಿರುವಾಗಲೂ ಯುದ್ಧದ ಚಾಳಿಯನ್ನು ಮುಂದುವರೆಸಿದೆ. ಅರಬ್ ಪ್ರಪಂಚದಲ್ಲಿ ನಡೆಯುತ್ತಿರುವ ಕದನಗಳಲ್ಲಿ ಹಲವಾರು ವರ್ಷಗಳಿಂದ ಒಂದಲ್ಲ ಒಂದು ಬಣಕ್ಕೆ ಗುಟ್ಟಾಗಿ ಸಹಕಾರವನ್ನೀಯುತ್ತಾ ಅಥವಾ ಯಾವುದಾದರೊಂದು ದೇಶದ ವಿರುದ್ಧ ಗುಪ್ತ ಕಾರ್ಯಾಚರಣೆ ನಡೆಸುತ್ತಾ ಬಂದ ಇಸ್ರೇಲ್ ಇದೀಗ ಇರಾನ್ ವಿರುದ್ಧ ಪರೋಕ್ಷ ಯುದ್ಧವನ್ನೆ ಸಾರುತ್ತಿದೆ. ಸಿರಿಯಾದ ನೆಲದಲ್ಲಿ ಈಗ ನಡೆಯುತ್ತಿರುವ ಯುದ್ಧದಲ್ಲಿ ಎಲ್ಲ ಯುದ್ಧಕೋರರೂ ಸೇರಿಕೊಳ್ಳುತ್ತಿದ್ದಾರೆ. ಆದರೆ ಮೇ ತಿಂಗಳಲ್ಲಿ ಈ ಯುದ್ಧತೀವ್ರತೆಯಲ್ಲಿ ಆದ ಅಪಾಯಕಾರಿ ಹೆಚ್ಚಳವನ್ನು ಗಮನಿಸಿದರೆ ಅತ್ಯಂತ ಸನಿಹದಲ್ಲೇ ದೊಡ್ಡ ಮಟ್ಟದ ಯುದ್ಧವು ಸ್ಫೋಟವಾಗುವ ಸಾಧ್ಯತೆ ನಿಚ್ಚಳವಾಗಿದೆ.

ಯುದ್ಧ ತೀವ್ರತೆಯನ್ನು ಹೆಚ್ಚಿಸುವುದಕ್ಕೆ ಅಮೆರಿಕವೇ ಮೇ 8 ರಂದು ಹಸಿರು ನಿಶಾನೆಯನ್ನು ತೋರಿಸಿತು. ಜನಾಂಗೀಯವಾದಿಗಳ ಮತ್ತು ಎಲ್ಲಾ ಬಗೆಯ ಯೆಹೂದಿ ದುರಭಿಮಾನಿಗಳ ನಿಕಟ ಸ್ನೇಹದಲ್ಲಿರುವ ಅಮೆರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರು ಇಸ್ರೇಲಿನ ಯೆಹೂದಿ ಪ್ರಭುತ್ವವು ಬಹಳ ವರ್ಷಗಳಿಂದ ನಿರಂತರವಾಗಿ ಮಾಡುತ್ತಿದ್ದ ಆಗ್ರಹವೊಂದಕ್ಕೆ ಅಂದು ಒಪ್ಪಿಗೆ ನೀಡಿತು. ಅಂದು ಟ್ರಂಪ್ ಅವರು ತನ್ನ ಎಂದಿನ ಆತ್ಮರತಿ ಮತ್ತು ದುರಭಿಮಾನಗಳಿಂದ ಕೂಡಿದ ಭಾಷಣ ಮಾಡುತ್ತಾ ಇರಾನಿನ ಅಣುಶಕ್ತಿ ಸಂಶೋಧನಾ ಕಾರ್ಯಕ್ರಮಗಳ ಮೇಲೆ ಹಲವಾರು ನಿರ್ಬಂಧಗಳನ್ನು ವಿಧಿಸಿ ಅಮೆರಿಕವು ಮಾಡಿಕೊಂಡ ಒಪ್ಪಂದದಿಂದ ಹಿಂದೆ ಸರಿಯುತ್ತಿರುವುದಾಗಿ ಘೋಷಿಸಿದರು.

ಈ ಒಪ್ಪಂದಕ್ಕೆ ಇರಾನ್, ಅಮೆರಿಕ ಮತ್ತು ಇನ್ನಿತರ ಐದು ಪಾಲುದಾರ ರಾಷ್ಟ್ರಗಳು ಸುದೀರ್ಘ ಮಾತುಕತೆಗಳ ನಂತರ 2015ರಲ್ಲಿ ಸಹಿ ಮಾಡಿದ್ದವು. ಬಹಳಷ್ಟು ಪರಿಣಿತರು ಈ ಒಪ್ಪಂದವನ್ನು ಜಾರಿ ಮಾಡಬಲ್ಲ ವಿಶ್ವಾಸಾರ್ಹ ಪ್ರಕ್ರಿಯೆಗಳಿರುವ ಉತ್ತಮ ಒಪ್ಪಂದವೆಂದು ಪರಿಗಣಿಸಿದ್ದರು. ಇದಕ್ಕೂ ಮುನ್ನ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದವು ಹೇರುವ ಕೆಲವು ಹೊಣೆಗಾರಿಕೆಗಳನ್ನು ಇರಾನ್ ಸ್ವಲ್ಪ ಮಟ್ಟಿಗೆ ಉಲ್ಲಂಘಿಸಿದ್ದರಿಂದ ಅದನ್ನು ಜಾಗತಿಕ ಸಮುದಾಯವು ದೂರವಿಟ್ಟಿತ್ತು. ಆದರೆ ಈ ಒಪ್ಪಂದದ ಮೂಲಕ ಅ ಬಹಿಷ್ಕಾರದಿಂದ ಹೊರಬರಲು ಇರಾನ್‌ಗೆ ಸಣ್ಣ ಅವಕಾಶವೊಂದು ದಕ್ಕುತ್ತಿತ್ತು. ಆದರೆ ಅದನ್ನು ಸಹ ಇಸ್ರೇಲ್ ತನ್ನ ಅಸ್ಥಿತ್ವಕ್ಕೆ ಒದಗಿರುವ ಸಂಚಕಾರವೆಂದು ಬಗೆಯುತ್ತಿದೆ.

ಇನ್ನು ತಾನು ತನ್ನ ದೇಶದಲ್ಲಿ ಜನತೆಯ ಇಡೀ ಇತಿಹಾಸ ಮತ್ತು ಜನಾಂಗೀಯ ಗುರುತಗಳನ್ನೇ ನಾಶಮಾಡುವ ಉದ್ದೇಶದೊಂದಿಗೆ ಮಾಡುತ್ತಿರುವ ಯುದ್ಧವನ್ನು ಸಹ ಇಸ್ರೇಲ್ ಹೊಸ ಹಂತಕ್ಕೆ ಕೊಂಡೊಯ್ದಿದೆ. ಅಮೆರಿಕವು ಇಸ್ರೇಲಿನಲ್ಲಿರುವ ತನ್ನ ರಾಯಭಾರ ಕಛೇರಿಯನ್ನು ಜೆರುಸಲೇಮ್‌ಗೆ ಸ್ಥಳಾಂತರಿಸುವಾಗ ಅಸ್ಥಿತ್ವದಲ್ಲಿದ್ದ ಎಲ್ಲಾ ನಿರ್ಬಂಧಗಳನ್ನೂ ಸಡಿಲಿಸಲಾಯಿತು. ಈ ಮಹತ್ವದ ಸ್ಥಳಾಂತರವು ಇಸ್ರೇಲ್ ಅಸ್ಥಿತ್ವಕ್ಕೆ ಬಂದ ದಿನವಾದ ಮೇ 14ರಂದು ನಡೆಯಲಿದೆ. ಆ ದಿನವನ್ನು ಪ್ಯಾಲೆಸ್ತೀನೀಯರು “ನಕ್ಬಾ” ಅಥವಾ ವಿನಾಶದ ದಿನವೆಂದು ಆಚರಿಸುತ್ತಾರೆ. ಇಸ್ರೇಲ್ ಆಕ್ರಮಿಸಿಕೊಂಡಿರುವ ನೆಲವನ್ನೂ ಮತ್ತು ವಿಶಾಲ ಬಯಲು ಬಂದೀಖಾನೆಯಂತಿರುವ ಗಾಜಾ ಪ್ರದೇಶವನ್ನು ಪ್ರತ್ಯೇಕಿಸಲು ಇಸ್ರೇಲ್ ಅಭೇಧ್ಯ ಕೋಟೆಯಂತಿರುವ ಒಂದು ತಡೆಗೋಡೆಯನ್ನು ನಿರ್ಮಿಸಿದೆ. ಮೇ 14ರಂದು ತಡೆಗೋಡೆಯತ್ತ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ತೆರಳುವ ಮೂಲಕ ನಕ್ಬಾವನ್ನು ಆಚರಿಸಲು ಪ್ಯಾಲೆಸ್ತೀನಿಯರು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ (ಬಾಕ್ಸ್ ನೋಡಿ)

ಗಾಜಾದಲ್ಲಿ ವಾಸಿಸುತ್ತಿರುವ ಮೂರನೇ ಎರಡು ಭಾಗದಷ್ಟು ಜನರು ನಿರಾಶ್ರಿತರು. ಅವರಲ್ಲಿ ಹಲವರು ಪದೇಪದೇ ನಡೆಯುತ್ತಿದ್ದ ಇಸ್ರೇಲ್ ದಾಳಿಯಿಂದಾಗಿ ಹಲವಾರು ಬಾರಿ ತಾವಿದ್ದ ಸ್ಥಳಗಳಿಂದ ಸ್ಥಳಾಂತರಕ್ಕೊಳಗಾಗಿದ್ದವರು. ತಡೆಗೋಡೆಯತ್ತ ಅವರು ಯೋಜಿಸುತ್ತಿರುವ ಮೆರವಣಿಗೆಯು ತಮ್ಮ ತಾಯ್ನೆಲವನ್ನು ಮರಳಿ ಪಡೆದುಕೊಳ್ಳಲು ಪ್ಯಾಲೆಸ್ತೀನೀಯರು ಮಾಡುತ್ತಿರುವ ಬಲವಾದ ಪ್ರತಿಪಾದನೆಯಾಗಿದೆ. ಕಳೆದ ಆರು ವಾರಗಳಿಂದ ಪ್ರತಿ ಶುಕ್ರವಾರದ ನಮಾಜಿನ ನಂತರ ಪ್ಯಾಲೆಸ್ತೀನಿಯರು ನಡೆಸುತ್ತಿರುವ ಪ್ರತಿಭಟನೆಗಳಲ್ಲಿ ಈವರೆಗೆ 51 ಜನರನ್ನು ಇಸ್ರೇಲ್ ಕೊಂದುಹಾಕಿದೆ. “ಹ್ಯೂಮನ್ಸ್ ರೈಟ್ ವಾಚ್” ಸಂಸ್ಥೆಯು ಇದನ್ನು “ಕಾನೂನು ಬಾಹಿರ” ಹತ್ಯೆಯೆಂದು ಘೋಷಿಸಿದೆ. ಹೀಗಾಗಿ ಇವು ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯವು ತನಿಖೆ ಮಾಡಲು ಯೋಗ್ಯವಾದ ಪ್ರಕರಣಗಳಾಗಿವೆ.

ಈ ಪ್ರಕರಣಗಳ ಬಗ್ಗೆ ಪರಿಣಿತರು ಕೊಟ್ಟಿರುವ ತೀರ್ಮಾನಗಳು ಅಮೆರಿಕ ವ್ಯಕ್ತಪಡಿಸುತ್ತಿರುವ ನಿರ್ಲಕ್ಷ್ಯಕ್ಕೆ ತದ್ವಿರುದ್ಧವಾಗಿವೆ. ಗಾಜಾ ಪ್ರದೇಶದಲ್ಲಿ ಇಸ್ರೇಲ್ ಮಾಡುತ್ತಿರುವ ಕೊಲೆಗಳನ್ನು ಮತ್ತು ಮತ್ತು ಸಿರಿಯಾದಲ್ಲಿ ತೀವ್ರಗೊಳ್ಳುತ್ತಿರುವ ಯುದ್ಧವನ್ನು ಅಮೆರಿಕವು ಇಸ್ರೇಲಿಗೆ ತನ್ನ ಆತ್ಮ ರಕ್ಷಣೆ ಮಾಡಿಕೊಳ್ಳುವ ಹಕ್ಕಿದೆ ಎಂದು ಹೇಳುತ್ತಾ ಸಮರ್ಥಿಸಿಕೊಳ್ಳುತ್ತಿದೆ. ಇಸ್ರೇಲ್ ಅಸ್ಥಿತ್ವಕ್ಕೆ ಬಂದು 70 ವರ್ಷ ತುಂಬುತ್ತಿರುವ ಈ ಹೊತ್ತಿನಲ್ಲಿ ಯಾವ ಬಗೆಯ ಜಾಗತಿಕ ವ್ಯವಸ್ಥೆಯಡಿ ಇಸ್ರೇಲ್‌ನ ಅತಿರೇಕಗಳು ನಡೆಯುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಜರೂರಾಗಿದೆ. ಜಾಗತಿಕವಾಗಿ ಸಮ್ಮತವಾಗಿರುವ ಮರುಮಾನ್ಯತೆಯ ಹಕ್ಕನ್ನು ಪ್ರತಿಪಾದಿಸುತ್ತಿರುವ ನಿರಾಯುಧರ ಮೆರವಣಿಗೆಯ ಮೇಲೆ ಆತ್ಮರಕ್ಷಣೆಯ ಹೆಸರಿನಲ್ಲಿ ಗುಂಡಿನ ಮಳೆಗರೆದು ಕೊಂದುಹಾಕುವ ಮತ್ತು ತನ್ನ ಕೊನೆಯಿಲ್ಲದ ಅಸ್ಥಿತ್ವದ ಆತಂಕಗಳನ್ನು ನೀಗಿಸಿಕೊಳ್ಳಲು ನೆರೆಹೊರೆ ದೇಶಗಳ ಮೇಲೆ ಯಾವುದೇ ಎಗ್ಗಿಲ್ಲದೆ ದಾಳಿ ಮಾಡುವ ಪ್ರಭುತ್ವವೊಂದರ ನಿಜ ಸ್ವರೂಪವೇನಿದ್ದಿರಬಹುದು?

ಇಸ್ರೇಲಿನ ರಾಜಕೀಯ ರಂಗದ ಕೆಲವು ಧಾರೆಗಳು ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರಗಳನ್ನು ನೀಡುತ್ತಿವೆ. ಕಳೆದ ವರ್ಷದ ಮಧ್ಯಭಾಗದಲ್ಲಿ ಇದ್ದಕ್ಕಿದ್ದಂತೆ ರಾಜಕೀಯ ರಂಗಕ್ಕೆ ಮರಳಿದ ಇಸ್ರೇಲಿನ ಮಾಜಿ ಪ್ರಧಾನಿ ಯೆಹೂದ್ ಬರಾಕ್ ಅವರು ಇಸ್ರೇಲ್ ಒಂದು ವರ್ಣಬೇಧವನ್ನು ಆಚರಿಸುವ ರಾಷ್ಟ್ರವಾಗುವೆಡೆ ಶೀಘ್ರವಾಗಿ ಜಾರುತ್ತಿದೆ ಎಂಬ ಎಚ್ಚರಿಕೆಯನ್ನು ನೀಡಿದರು. ಅವರ ಎಚ್ಚರಿಕೆಯಲ್ಲಿ ಹುರುಳಿತ್ತು. ಏಕೆಂದರೆ 2003ರಲ್ಲೇ ಇಸ್ರೇಲಿನ ಕುಲೀನ ವರ್ತುಲಗಳ ಸದಸ್ಯನಾಗಿದ್ದ ಮತ್ತು ಇಸ್ರೇಲಿನ ಶಾಸನ ಸಭೆಯ ಮಾಜಿ ಸಭಾಪತಿಯೂ ಆಗಿದ್ದ ಅಬ್ರಹಾಮ್ ಬರ್ಗ್ ಅವರು ವರ್ಣಬೇಧ ವ್ಯವಸ್ಥೆಯು ದೇಶದ ಭವಿಷ್ಯದ ಸಾಧ್ಯತೆಯಲ್ಲ ಬದಲಿಗೆ ಈಗಾಗಲೇ ಜಾರಿಯಲ್ಲಿರುವ ವ್ಯವಸ್ಥೆಯಾಗಿಬಿಟ್ಟಿದೆ ಎಂದು ಎಚ್ಚರಿಸಿದ್ದರು.

ಯೆಹೂದಿ ದುರಭಿಮಾನಿ ಪ್ರಭುತ್ವವು ಸ್ಥಾಪಿತವಾದಾಗಿನಿಂದಲೂ ಇಸ್ರೇಲಿನ ರಾಜಕೀಯ ಪರಿಭಾಷೆಯಲ್ಲಿ “ಜನಸಂಖ್ಯಾ ಸ್ವರೂಪದ ಸಮಸ್ಯೆ” ಎಂದು ಕರೆಸಿಕೊಳ್ಳಲ್ಪಡುವ ವಿದ್ಯಮಾನದ ಬಗ್ಗೆ ಅತಿಯಾದ ಆತಂಕವಿದೆ. ಹೀಗಾಗಿ ಪ್ಯಾಲೇಸ್ತೀನೀ ಭೂಪ್ರದೇಶಗಳನ್ನು ಯೆಹೂದಿಗಳ ಒಡೆತನಕ್ಕೆ ತಂದುಕೊಳ್ಳುವ ಸಲುವಾಗಿ ದೊಡ್ಡ ಸಂಖ್ಯೆಯಲ್ಲಿ ಆ ಪ್ರದೇಶಗಳಲ್ಲಿ ಯೆಹೂದಿಗಳು ನೆಲೆಗೊಳ್ಳುವಂತೆ ಮಾಡುವುದು ಇಸ್ರೇಲಿ ವ್ಯೂಹತಂತ್ರದ ಮುಖ್ಯ ಭಾಗವಾಗಿದೆ. ಆದರೆ ಈ ತಂತ್ರವು ಒಂದು ಹಂತದ ನಂತರ ಅಷ್ಟಾಗಿ ಪ್ರಾಯೋಗಿಕವಲ್ಲ ಎಂದು ಅರಿವಾದ ಮೇಲೆ ಏಕಪಕ್ಷೀಯವಾಗಿ ಯೆಹೂದಿಯೇತರ ಪ್ರದೇಶಗಳನ್ನು ಪ್ರತ್ಯೇಕಗೊಳಿಸುವ ಯೋಜನೆ ಪ್ರಾರಂಭವಾಯಿತು. 2000ನೇ ಇಸವಿಯಲ್ಲಿ ಬರಾಕ್ ಅವರು ಮುಂದಿಟ್ಟ ನಯವಂಚನೆಯ ಶಾಂತಿ ಒಪ್ಪಂದವು ಮುರಿದುಬೀಳುವುದರ ಜೊತೆಗೆ “ದ್ವಿ ರಾಷ್ಟ್ರ ಪರಿಹಾರ”ದ ಚರ್ಚೆಗಳೂ ಕೊನೆಗೊಂಡವು. ಆದರೂ ಈ ಜನಸಂಖ್ಯಾ ಸ್ವರೂಪದ ಸಮಸ್ಯೆಯ ಮುಜುಗರವನ್ನು ತಪ್ಪಿಸಿಕೊಳ್ಳಲು ಈ ಚರ್ಚೆಯನ್ನು ಆಗಾಗ ಹರಿಬಿಡಲಾಗುತ್ತದೆ.

ಶಾಂತಿ ಮಾತುಕತೆಯ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗುವ ಕೊನೆಯ ಪ್ರಯತ್ನವಾಗಿ 2008ರಲ್ಲಿ ಅಮೆರಿಕದ ಅಂದಿನ ಅಧ್ಯಕ್ಷ ಜಾರ್ಜ್ ಬುಷ್ ಅವರು ಅಮೆರಿಕದ ಅನಾಪೊಲಿಸ್‌ನಲ್ಲಿ ಒಂದು ದ್ವಿಪಕ್ಷೀಯ ಮಾತುಕತೆಯನ್ನು ಏರ್ಪಡಿಸಿದ್ದರು. ಆಗ ಇಸ್ರೇಲ್ ಸುದೀರ್ಘ ಕಾಲದ ಬಲಪಂಥೀಯರ ಅಧಿಪತ್ಯದಿಂದ ನಿಧಾನವಾಗಿ ಚೇತರಿಸಿಕೊಳ್ಳುತ್ತಿತ್ತು. ಆದರೆ ಆ ಗುಪ್ತ ಮಾತುಕತೆಯಲ್ಲಿ ಇಸ್ರೇಲಿನ ಪರವಾಗಿ ಭಾಗವಹಿಸಿದ್ದ ಅತ್ಯಂತ ವ್ಯವಹಾರಿಕ ಪ್ರಜ್ಞೆಯುಳ್ಳವರೆಂದು ಹೆಸರು ಪಡೆದಿದ್ದ ಆ ದೇಶದ ವಿದೇಶಾಂಗ ಮಂತ್ರಿಯು ಹಾಲೀ ಮಾತುಕತೆಯು ನಡೆಯಬೇಕೆಂದರೆ ಪ್ಯಾಲೆಸ್ತೀನಿಯರು ಇಸ್ರೇಲನ್ನು ಒಂದು ಶಾಶ್ವತ ಯೆಹೂದಿ ಪ್ರಭುತ್ವವೆಂದು ಒಪ್ಪಿಕೊಳ್ಳುವುದು ಪೂರ್ವಶರತ್ತೆಂದು ಹಠ ಹಿಡಿದರು. ಅದರ ಅರ್ಥ ಇಸ್ರೇಲ್ ಆಕ್ರಮಿತ ಪ್ರದೇಶದಿಂದ ಹೊರದೂಡಲ್ಪಟ್ಟ ಪ್ಯಾಲೆಸ್ತೀನ್ ನಿರಾಶ್ರಿತರು ವಾಪಸ್ ತಮ್ಮ ಮನೆಗೆ ಮರಳುವ ಪ್ರಶ್ನೆಯೇ ಶಾಶ್ವತವಾಗಿ ಇಲ್ಲವಾಗುವಂತೆ ಮಾಡುವುದು ಮತ್ತು ಇಸ್ರೇಲ್ ಭೂಭಾಗದೊಳಗಿರುವ ಪ್ಯಲೇಸ್ತೀನ್ ಅಲ್ಪಸಂಖ್ಯಾತರ ನಾಗರಿಕತ್ವದ ಸ್ಥಾನಮಾನ ಅತಂತ್ರಗೊಳಿಸುವುದೇ ಆಗಿತ್ತು. ಪ್ಯಾಲೇಸ್ತೀನೀಯರ ಮಟ್ಟಿಗೆ ಇದು ಸಾಮೂಹಿಕ ಆತ್ಮಹತ್ಯೆಗೆ ನೀಡಿದ ಆಹ್ವಾನದಂತಿತ್ತು. ಅಮೆರಿಕದ ಅಂದಿನ ವಿದೇಶಾಂಗ ಕಾರ್ಯದರ್ಶಿ ಕಾಂಡೊಲಿಸಾ ರೈಸ್ ಅವರೇ “ಇಸ್ರೇಲಿ ಪ್ರಭುತ್ವದ ಜನಂಗೀಯ ಪರಿಶುದ್ಧತೆಯ” ಪ್ರತಿಪಾದನೆಯನ್ನು ಕಂಡು ಅವಾಕ್ಕಾಗಿದ್ದರು. ಆದರೆ ಅದು ಕ್ಷಣ ಮಾತ್ರದ ಮೈಮರೆವು ಮಾತ್ರವಾಗಿತ್ತು. ಕೂಡಲೇ ಸಾವರಿಸಿಕೊಂಡ ರೈಸ್ ಅವರು ಅಮೆರಿಕದ ವ್ಯೂಹಾತ್ಮಕ ನೀತಿಯಾದ “ಇಸ್ರೇಲ್ ಮೊದಲು” ನೀತಿಗೆ ಶರಣಾಗಿ ಇಸ್ರೇಲಿಗೆ ತಮ್ಮ ಅಚಲ ನಿಷ್ಠೆಯನ್ನು ಪ್ರದರ್ಶನ ಮಾಡಿದರು.

ಒಬಾಮ ಆಡಳಿತದಡಿಯಲ್ಲಿ ಪ್ಯಾಲೇಸ್ತೀನಿಯರಿಗೆ ಸೈದ್ಧಾಂತಿಕವಾಗಿ ಒಂದಷ್ಟು ಮೇಲುಗೈ ಸಿಕ್ಕಿದ್ದಿರಬಹುದು. ಆದರೆ ಟ್ರಂಪ್ ಆಡಳಿತ ಇಸ್ರೇಲಿನ ಜನಾಂಗೀಯವಾದಿ ದಮನಕಾರಿ ಪ್ರಭುತ್ವಕೆ ಬೇಶರತ್ ಸಹಕರಿಸುವ ನೀತಿಗೆ ಸಂಪೂರ್ಣವಾಗಿ ಮರಳುವ ಸೂಚನೆಗಳನ್ನು ನೀಡಿದೆ. ಹೀಗೆ ಇಸ್ರೇಲ್ ಮತ್ತೊಮ್ಮೆ ತನ್ನ ನೆರೆಹೊರೆ ದೇಶಗಳ ಸ್ಫೋಟಕ ರಾಜಕೀಯ ಸಂದರ್ಭಕ್ಕೆ ಬೆಂಕಿ ಇಕ್ಕುವ ಪ್ರಯತ್ನ ನಡೆಸುತ್ತಿದೆ. ಈಗಲಾದರೂ ಅದರ ಆಘಾತಕಾರಿ ಪರಿಣಾಮಗಳನ್ನು ಜಗತ್ತು ಪರಿಗಣನೆಗೆ ತೆಗೆದುಕೊಳ್ಳುವ ಅಗತ್ಯವಿದೆ.

ಈ ಎಲ್ಲಾ ಕಾರಣಗಳಿಂದಾಗಿಯೇ ಅತ್ಯಂತ ಪುರಸ್ಕೃತ ನಾಟಕಕಾರ ಟೋನಿ ಕೃಶ್ನರ್ ಅವರು ಇಸ್ರೇಲನ್ನು ಒಂದು “ಐತಿಹಾಸಿಕ ಪ್ರಮಾದ”ವೆಂದು ತೀರ್ಮಾನಿಸಿದ್ದರು. ಇದರ ಒಳಾರ್ಥಗಳನ್ನು ಈಗಲಾದರೂ ಅರ್ಥಮಾಡಿಕೊಳ್ಳಬೇಕು. ●

ಮೇಲಿನ ಲೇಖನದಲ್ಲಿ ಹೇಳಿದಂತೆ, ಗಾಜಾದಲ್ಲಿ ವಾಸಿಸುತ್ತಿರುವ ಮೂರನೇ ಎರಡು ಭಾಗದಷ್ಟು ಜನರು ನಿರಾಶ್ರಿತರು. ಅವರಲ್ಲಿ ಹಲವರು ಪದೇಪದೇ ನಡೆಯುತ್ತಿದ್ದ ಇಸ್ರೇಲ್ ದಾಳಿಯಿಂದಾಗಿ ಹಲವಾರು ಬಾರಿ ತಾವಿದ್ದ ಸ್ಥಳಗಳಿಂದ ಸ್ಥಳಾಂತರ ಕ್ಕೊಳಗಾಗಿದ್ದವರು. ತಡೆಗೋಡೆಯತ್ತ ಅವರು ಯೋಜಿಸುತ್ತಿರುವ ಮೆರವಣಿಗೆಯು ತಮ್ಮ ತಾಯ್ನೆಲವನ್ನು ಮರಳಿ ಪಡೆದುಕೊಳ್ಳಲು ಪ್ಯಾಲೆಸ್ತೀನೀಯರು ಮಾಡುತ್ತಿರುವ ಬಲವಾದ ಪ್ರತಿಪಾದನೆಯಾಗಿದೆ. ಕಳೆದ ಆರು ವಾರಗಳಿಂದ ಪ್ರತಿ ಶುಕ್ರವಾರದ ನಮಾಜಿನ ನಂತರ ಪ್ಯಾಲೆಸ್ತೀನಿಯರು ನಡೆಸುತ್ತಿರುವ ಪ್ರತಿಭಟನೆಗಳಲ್ಲಿ ಇಸ್ರೇಲ್ ನೂರಕ್ಕೂ ಹೆಚ್ಚು ಪ್ಯಾಲೆಸ್ತೀನಿಯನ್ನರನ್ನು ಕೊಂದಿದೆ. ಮೇ 14 ರಂದು ‘ನಕ್ಬಾ’ ಅಂದರೆ ಮಹಾಕೇಡಿನ 70ನೇ ವಾರ್ಷಿಕದ ಮುನ್ನಾದಿನವೊಂದರಲ್ಲೇ ಅಧ್ಯಕ್ಷ ಟ್ರಂಪ್ ಅಮೆರಿಕನ್ ರಾಯಭಾರಿ ಕಚೇರಿಯನ್ನು ಕಾನೂನುಬಾಹಿರವಾಗಿ ಜೆರುಸಲೇಂನಲ್ಲಿ ತೆರೆದು ಇಸ್ರೇಲಿ ಆಳರಸರೊಂದಿಗೆ ಸಂಭ್ರಮಿಸುತ್ತಿದ್ದಾಗ ಗಾಝಾ ಗಡಿಯಲ್ಲಿ ತಮ್ಮ ತಾಯ್ನೆಲಕ್ಕೆ ಮರಳುವ ಹಕ್ಕನ್ನು ಪ್ರತಿಪಾದಿಸುತ್ತಿದ್ದ ಸಾವಿರಾರು ಪ್ಯಾಲೆಸ್ತೀನಿಯನ್ನರ ಮೇಲೆ ಇಸ್ರೇಲ್ ಅಮಾನುಷ ದಾಳಿ ನಡೆಸಿ 58ಮಂದಿಯ ಸಾವಿಗೆ ಕಾರಣವಾಗಿದೆ. ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಮರುದಿನ ಪ್ಯಾಲೆಸ್ತೀನ್‌ನಲ್ಲಿ ಮತ್ತು ಜಗತ್ತಿನಾದ್ಯಂತ ಈ ಹತ್ಯಾಕಾಂಡವನ್ನು ಖಂಡಿಸಿ, ನಕ್ಬಾದ 70ನೇ ವಾರ್ಷಿಕದ ಸಂದರ್ಭದಲ್ಲಿ ತಾಯ್ನೆಲಕ್ಕೆ ಮರಳುವ ಹಕ್ಕನ್ನು ಎತ್ತಿಹಿಡಿಯುವ ಮತಪ್ರದರ್ಶನಗಳು ನಡೆದಿವೆ.



ಮೇ 14ರಂದು ಜೆರುಸಲೇಂನಲ್ಲಿ ಪ್ಯಾಲೆಸ್ತೇನಿಯನ್ನ ಬಲಿ ಪಡೆದು ಆರಂಭವಾಗಿರುವ ಅಮೆರಿಕನ್ ರಾಯಭಾರಿ ಕಚೇರಿ




JANASHAKTHI KANNADA VARA PATRIKE MAY 21-27, 2018 Price: Rs. 10/- Date of Publication: 18 MAY 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283


ಕರ್ನಾಟಕದಲ್ಲಿ ಸರಕಾರ ರಚನೆ: ಮೂಕ ಪ್ರೇಕ್ಷಕ.....



ವ್ಯಂಗ್ಯಚಿತ್ರ: ಸಂದೀಪ್ ಅದ್ವರ್ಯು, ಟೈಂಸ್ ಆಫ್ ಇಂಡಿಯ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಒಂದು ಸರಕಾರದ ಪ್ರತಿಷ್ಠಾಪನೆ– ವ್ಯಂಗ್ಯಚಿತ್ರಕಾರರು ಕಂಡಂತೆ

ಕರ್ನಾಟಕದಲ್ಲಿ ಬಿಜೆಪಿ ಸರಕಾರದ ಪ್ರತಿಷ್ಠಾಪನೆಯ ಲೆಕ್ಕಾಚಾರ ಮಾಡುತ್ತಿರುವ ರೀತಿಯನ್ನು ಮೇ 2014ರಿಂದ ನಿಯಮಗಳು ಮತ್ತು ನೀತಿಬದ್ಧ ರಾಜಕೀಯವನ್ನು ಬಹಿರಂಗವಾಗಿಯೇ ಉಲ್ಲಂಘಿಸುತ್ತಿರುವ ಪ್ರಕರಣಗಳ ಜತೆಗಿಟ್ಟು ನೋಡಬೇಕು ಎಂದಿದ್ದಾರೆ ಒಬ್ಬ ಹಿರಿಯ ರಾಜಕೀಯ ವೀಕ್ಷಕರು.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ನ್ಯೂಸ್



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಕರ್ನಾಟಕ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳ ಕಂಡು........

ಅಂಚಿಗೆ ಸರಿದವರು,ಮುಂಚೂಣಿಗೆ ಬರದವರು

110ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುನ್ನಡೆ ಕಾಯ್ದುಕೊಂಡು ಸರ್ಕಾರ ರಚನೆಯ ಸನಿಹಕ್ಕೆ ಬಂದಿದ್ದ ಬಿಜೆಪಿ, ಪೂರ್ಣ ಫಲಿತಾಂಶಗಳು ಪ್ರಕಟವಾಗುತ್ತಾ ಹೋಗುತ್ತಿದ್ದಂತೆ ಸರಳ ಬಹುಮತ ಇಲ್ಲದ ಸ್ಥಿತಿ ತಲುಪಿ ಈ ಹಕ್ಕು ಕಳೆದುಕೊಂಡಿದ್ದು ಚುನಾವಣಾ ರಾಜಕೀಯದ ತೀವ್ರ ಸ್ಪರ್ಧಾತ್ಮಕತೆಗೆ ದ್ಯೋತಕ. ಜನರ ಮನದಾಳವನ್ನು ತನ್ನದೇ ರೀತಿಯಲ್ಲಿ ಪ್ರದರ್ಶಿಸುವ ಪ್ರಜಾಪ್ರಭುತ್ವದ ಮಾಂತ್ರಿಕತೆ ಇದು. ಆದರೆ, ಈ ಸ್ಪರ್ಧಾತ್ಮಕತೆಯ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆ ಪಾಲ್ಗೊಳ್ಳಲು ಅವಕಾಶಗಳೇ ಇಲ್ಲ ಎನ್ನುವಷ್ಟು ಮಟ್ಟಿಗೆ ಈ ಕ್ಷೇತ್ರ ಪುರುಷಮಯವಾಗಿರುವುದು ಪ್ರಜಾಪ್ರಭುತ್ವದ ಅಣಕ.

ಈ ಬಾರಿ, 222 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಒಟ್ಟು 2626 ಅಭ್ಯರ್ಥಿಗಳ ಪೈಕಿ ಮಹಿಳೆಯರ ಪ್ರಮಾಣ ಕೇವಲ 209. ಎಂದರೆ ಕೇವಲ ಶೇ 8ಕ್ಕಿಂತ ಕಡಿಮೆ. ಈಗ ಸ್ಪರ್ಧಿಸಿದ್ದ ಈ ಕೆಲವೇ ಮಹಿಳೆಯರಲ್ಲಿ ಆರಿಸಿ ಬಂದ ಮಹಿಳೆಯರ ಸಂಖ್ಯೆಯೂ ಬೆರಳೆಣಿಕೆಯದು. ಒಟ್ಟು ಏಳು ಮಂದಿ ಮಹಿಳೆಯರು ಆಯ್ಕೆಯಾಗಿದ್ದಾರೆ. ಎಂದರೆ ಕೇವಲ ಶೇ 3.

14ನೇ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ನೇತೃತ್ವದ 34 ಸಚಿವರನ್ನೊಳಗೊಂಡಿದ್ದ ಸಂಪುಟದಲ್ಲಿ ಕೇವಲ ಇಬ್ಬರು ಸಚಿವೆಯರಿದ್ದರು. ಈ ಇಬ್ಬರು ಸಚಿವೆಯರೂ (ಉಮಾಶ್ರೀ ಹಾಗೂ ಎಂ.ಸಿ. ಮೋಹನಕುಮಾರಿ) ಈ ಚುನಾವಣೆಯಲ್ಲಿ ಪರಾಭವಗೊಂಡಿದ್ದಾರೆ......

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣವನ್ನು ಮಹಿಳೆಯರು ಗೆಲುವು ಸಾಧಿಸಬಲ್ಲಂತಹ ಸುರಕ್ಷಿತ ಕ್ಷೇತ್ರ ಎಂದು ಪರಿಗಣಿಸಲಾಗುತ್ತಿತ್ತು. 1986ರ ಉಪಚುನಾವಣೆಯ ನಂತರ 27 ವರ್ಷಗಳವರೆಗೆ ಶಾಸಕಿಯರೇ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಈ ಕ್ಷೇತ್ರದಲ್ಲಿ ಮಹಿಳಾ ಮತದಾರರು ಪುರುಷ ಮತದಾರರಿಗಿಂತ ಹೆಚ್ಚಿದ್ದಾರೆ. ಹೀಗಿದ್ದೂ ಈ ಬಾರಿ ಇಲ್ಲಿ ಮಹಿಳಾ ಅಭ್ಯರ್ಥಿ ಇರಲಿಲ್ಲ.

–ಸಿ.ಜಿ.ಮಂಜುಳ, ಪ್ರಜಾವಾಣಿ, ಮೇ 16

ಅತಂತ್ರ ಸರಕಾರದ ಹೆಜ್ಜೆಗಳು

...ರಾಜ್ಯದ ಈಗಿನ ತೀರ್ಪು ಅತಂತ್ರವಾಗಿದೆ. ಅದು ಕುದುರೆ ವ್ಯಾಪಾರಕ್ಕೆ ದಾರಿ ಮಾಡುತ್ತಿದೆ. ಪ್ರಜಾಪ್ರಭುತ್ವಾನುಸಾರ ಒಂದಾಗಿ ವೈರತ್ವ ದೂರ ನೂಕಿ ಆಳುತ್ತೇವೆಂದು ಹೊರಟಿರುವ ಪಕ್ಷಗಳೆರಡನ್ನು ಕುರಿತು ದೇಶದ ಪ್ರಧಾನಿಯು 'ಏನೇ ಆಗಲಿ ಇದಕ್ಕೆ ಬಿಡುವುದಿಲ್ಲ' ಎನ್ನುತ್ತಿದ್ದಾರೆ. ಯಥಾರೀತಿ ಪ್ರತಿಪಕ್ಷ ಕಾಂಗ್ರೆಸ್‌ಮುಕ್ತ ಮಾಡಲು ಹೊರಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಮುಕ್ತ ಮಾಡುವುದು ಸರ್ವಾಧಿಕಾರಿ ನೀತಿ ಎಂದು ಬೇರೆ ಹೇಳಬೇಕಾಗಿಲ್ಲ.

ಮತ ನೀಡುವ ಪ್ರಜೆಗಳ ಹೃದಯದೊಳಗೆ ನೀತಿ ಎಂಬ ಹಕ್ಕಿ ಗೂಡುಗಳಿವೆ. ಮತ ಕೇಳುವ ನಾಯಕರ ಎದೆಯೊಳಗೆ ಈ ಯಾವುದಕ್ಕೂ ಸ್ಥಳವಿಲ್ಲ. ಹಾಗಾಗಿ ಯಾವ ರಾಜಕೀಯ ಪಕ್ಷದ ಮೇಲೂ ಜನರಿಗೆ ನಂಬಿಕೆಯಿಲ್ಲ. ಈ ನಡುವೆ ಜಾತಿಯ ಲೆಕ್ಕಾಚಾರ ದೇಶದ ಮನು ಪಂಚಾಂಗವನ್ನು ಬಿಚ್ಚಿ ನೋಡುತ್ತಾ ಕೂಡಿ, ಕಳೆದು, ಗುಣಿಸಿ, ಭಾಗಿಸಿ ಚುನಾವಣಾ ತೀರ್ಪು ನೀಡಿಯಾಗಿದೆ. ಈ ಲೆಕ್ಕದ ಮೊತ್ತವು ಭ್ರಷ್ಟಾಚಾರದ ಗಂಟಿನಲ್ಲಿ ತೆಕ್ಕೆ ಹಾಕಿಕೊಂಡಿದೆ. ಗೆದ್ದ ಮೇಲೆ ರಾಜಕಾರಣಿಗಳದೆಲ್ಲ ಒಂದೇ ಜಾತಿ. ಅಧಿಕಾರ ಮತ್ತು ಹಣ ಹುಡುಕಾಟದ ಜಾತಿ. ಇದು ಪ್ರಜಾಪ್ರಭುತ್ವ ನೀತಿಗೆ ಎಚ್ಚರಿಕೆಯ ಗಂಟೆ. ಇದು, ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಪುನಃ ಆಧುನಿಕ ಅರಸರಿಗೆ ಒಪ್ಪಿಸಿ ಆಳಾಗುವ ಪರಿ. 'ಪ್ರಜಾಪ್ರಭುತ್ವ ಉಳಿದರೆ ನಾವೆಲ್ಲ ಖಂಡಿತವಾಗಿ ಅದರ ಪ್ರಯೋಜನವನ್ನು ಪಡೆಯುತ್ತೇವೆ. ಅದು ಸತ್ತರೆ ನಮ್ಮೆಲ್ಲರ ಸರ್ವನಾಶ ಖಂಡಿತ' ಎಂದು ಅಂಬೇಡ್ಕರ್ ಎಚ್ಚರಿಕೆ ನೀಡಿದ್ದಾರೆ....

–ಡಾ.ರಾಜೇಗೌಡ ಹೊಸಹಳ್ಳಿ, ಪ್ರಜಾವಾಣಿ, ಮೇ 18

ಚುನಾವಣಾ ಜಾನಪದ

ಈ ಸಲದ ಚುನಾವಣೆ ಮುಗಿದು, ಅತಂತ್ರ ಸ್ಥಿತಿ ನಿರ್ಮಾಣವಾದಾಗ ನೂರಾರು ಜೋಕುಗಳು ಹುಟ್ಟಿಕೊಂಡವು. ಮುಖ್ಯವಾದವುಗಳನ್ನು ಗಮನಿಸುವುದಾದರೆ, 'ಇಬ್ಬರ ಜಗಳ ಮೂರನೆಯವನಿಗೆ ಲಾಭ', 'ಗೆದ್ದವ ಸೋತ, ಸೋತವ ಗೆದ್ದ, ಗೆದ್ದೆತ್ತಿನ ಬಾಲ ಹಿಡಿದವ ಎದ್ದ' ಗಾದೆಗಳ ರೂಪಾಂತರಗಳು ಹುಟ್ಟಿದವು. ಓಡೋಡಿ ಇನ್ನೇನು ಗುರಿ ಮುಟ್ಟಲಿರುವ ಅಥ್ಲೀಟ್ ಒಬ್ಬರು ಇದ್ದಕ್ಕಿದ್ದಂತೆ ಮುಗ್ಗರಿಸಿ ಸೋತ ವಿಡಿಯೊ, ಸ್ವಿಚ್ ಬೋರ್ಡ್ ಮೇಲೆ ಕುಳಿತ ಎರಡು ಬೆಕ್ಕುಗಳ ಜೊತೆ ಸೇರಲು ಪ್ರಯಾಸಪಡುವ ಮೂರನೇ ಬೆಕ್ಕು ಹೇಗೋ ಏರಿ, ಅಲ್ಲಿದ್ದ ಎರಡೂ ಬೆಕ್ಕುಗಳನ್ನು ಕೆಳಕ್ಕುರುಳಿಸುವ ವಿಡಿಯೊ...

ಹೀಗೆ ಜಾನಪದವನ್ನು ಸಂಗ್ರಹಿಸಿ ವಿಶ್ಲೇಷಿಸಿದರೆ ಕುತೂಹಲಕಾರಿ ಸಂಗತಿಗಳು ಗಮನಸೆಳೆಯುತ್ತವೆ. ಜನರ ನಂಬಿಕೆಗಳನ್ನು ಬಳಸಿಯೇ ಚುನಾಯಿತ ಪ್ರತಿನಿಧಿಗಳು ಹೇಗೆ ಪ್ರಜಾಪ್ರಭುತ್ವದ ಆಶಯಗಳನ್ನು ಮಣ್ಣುಮುಕ್ಕಿಸುತ್ತಾರೆ ಎನ್ನುವುದೂ ಅರಿವಾಗುತ್ತದೆ. ....

–ಅರುಣ್ ಜೋಳದಕೂಡ್ಲಿಗಿ, ಪ್ರಜಾವಾಣಿ, ಮೇ 17

ಪ್ರಜಾಪ್ರಭುತ್ವ–ವಿರೋಧಿ ಕ್ರಮಕ್ಕೆ ರಾಜ್ಯಾದ್ಯಂತ ಪ್ರತಿಭಟನೆ

ಮೋದಿಯವರು ನೇಮಿಸಿದ ರಾಜ್ಯಪಾಲರ ಸಂವಿಧಾನ ಬಾಹಿರ ಕೃತ್ಯದಿಂದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಯಡಿಯೂರಪ್ಪನವರಿಗೆ ಯಾವುದೆ ರೀತಿಯಲ್ಲಿ ಬಹುಮತದ ಸಂಖ್ಯಾಬಲವಿಲ್ಲದಿದ್ದರೂ, ಸದನದಲ್ಲಿ ಬಹುಮತವನ್ನು ಸಾಬೀತು ಪಡಿಸಲು ರಾಜ್ಯಪಾಲರು 15 ದಿನಗಳ ಸಮಯಾವಕಾಶವನ್ನು ನೀಡಿರುವುದನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ.





ಬೆಂಗಳೂರಿನಲ್ಲಿ ಗಾಂಧೀಜಿ ಪ್ರತಿಮೆಯ ಎದುರು ಜೆಡಿ(ಎಸ್) ಮತ್ತು ಕಾಂಗ್ರೆಸಿನ ಹೊಸದಾಗಿ ಚುನಾಯಿತರಾದ ಶಾಸಕರು ಜಂಟಿಯಾಗಿ ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ಹಾಸನ ಜಿಲ್ಲಾ ಸಂಘಟನಾ ಸಮಿತಿ ಹಾಸನದ ಹೇಮಾವತಿ ಪ್ರತಿಮೆಯ ಮುಂಬಾಗದಲ್ಲಿ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ನ ಸ್ಥಳಿಯ ಸಮಿತಿ ಕಾರ್ಯದರ್ಶಿ ಎಚ್.ಆರ್.ನವೀನ್ ಕುಮಾರ್, ಹಿರಿಯ ದಲಿತ ಮುಖಂಡರಾದ ಎಚ್.ಕೆ.ಸಂದೇಶ್, ಟಿಪ್ಪು ಸಂಘರ್ಷ ಸಮಿತಿಯ ಮುಭಾಷಿರ್ ಅಹಮದ್, ಪೃಥ್ವಿ, ರಾಘವೇಂದ್ರ, ಸತ್ಯನಾರಾಯಣ, ಅರವಿಂದ್ ಮುಂತಾದವರಿದ್ದರು.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**